ಸಂಪುಟ: 14 Volume | ಸಂಚಿಕೆ: 48 Issue | ಪುಟಗಳು 08 Pages | ಸೋಮವಾರ 25 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ


**ಬೆಳಗು**

ಧರ್ಮ ಎನ್ನುವುದು ಲೋಕದ ಹಿತಕ್ಕಾಗಿಯೇ ಹೊರತು; ಲೋಕ ಧರ್ಮದ ಹಿತಕ್ಕಾಗಿ ಅಲ್ಲ.

–ಡಿ.ವಿ.ಜಿ

## ಡೀಸೆಲ್–ಪೆಟ್ರೋಲ್ ಕಾಳಸಂತೆಯಲ್ಲಿ ಮಾರಾಟ ಸಲ್ಲ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಇತ್ತೀಚಿನ ದಿನಗಳಲ್ಲಿ ಕೆಲವೆಡೆ ಡೀಸೆಲ್ ಹಾಗೂ ಪೆಟ್ರೋಲ್ ಅನ್ನು ಕಾಳಸಂತೆಯಲ್ಲಿ ಹೆಚ್ಚುವರಿ ದರಕ್ಕೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇದು ಸಾರ್ವಜನಿಕರಲ್ಲಿ ಆತಂಕ ಮೂಡಿಸುವುದರ ಜೊತೆಗೆ ಸಾಮಾನ್ಯ ಜನರ ಆರ್ಥಿಕ ಹೊರೆ ಹೆಚ್ಚಿಸುವ ಕೆಲಸ ಮಾಡುತ್ತಿದೆ. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆ ಇಂತಹ ಅಕ್ರಮ ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ಕಡಿವಾಣ ಹಾಕುವುದು ಅತ್ಯಗತ್ಯವಾಗಿದೆ.

ಪೆಟ್ರೋಲ್ ಹಾಗೂ ಡೀಸೆಲ್ ಜನಜೀವನದ ಅವಿಭಾಜ್ಯ ಭಾಗಗಳಾಗಿವೆ. ರೈತರು, ವಾಹನ ಚಾಲಕರು, ವ್ಯಾಪಾರಸ್ಥರು ಹಾಗೂ ಸಾಮಾನ್ಯ ನಾಗರಿಕರು ಇಂಧನದ ಮೇಲೆಯೇ ಅವಲಂಬಿತರಾಗಿದ್ದಾರೆ. ಆದರೆ ಕೆಲವರು ಕೃತಕ ಕೊರತೆ ಸೃಷ್ಟಿಸಿ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಕಾಳಸಂತೆ ನಡೆಸುತ್ತಿರುವುದು ಖಂಡನೀಯ. ಇದರಿಂದ ನಿಜವಾದ ಗ್ರಾಹಕರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಸರ್ಕಾರ ಇಂಧನ ಪಂಪ್‌ಗಳ ಮೇಲೆ ನಿಗಾ ವಹಿಸಿ ಸಂಗ್ರಹ ಹಾಗೂ ಮಾರಾಟದ ಬಗ್ಗೆ ನಿರಂತರ ಪರಿಶೀಲನೆ ನಡೆಸಬೇಕು. ಅಕ್ರಮವಾಗಿ ಡೀಸೆಲ್–ಪೆಟ್ರೋಲ್ ಸಂಗ್ರಹಿಸಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದರೆ ವಿಶೇಷ ದಾಳಿ ನಡೆಸಿ ಸಾರ್ವಜನಿಕರಿಗೆ ನ್ಯಾಯ ಒದಗಿಸಬೇಕು.

ಪೆಟ್ರೋಲ್ ಬಂಕ್ ಮಾಲೀಕರೂ ಸಹ ಸಾಮಾಜಿಕ ಜವಾಬ್ದಾರಿ ಅರಿತು ನಿಯಮಾನುಸಾರ ಕಾರ್ಯನಿರ್ವಹಿಸಬೇಕು. ಗ್ರಾಹಕರಿಗೆ ಸರಿಯಾದ ಪ್ರಮಾಣದಲ್ಲಿ ಹಾಗೂ ಸರ್ಕಾರ ನಿಗದಿಪಡಿಸಿದ ದರದಲ್ಲೇ ಇಂಧನ ನೀಡಬೇಕು. ಯಾವುದೇ ರೀತಿಯ ಅಕ್ರಮ ಕಂಡುಬಂದರೆ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವ ಜಾಗೃತಿ ಬೆಳೆಸಿಕೊಳ್ಳಬೇಕು.

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಇಂಧನದ ಪಾತ್ರ ಬಹಳ ಮಹತ್ವದ್ದಾಗಿದೆ. ಆದ್ದರಿಂದ ಡೀಸೆಲ್ ಮತ್ತು ಪೆಟ್ರೋಲ್ ಕಾಳಸಂತೆಯಲ್ಲಿ ಮಾರಾಟವಾಗದಂತೆ ಸರ್ಕಾರ, ಅಧಿಕಾರಿಗಳು ಹಾಗೂ ಸಾರ್ವಜನಿಕರು ಒಟ್ಟಾಗಿ ಜಾಗರೂಕರಾಗಿ ಕೆಲಸ ಮಾಡಬೇಕಾಗಿದೆ.

## ಪಶು ವಧೆ ತಡೆಯಲು ಆಗ್ರಹ



**ಗಂಗಾವತಿ:** ಇತ್ತೀಚೆಗೆ ಕೊಪ್ಪಳ ಜಿಲ್ಲಾಡಳಿತವು ಸಾರ್ವಜನಿಕ ಸ್ವಾಸ್ಥ್ಯ ಹಾಗೂ ಶಾಂತಿ ಸುವ್ಯವಸ್ಥೆಯ ಹಿನ್ನೆಲೆಯಲ್ಲಿ ನಮ್ಮ ಜಿಲ್ಲೆಯ ಶ್ರೀ ಹುಲಿಗೆಮ್ಮ ಜಾತ್ರೆಯ ಸಂದರ್ಭದಲ್ಲಿ ಪ್ರಾಣಿ ವಧೆ ತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಯಶಸ್ವಿಯಾಗಿದ್ದು ಹೆಮ್ಮೆಯ ವಿಷಯವಾಗಿದೆ. ಆದರಂತೆ ಇದೇ ಮಾಹೆಯ 28 ರಂದು ಬಕ್ರೀದ್ ಹಬ್ಬದ ಆಚರಣೆ ಮಾಡಲಾಗುತ್ತಿದ್ದು, ಈ ಆಚರಣೆಯಲ್ಲಿಯೂ ಪ್ರಾಣಿ ವಧೆ ನಿಷೇಧಗೊಳಿಸಬೇಕೆಂದು ಹಿಂದೂ ಜಾಗರಣ ವೇದಿಕೆ ಆಗ್ರಹಿಸಿದೆ ಎಂದು ವೇದಿಕೆಯ ರಾಜ್ಯ ಸಂಚಾಲಕರಾದ ವಿರೇಶ ಬಿ. ಹಂಚಿನಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನಂದಿಬೆಟ್ಟ ರಸ್ತೆಯ ಖಾಸಗಿ ಹೋಟೆಲ್ ನಲ್ಲಿ ಆಯೋಜಿಸಿದ್ದ "ಕಾಂಗ್ರೆಸ್ ನಡೆ–ಮತ ರಕ್ಷಣೆಯ ಕಡೆ" ಜಾಗೃತ ಕಾರ್ಯಗಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಂಋಅಅ ಮುಖಂಡರೂ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಸಂಪುಟದ ಎಲ್ಲಾ ಸಚಿವರು, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರುಗಳು, ಪಕ್ಷದ ಹಿರಿಯ ಮುಖಂಡರುಗಳು ಹಾಗೂ ಆಹ್ವಾನಿತ ನಾಯಕರುಗಳು ಉಪಸ್ಥಿತರಿದ್ದರು.

## ಬಿಜೆಪಿಯ ನಡೆ SIR ಕಡೆ

### ಕಾರ್ಯಕರ್ತರ ಕುತೂಹಲ ಕೆರಳಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಬೆಂಗಳೂರು ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಬೆಂಗಳೂರು ಭೇಟಿ ಹತ್ತು ಹಲವು ಆಶೋತ್ತರಗಳನನು ಹುಟ್ಟುಹಾಕಿದೆ. ವಿಶೇಷವಾಗಿ ರಾಜ್ಯ ಬಿಜೆಪಿ ಪಕ್ಷದಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಗೆಲುವಿನ ನಂತರ ಅವರು ರಾಜ್ಯಕ್ಕೆ ಭೇಟಿ ನೀಡುತ್ತಿರುವುದು ವಿಶೇಷ ಮಹತ್ವ ಪಡೆದಿದೆ. ಆ ಗೆಲುವಿಗೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಶೀಲನೆ (SIR) ಕಾರಣವಾಗಿದೆ ಎಂದು ವಿರೋಧಿಗಳು ಟೀಕಿಸಿದ್ದರು. ಇಂದು ಅವರು ಪಕ್ಷದ SIR ವಿಭಾಗದೊಂದಿಗೆ ಕೂಡ ಚರ್ಚೆ ನಡೆಸಿದ್ದಾರೆ.

**ಸಂಘಟನಾತ್ಮಕ ಚಟುವಟಿಕೆ ಚುರುಕು:** ರಾಜ್ಯದ ಪ್ರಮುಖ ನಾಯಕರೊಂದಿಗೆ ಸಭೆ ನಡೆಸಿ, ಪಕ್ಷದ ಸಂಘಟನಾತಕ ಚಟುವಟಿಕೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಮಹತ್ವದ ನಿರ್ದೇಶನಗಳನ್ನು ನಿತಿನ್ ನೀಡಿರುವುದು ಕುತೂಹಲ ಕೆರಳಿಸಿದೆ. ಪಕ್ಷದ ರಾಜ್ಯ ಕಚೇರಿಯಲ್ಲಿ ಈ ನಿರ್ಣಾಯಕ ಸಭೆ ನಡೆದಿದೆ.

**ಶಿಸ್ತು ಪಾಲನೆಗೆ ಸೂಚನೆ:** ಸಂಘಟನೆಯಲ್ಲಿ ಶಿಸ್ತು ಮತ್ತು ಬದ್ಧತೆ ಅತ್ಯಗತ್ಯತೆಯನು ಪ್ರತಿಪಾದಿಸಿದ್ದಾರೆ. ರಾಜ್ಯ ಘಟಕದ ನಾಯಕರಿಗೆ ಪಕ್ಷದ ತಳಮಟ್ಟದ ಬಲವರ್ಧನೆಗೆ ಒತ್ತು ನೀಡಬೇಕು. ಪಕ್ಷದ ಚೌಕಟ್ಟಿನೊಳಗೆ ಪ್ರತಿಯೊಬ್ಬ ಕಾರ್ಯಕರ್ತರೂ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದ್ದಾರೆ.



### ಮನ್ವಯತೆಯ ಪಾಠ

ಭವಿಷ್ಯದಲ್ಲಿ ಪಕ್ಷದ ಸಂಘಟನಾತಕ ಚಟುವಟಿಕೆಗಳನ್ನು ವಿಸ್ತರಿಸಲು ನಾಯಕರಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಲಾಗಿದೆ. ಸಾಮೂಹಿಕ ನಾಯಕತ್ವದಲ್ಲಿ ಕಾರ್ಯನಿರ್ವಹಿಸಬೇಕು. ರಾಜ್ಯ, ರಾಷ್ಟ್ರೀಯ ಮಟ್ಟದ ನಾಯಕರ ನಡುವೆ ಉತ್ತಮ ಸಮನ್ವಯತೆಯನ್ನು ಕಾಪಾಡಿಕೊಂಡು, ಪಕ್ಷದ ಸಿದ್ಧಾಂತಗಳನ್ನು ತಳಮಟ್ಟದವರೆಗೆ ಕೊಂಡೊಯ್ಯಲು ಒತ್ತು ನೀಡಬೇಕು ಎಂದು ನಿತಿನ್ ಆಶಿಸಿದ್ದಾರೆ.

### ಕಚೇರಿಯಲ್ಲಿರಬೇಡಿ..!

ಸಾರ್ವಜನಿಕವಾಗಿ ಪಕ್ಷದ ಘನತೆಗೆ ಧಕ್ಕೆಯಾಗುವ ಯಾವುದೇ ಹೇಳಿಕೆ ಅಥವಾ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಕೇವಲ ಕಚೇರಿಗಳಲ್ಲಿ ಕುಳಿತು ಕೆಲಸ ಮಾಡುವುದರ ಬದಲು, ಪ್ರತಿಯೊಬ್ಬ ಪದಾಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕ್ಷೇತ್ರಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದು ನಿತಿನ್ ತಿಳಿಸಿದ್ದಾರೆ.

ಕರ್ನಾಟಕದ ಕಾಂಗ್ರೆಸ್ ಸರಕಾರವು ಇಲ್ಲಿನ ಜನರಿಗೆ ಕಳೆದ 3 ವರ್ಷಗಳಲ್ಲಿ ವಂಚಿಸುವ ಕೆಲಸ ಮಾಡಿದೆ. ಇಲ್ಲಿನ ಜನರಿಗೆ ವಿಶ್ವಾಸದ್ರೋಹ ಮಾಡಿದ್ದಾರೆ. ಕಾಂಗ್ರೆಸ್ ಒಳಜಗಳದಿಂದ ಜನಹಿತದ ಕೆಲಸಗಳನ್ನು ಕಡೆಗಣಿಸಿದ್ದಾರೆ. ಸರಕಾರ ನಡೆಸುತ್ತಿರುವ ನಾಯಕರು ಸರಕಾರವನ್ನು ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ.

–ನಿತಿನ್ ನವೀನ್
ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

### ನಿತಿನ್ ಭೇಟಿ ವಿಶೇಷ?

ನಿತಿನ್ ನಬಿನ್ ಅವರ ಈ ಭೇಟಿಯು ಪಕ್ಷದ ಸಂಘಟನೆಗೆ ಹೊಸ ಹುರುಪು ತುಂಬಿದೆ. ವಿಶೇಷವಾಗಿ ಹಿರಿಯ ನಾಯಕ ಯಡಿಯೂರಪ್ಪ ಅವರೊಂದಿಗಿನ ಅವರ ಉಪಾಹಾರ ಸಭೆಯು, ಪಕ್ಷದ ಹಿರಿಯ ಮತ್ತು ಕಿರಿಯ ನಾಯಕರ ನಡುವಿನ ಸಮನ್ವಯದ ಸಂಕೇತವಾಗಿದೆ ಎಂದು ಬಿಜಪಿ ಪಕ್ಷದ ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ.

### ರಾಜ್ಯಪಾಲರ ಭೇಟಿ ಆದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್



**ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಇಂದು ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರನ್ನು ರಾಜಭವನದಲ್ಲಿ ಭೇಟಿಯಾದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಶಾಸಕ ಮಹೇಶ್ ಟೆಂಗಿನಕಾಯಿ, ರಾಜ್ಯ ಮಾಧ್ಯಮ ಸಹ–ಸಂಚಾಲಕ ಪ್ರಶಾಂತ್ ಕೆಡಂಜಿ ಸೇರಿ ಪ್ರಮುಖರು ಉಪಸ್ಥಿತರಿದ್ದರು.

## ಸಿ.ಎಚ್.ನಿಖಿಲ್ ಸ್ಮರಣಾರ್ಥ ಸಾಮಾಜಿಕ ಕಾರ್ಯ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಇತ್ತೀಚಿನ ದಿನಗಳಲ್ಲಿ ಉದ್ಯೋಗಸ್ಥ ಯುವಜನರು ಪತ್ರಕರ್ತರು ವಕೀಲರು ಮತ್ತು ಸಿನಿಮಾ ಧಾರವಾಹಿ ಕ್ಷೇತ್ರಗಳಲ್ಲಿ ಬರವಣಿಗೆ ನಿರ್ದೇಶನ ಮತ್ತಿತರ ಕೆಲಸ ಮಾಡುವವರಿಗೆ ಕೆಲಸದ ಒತ್ತಡ ಮಾನಸಿಕ ಖಿನ್ನತೆ ಪರಿಣಾಮವಾಗಿ ಹೃದಯ ಸ್ತಂಭನ ಮತ್ತಿತರ ಕಾಯಿಲೆಗಳ ಪರಿಣಾಮ ಸಾವು ಸಹಜವಾಗಿದೆ. ತಾಲೂಕಿನ ಬಸಾಪಟ್ಟಣ ಗ್ರಾಮದ ನಾನಿ ಪ್ರಸಾದ್ ಇವರ ಮಗ 26 ವರ್ಷದ ಸಿ.ಎಚ್.ನಿಖಿಲ್ ಸುಬ್ಬಾರಾವ್ ಸಹ ಎಂದಿನಂತೆ ತನ್ನ ಕಚೇರಿಯ ಕೆಲಸ ಮುಗಿಸಿ ತಾನಿರುವ ರೂಮ್ ಗೆ ಬಂದು ಕುಳಿತ್ತಿದ್ದಾಗ ಏಕಾಏಕಿ ಹೃದಯ ನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದಾನೆ ಕೂಡಲೇ ಗೆಳೆಯರು ಆಗಮಿಸಿ ಆಸ್ಪತ್ರೆಗೆ ದಾಖಲಿಸುವ ಮೊದಲೇ ಸಿ.ಎಚ್.ನಿಖಿಲ್ ಸುಬ್ಬಾರಾವ್ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಇನ್ನೂ 26 ವರ್ಷದ ಯುವ ಉದ್ಯೋಗಿ ಕೆಲಸದ ಒತ್ತಡ ಒಂದು ಕಡೆಯಾದರೆ, ಸಾಧನೆ ಮಾಡುವ ಆತುರ ಹಾಗೂ ನಿದ್ರೆಯ ಕೊರತೆಯಿಂದ ಹೃದಯ ಸಂಬಂಧಿ ಕಾಯಿಲೆಗೆ ಕಾರಣ ಎಂದು ಈಗಾಗಲೇ ಹಲವಾರು ವೈದ್ಯರು ಮನವರಿಕೆ ಮಾಡಿದರೂ ನಮ್ಮ ಯುವ ಜನಾಂಗ ಇನ್ನೂ ಅರ್ಥ



ಮಾಡಿಕೊಂಡಿಲ್ಲ. ತಾಲೂಕಿನ ಬಸಾಪಟ್ಟಣ ಗ್ರಾಮದ ಸಿ.ಎಚ್.ನಿಖಿಲ್ ಸಾವಿನಿಂದ ಅವರ ಇಡೀ ಕುಟುಂಬ ಹಾಗೂ ಆಪ್ತರು ದಿಕ್ಕು ತೋಚದಂತಾಗಿದ್ದಾರೆ. ಮೇ 12 ರಂದು ಸಿ.ಎಚ್.ನಿಖಿಲ್ ಸಾವನ್ನಪ್ಪಿದ್ದು ಇದೀಗ ಬಸಾಪಟ್ಟಣದ ಅವರ ಮನೆ ಸುತ್ತಮುತ್ತಲಿನ ಬಂಧು ಮಿತ್ರರು, ಗೆಳೆಯರು ಹಾಗೂ ಕುಟುಂಬದ ವರು ಸಿ.ಎಚ್.ನಿಖಿಲ್ ಶ್ರದ್ಧಾಂಜಲಿ ಕಾರ್ಯಕ್ರಮದ ನಿಮಿತ್ತ ಹಲವು ಸಾಮಾಜಿಕ ಕಾರ್ಯಕ್ರಮಗಳ ಮೂಲಕ ನಿಖಿಲ್ ಬದುಕಿದ್ದಾಗ ಊರಿಗೆ ಆಗಮಿಸಿದ ಸಂದರ್ಭದಲ್ಲಿ ಗ್ರಾಮದ ಕೋದಂಡ ರಾಮಾ ದೇವಸ್ಥಾನದ ಹತ್ತಿರ ಸ್ವಚ್ಛತಾ ಕಾರ್ಯ, ಹಬ್ಬ ಹರಿದಿನಗಳಲ್ಲಿ ಸರ್ವರನ್ನು ಕರೆದು ಅನ್ನಪ್ರಸಾದದ ಸೇವೆ ಮಾಡಿಸುತ್ತಿದ್ದರು.

ನಿಖಿಲ್ ಆಪ್ತರು ಸ್ವಚ್ಛತಾ ಕಾರ್ಯ ಮಾಡಿ ದೇವಾಲಯಕ್ಕೆ ಆಗಮಿಸುವ ಭಕ್ತರು ಕುಳಿತು ಕೊಳ್ಳಲು ಬೆಂಚ್ ಗಳನ್ನು ದಾನವಾಗಿ ನೀಡಿ ಸಾರ್ಥಕತೆ ಮೆರೆದಿದ್ದಾರೆ. ವಿದ್ಯಾಭ್ಯಾಸ ಮತ್ತು ಉದ್ಯೋಗ ಮಾಡುವ ಯುವ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಇಡೀ ಕುಟುಂಬವನ್ನು ಭವಿಷ್ಯದ ದೃಷ್ಟಿಯಿಂದ ಚೆನ್ನಾಗಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಬೇಕಿದೆ.

## ಕೆಸರು ಚರಂಡಿ ರಸ್ತೆ, ಹಾವು ಚೇಳುಗಳ ನಡುವೆ ಬದುಕಿನ ಅವಸ್ಥೆ..!

• ಮುಸ್ತಫಾ, ಲಿಂಗಸುಗೂರು

ತಾಲೂಕಿನ ಹೊನ್ನಾಳಿ ಗ್ರಾಮದ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗುಡದನಾಳ, ಹೊನ್ನಾಳಿ ಪಂಚಾಯತ್ ಹೊನ್ನಾಳಿ ಹಾಗೂ ಯರಡೋಣ ಗ್ರಾಮಗಳಲ್ಲಿ ಮೂಲಬೂತ ಸೌಲಭ್ಯಗಳೇ ಕಣ್ಮರೆಯಾಗಿವೆ. ಪ್ರತಿಯೊಂದು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಐದರಿಂದ ಆರು ಸಾವಿರ ರೂ.ವರೆಗೆ ಜನ ಸಂಖ್ಯೆ ಇದೆ. ಪ್ರವತಿವರ್ಷ ಲಕ್ಷಾಂತರ ರೂ.ಗಳ ತೆರಿಗಿಯೂ ಸಂಗ್ರಹವಾಗುತ್ತಿದೆ. ಆದರೆ ರಸ್ತೆ, ಕರೆಂಟ್, ಕುಡಿಯುವ ನೀರು ಸೇರಿದಂತೆ ಯಾವುದೇ ಮೂಲಭೂತ ಸೌಲಭ್ಯ ಮಾತ್ರ ಕೇಳಬೇಡಿ ಎಂದು ಮೂರು ಗ್ರಾಮಪಂಚಾಯಿತಿ ಜನರು ದೂರುತ್ತಿದ್ದಾರೆ.

**ಪಂಚಾಯಿತಿ ಫಜೀತಿ**

**ಪ್ರತಿಯೊಂದು ರಸ್ತೆಯಲ್ಲೂ ಕೆಸರು ಮಯ:** ಹೇಳಿ ಕೇಳಿ ಇದು ಬಯಲಸೀಮೆ. ನೀರಿನ ಮೂಲಗಳೇ ಇಲ್ಲಿ ಮರೀಚಿಕೆ. ಮುಂಗಾರು ಪೂರ್ವ ಅಥವಾ ನಂತರ ಬರುವ ಅಪರೂಪದ ಮಳೆಗೆ ಪ್ರತಿಯೊಂದು ಹಾದಿ ಬೀದಿಯೂ ಕೆಸರುಮಯ..! ರಾತ್ರಿವೇಳೆ ಹಾವು ಚೇಳುಗಳ ಆರ್ಭಟವನ್ನು ಯಾರಮುಂದೆ ಹೇಳಬೇಕು ಎಂದು ಜನತೆ ಅಲವತ್ತುಕೊಳ್ಳುತ್ತಿದ್ದಾರೆ.

**ವಿಪರೀತ ಸೊಳ್ಳೆಗಳ ಕಾಟ:** ಗುಡದನಾಳ, ಹೊನ್ನಾಳಿ ಹಾಗೂ ಯರಡೋಣ ಗ್ರಾಮಗಳಲ್ಲಿ ಇರುವ ಶಾಲೆಗಳ ಮುಂದೆ ಚರಂಡಿ ಶೇಖರಣೆ–ಯಾಗಿ ಕರೆಯಂತಿರುತ್ತದೆ. ನೀರು ಸರಾಗವಾಗಿ ಹರಿಯದೆ ಸೊಳ್ಳೆಗಳ ತಾಣವಾಗಿ ಮಾರ್ಪಟ್ಟದ್ದು, ಇದರಿಂದ ಸಾಂಕ್ರಮಿಕ ಕಾಯಿಲೆ ಹರಡುವ ಭೀತಿ ಎದುರಾಗಿದೆ. ಸೊಳ್ಳೆಗಳ ಕಾಟದಿಂದ ಸಣ್ಣ ಮಕ್ಕಳು ಶಾಲೆಯಲ್ಲಿ ಕುಳಿತು ಪಾಠ ಕೇಳಲು ಕಿರಿಕಿರಿ ಅನುಭವಿಸುವಂತಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆ ಸರಿಪಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

### ಶಾಲೆ ಎದುರೇ ಚರಂಡಿ ನೀರು, ಸೊಳ್ಳೆ ಕಾಟ..!

ಗುಡದನಾಳ ಶಾಲೆ ಎದುರು ರಸ್ತೆ ಕೆಸರುಗದ್ದೆಯಂತಾಗಿದೆ. ಒಂದು ಸಣ್ಣ ಮಳೆ ಬಂದರೂ ಶಾಲೆಯ ಮಕ್ಕಳು ಓಡಾಡಲು ತುಂಬಾ ಕಷ್ಟಪಡಬೇಕಾಗುತ್ತಿದೆ. ಊರಿನ ಎಲ್ಲಾ ಮನೆಗಳ ಚರಂಡಿ ನೀರು ಶಾಲೆಯ ಎದರು ರಸ್ತೆಗೆ ಬಂದು ಕೊಳೆ ನೀರು ನಿಲ್ಲುತ್ತದೆ. ಆದರೆ ಪುಟಾಣಿ ಮಕ್ಕಳು ಕೆಸರಿನಲ್ಲಿಯೇ ಶಾಲೆ ಸೇರಬೇಕಾದ ದುಸ್ಥಿತಿ ಒದಗಿ ಬಂದಿದೆ ಇದನ್ನು ಸರಿಪಡಿಸಬೇಕಾದೋರು ಯಾರು? ಅಧಿಕಾರಿಗಳಿಗೆ ದೂರು ನೀಡಿದರೆ ನೋಡೋಣ ಎನ್ನುತ್ತಾರೆ. ಶಾಸಕರು ಇತ್ತ ಸುಳಿಯುವುದೇ ಇಲ್ಲ ಯಾರಿಗೆ ಹೇಳೋಣ ನಮ್ಮ ನೋವು ಎನ್ನುತ್ತಾರೆ ಗ್ರಾಮಸ್ಥರು.





### ಶುದ್ಧವಲ್ಲ, ಕಲುಷಿತ ಕೆರೆ ನೀರೇ ಗತಿ

ಹೊನ್ನಳ್ಳಿ, ಯಾರಡೋಣ, ಗುಡದನಾಳ, ಕುಪ್ಪಿಗುಡ್ಡ, ಸರ್ಜಾಪುರ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಗಾಗಿ ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆ ರೂಪಿಸಲಾಗಿದೆ. ಇದರ ಪ್ರಯೋಜನ ಮಾತ್ರ ಶೂನ್ಯ. ನಲ್ಲಿಗಳಿದ್ದರೂ ನೀರು ಬರದು. ಮಳೆ ಬಂದಾಗ ಸಂಗ್ರಹವಾಗುವ ಕೆರೆಯ ನೇರನ್ನೇ ಸೋಸಿ ಕುಡಿಯಬೇಕು ಸಾರ್ ಎನ್ನುತ್ತಾರೆ ಗ್ರಾಮಸ್ಥರು. ಈ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿದರೂ ಅವರು ಡೋಂಟ್ ಕೇರ್. ಚುನಾವಣೆಗೆ ಮಾತ್ರ ಬರುವ ಶಾಸಕರೂ ಇತ್ತ ಸುಳಿಯಲ್ಲ ಎನ್ನುತ್ತಾರೆ ಜನತೆ.

**ಇದು ನಮ್ಮ ಪ್ರಜಾ ಪ್ರಭುತ್ವವೋ ಪರಾತಂತ್ರ ರಾಜ್ಯವೋ..?**



### ಕರೆ ಸ್ವೀಕರಿಸದ ಶಾಸಕರು

ಬಿಜೆಪಿ ಶಾಸಕರಾದ ಮಾನಪ್ಪ ವಜ್ಜಲ್ ಅವರನ್ನು ಗ್ರಾಮಗಳ ದಯನೀಯ ಅವಸ್ಥೆ ಬಗ್ಗೆ ಕೇಳಲು ಕರೆ ಮಾಡಿದರೆ ಅವರು ಕರೆಯನ್ನೇ ಸ್ವೀಕರಿಸುವುದೇ ಇಲ್ಲ. ಪತ್ರಕರ್ತರ ಕರೆಯನ್ನೇ ಸ್ವೀಕರಿಸಿದವರು ಜನರ ಸಮಸ್ಯೆ ಆಲಿಸ್ತಾರೇನ್ ಸ್ವಾಮಿ ಎಂದು ಸಾರ್ವಜನಿಕರು ನಮ್ಮನ್ನೇ ಪ್ರಶ್ನಿಸುತ್ತಾರೆ. ಪಿಡಿಒ ಅಧಿಕಾರಿಗಳ ಮೊಬೈಲ್ ಸದಾ ಸ್ವಿಚ್ ಆಫ್ ಯಾರಿಗೇಳೋಣ ನಮ್ ಪ್ರೋಬ್ಲಮ್ ಎಂದು ಸ್ಥಳೀಯರೊಬ್ಬರು ಸೋಷಿಯಲ್ ಮೀಡಿಯಾದಲ್ಲಿ ಸಮಸ್ಯೆಗಳ ಬಗ್ಗಟ ಶೂಟ್ ಮಾಡಿ ಹಾಕಿದರೂ ಪ್ರಯೋಜನ ಶೂನ್ಯ..!

**ಎಬೋಲಾ ತಡೆಗೆ ರಾಜ್ಯ ಸರ್ಕಾರ ಸಜ್ಜು: ಆಫ್ರಿಕಾ ದೇಶಗಳಿಂದ ಬರುವವರ ಮೇಲೆ ನಿಗಾ, ಆತಂಕ ಬೇಡ– ವದಂತಿಗಳಿಗೆ ಕಿವಿಗೊಡಬೇಡಿ; ಸಚಿವ ದಿನೇಶ್ ಗುಂಡೂರಾವ್**

# ಸರ್ಕಾರಿ ಕಚೇರಿಗಳಲ್ಲಿ ಜನರ ಅರ್ಜಿಗಳಿಗೆ ಮನ್ನಣೆ ಸಿಗಲಿ

ಜನತಂತ್ರ ವ್ಯವಸ್ಥೆಯಲ್ಲಿ ಸರ್ಕಾರಿ ಕಚೇರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೇಂದ್ರಗಳಾಗಿರಬೇಕು. ಆದರೆ ಇಂದು ಅನೇಕ ಸಾರ್ವಜನಿಕರು ತಮ್ಮ ಅರ್ಜಿಗಳು, ಮನವಿಗಳು ಹಾಗೂ ಬೇಡಿಕೆಗಳಿಗೆ ಸರಿಯಾದ ಸ್ಪಂದನೆ ಸಿಗುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ವಿಶೇಷವಾಗಿ ಹುಮನಾಬಾದ್ ಪಟ್ಟಣದಲ್ಲಿ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಜನರು ದಿನಗಟ್ಟಲೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುಃಖಕರ ಸಂಗತಿ.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೊ: 9845028349



ವೃದ್ಧಾಪ್ಯ ವೇತನ, ಪಿಂಚಣಿ, ಜಮೀನು ದಾಖಲೆ, ವಿದ್ಯುತ್ ಸಮಸ್ಯೆ, ನೀರಿನ ಸಂಪರ್ಕ, ವಾಸಸ್ಥಳ ಯೋಜನೆ, ರೈತರ ಅರ್ಜಿಗಳು ಸೇರಿದಂತೆ ಅನೇಕ ವಿಷಯಗಳಿಗೆ ಸಾರ್ವಜನಿಕರು ಕಚೇರಿಗಳ ಮೆಟ್ಟಿಲೇರುತ್ತಿದ್ದಾರೆ. ಆದರೆ ಕೆಲವೊಮ್ಮೆ ಅಧಿಕಾರಿಗಳ ನಿರ್ಲಕ್ಷ್ಯ, ವಿಳಂಬ ಧೋರಣೆ ಹಾಗೂ ಮಧ್ಯವರ್ತಿಗಳ ಹಾವಳಿಯಿಂದ ಜನರು ಸಂಕಷ್ಟ ಅನುಭವಿಸುವಂತಾಗಿದೆ. ಒಂದು ಅರ್ಜಿಗೆ ತಿಂಗಳುಗಟ್ಟಲೆ ಉತ್ತರ ಸಿಗದಿದ್ದರೆ ಜನರ ವಿಶ್ವಾಸ ಕುಸಿಯುವುದು ಸಹಜ.

ಸರ್ಕಾರಿ ಹುದ್ದೆ ಎಂದರೆ ಅಧಿಕಾರವಲ್ಲ, ಅದು ಸೇವೆಯ ಜವಾಬ್ದಾರಿ ಎಂಬ ಮನೋಭಾವ ಅಧಿಕಾರಿಗಳಲ್ಲಿ ಬೆಳೆಬೇಕು. ಕಚೇರಿಗೆ ಬರುವ ಪ್ರತಿಯೊಬ್ಬ ಸಾರ್ವಜನಿಕನನ್ನೂ ಗೌರವದಿಂದ ಕಾಣಬೇಕು. ಅವರ ಸಮಸ್ಯೆಗಳನ್ನು ಆಲಿಸಿ, ಕಾನೂನು ವ್ಯಾಪ್ತಿಯಲ್ಲಿ ಶೀಘ್ರ ಪರಿಹಾರ ನೀಡುವ ಕಾರ್ಯ ನಡೆಯಬೇಕು. ಜನರ ಅರ್ಜಿಗಳನ್ನು ಸಮಯಕ್ಕೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದರಿಂದ ಆಡಳಿತದ ಮೇಲೆ ವಿಶ್ವಾಸ ಹೆಚ್ಚುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಅರ್ಜಿಗಳ ಸ್ಥಿತಿಗತಿಯನ್ನು ಸಾರ್ವಜನಿಕರಿಗೆ ತಿಳಿಸುವ ವ್ಯವಸ್ಥೆ ಬಲಪಡಿಸಬೇಕು. ಅರ್ಜಿಗಳನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಜನರ ಕಷ್ಟಕ್ಕೆ ಸ್ಪಂದಿಸುವ ಕಚೇರಿಗಳೇ ಉತ್ತಮ ಆಡಳಿತದ ಗುರುತು.

ಜನಪ್ರತಿನಿಧಿಗಳೂ ಸಹ ಸಾರ್ವಜನಿಕರ ಅರ್ಜಿಗಳ ಬಗ್ಗೆ ನಿರಂತರವಾಗಿ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಬೇಕು. ಬಡವರು, ರೈತರು, ಕಾರ್ಮಿಕರು ಸರ್ಕಾರಿ ಕಚೇರಿಗಳಲ್ಲಿ ಅಲೆದಾಡುವ ಪರಿಸ್ಥಿತಿ ಕಡಿಮೆಯಾಗಬೇಕು. ಜನಸೇವೆಯೇ ಸರ್ಕಾರದ ಮೂಲ ಧ್ಯೇಯ ಎಂಬುದನ್ನು ಪ್ರತಿಯೊಬ್ಬ ಅಧಿಕಾರಿಯೂ ಅರಿತು ಕಾರ್ಯನಿರ್ವಹಿಸಿದಾಗ ಮಾತ್ರ ಜನರಿಗೆ ನ್ಯಾಯ ದೊರೆಯಲಿದೆ.

ಹೀಗಾಗಿ ಹುಮನಾಬಾದ್‌ನಲ್ಲಿರುವ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಜನರ ಅರ್ಜಿಗಳಿಗೆ ಶೀಘ್ರ ಮನ್ನಣೆ ಸಿಗುವಂತಾಗಬೇಕು. ಸಾರ್ವಜನಿಕರ ವಿಶ್ವಾಸ ಉಳಿಸುವ ಕೆಲಸಕ್ಕೆ ಆಡಳಿತ ಯಂತ್ರ ಮುಂದಾಗಲಿ.

# ಭರದಿಂದ ಸಾಗುತ್ತಿರುವ ವಿದ್ಯುತ್ ಕಂಬಗಳ ಅಳವಡಿಕೆ ಕಾಮಗಾರಿ




**ಗಂಗಾವತಿ:** ನಗರದ ಪ್ರಮುಖ ರಸ್ತೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತಷ್ಟು ವೇಗ ದೊರೆತಿದ್ದು, ಜೈಶ್ರೀರಾಮ ತಿರುಮಲಾಂಜನೇಯ ವಿಭಜಕಗಳ ಅಡಿಯಲ್ಲಿ ಮುಖ್ಯ ರಸ್ತೆಗಳ ಡಿವೈಡರ್‌ಗಳಲ್ಲಿ ಅಲಂಕಾರಿಕ ವಿದ್ಯುತ್ ಕಂಬಗಳ ಅಳವಡಿಕೆ ಕಾರ್ಯ ಭರದಿಂದ ಸಾಗುತ್ತಿದೆ. ನೀಲಕಂಠೇಶ್ವರ ವೃತ್ತದಿಂದ ಕನಕದಾಸ ವೃತ್ತ, ಅಲ್ಲಿಂದ ಇಂದಿರಾ ವೃತ್ತದ ಜುಲೈ ನಗರವರೆಗೆ ಸುಂದರ ವಿನ್ಯಾಸದ ವಿದ್ಯುತ್ ಕಂಬಗಳನ್ನು ಅಳವಡಿಸಲಾಗುತ್ತಿದ್ದು, ನಗರಕ್ಕೆ ಹೊಸ ಮೆರುಗು ನೀಡುವ ಕೆಲಸ ನಡೆಯುತ್ತಿದೆ.

ಈ ಕಾಮಗಾರಿಯಲ್ಲಿ ದಿನವಿಡೀ ಉರಿಬಿಸಿಲಿನಲ್ಲಿ ನಿಂತು ಶ್ರಮಿಸುತ್ತಿರುವ ಬಿಜೆಪಿ ಯುವ ಮುಖಂಡ ರಮೇಶ್ ನಾಯಕ ಹೊಸಮಲಿ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ನಗರದ ಸೌಂದರ್ಯ ವೃದ್ಧಿಗೆ ಶ್ರಮಿಸುತ್ತಿರುವ ಅವರ ಪರಿಶ್ರಮ ಎದ್ದು ಕಾಣುತ್ತಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ವಿಭಜಕಗಳ ಮಧ್ಯಭಾಗದಲ್ಲಿ ಅಳವಡಿಸಲಾಗುತ್ತಿರುವ ಅಲಂಕಾರಿಕ ವಿದ್ಯುತ್ ಕಂಬಗಳು ನಗರ ರಸ್ತೆಗಳ ಸೌಂದರ್ಯ ಹೆಚ್ಚಿಸುವುದರ ಜೊತೆಗೆ ರಾತ್ರಿ ವೇಳೆ ಸಮರ್ಪಕ ಬೆಳಕು ಒದಗಿಸಿ ವಾಹನ ಸವಾರರು ಹಾಗೂ ಸಾರ್ವಜನಿಕರ ಸುರಕ್ಷತೆಗೆ ಸಹಕಾರಿಯಾಗಲಿವೆ. ಶೀಘ್ರದಲ್ಲೇ ಈ ಭಾಗಗಳಲ್ಲಿ ವಿದ್ಯುತ್ ದೀಪಗಳು ಪ್ರಜ್ವಲಿಸಲಿದ್ದು, ಪ್ರಮುಖ ರಸ್ತೆಗಳು ಮತ್ತಷ್ಟು ಆಕರ್ಷಕವಾಗಿ ಕಾಣಲಿವೆ ಎನ್ನಲಾಗಿದೆ.

ಈ ಕುರಿತು ಮಾತನಾಡಿದ ರಮೇಶ್ ನಾಯಕ ಹೊಸಮಲಿ, "ಗಂಗಾವತಿಯ ಮುಖ್ಯ ರಸ್ತೆಗಳಲ್ಲಿ ಸುಂದರ ಹಾಗೂ ಸುರಕ್ಷಿತ ವಾತಾವರಣ ನಿರ್ಮಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೊಳ್ಳಲಾಗಿದೆ. ವಿದ್ಯುತ್ ಕಂಬಗಳ ಅಳವಡಿಕೆ ವೇಳೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಹಾಗೂ ಸುರಕ್ಷತಾ ಮಾನದಂಡಗಳನ್ನು ಪಾಲಿಸಿಕೊಂಡು ಕಾಮಗಾರಿ ನಡೆಸಲಾಗುತ್ತಿದೆ. ಸಾರ್ವಜನಿಕರ ಸಹಕಾರದಿಂದ ಕಾಮಗಾರಿಯನ್ನು ಪರಿಪೂರ್ಣವಾಗಿ ಪೂರ್ಣಗೊಳಿಸಲಾಗುವುದು," ಎಂದು ತಿಳಿಸಿದ್ದಾರೆ.

ಸ್ಥಳೀಯ ಆಡಳಿತ ಹಾಗೂ ವಿದ್ಯುತ್ ಸರಬರಾಜು ಸಂಸ್ಥೆಗಳ ಸಮನ್ವಯದಲ್ಲಿ ಈ ಯೋಜನೆ ಜಾರಿಗೊಳ್ಳುತ್ತಿದ್ದು, ನಗರದ ಅಭಿವೃದ್ಧಿಯ ಭಾಗವಾಗಿ ವಿವಿಧ ಮೂಲಸೌಕರ್ಯ ಕಾಮಗಾರಿಗಳು ಕೂಡ ಮುಂದುವರಿದಿವೆ. ಗಂಗಾವತಿ ನಗರದ ಮುಖ್ಯ ರಸ್ತೆಗಳಲ್ಲಿ ನಡೆಯುತ್ತಿರುವ ಈ ಕಾಮಗಾರಿ ಸಾರ್ವಜನಿಕರ ಗಮನ ಸೆಳೆಯುತ್ತಿದ್ದು, ನಗರದ ಸೌಂದರ್ಯ ಹೆಚ್ಚಿಸುವ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

# ಮೊಬೈಲ್ ಯುಗ: ಜನಪದ ಸಂಸ್ಕೃತಿ ಉಳಿಸಲು ಒಗ್ಗಟ್ಟಿನ ಅಗತ್ಯ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ನಾವೆಲ್ಲರೂ ರಾಜ್ಯ, ಭಾಷೆ, ಪ್ರಾಂತ್ಯ, ನಾಡು ನುಡಿ ಬಗ್ಗೆ ಹೇಗೆ ಹೆಮ್ಮೆ ಪಡುತ್ತೇವೆ. ಅದೇ ರೀತಿಯಲ್ಲಿ ನಮ್ಮ ಗಡಿ ಭಾಗದ ಬಗ್ಗೆ ಸಹ ಹೆಮ್ಮೆಪಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸುರೇಶ ಚೆನ್ನಶೆಟ್ಟಿ ಹೇಳಿದರು.

ಅವರು ಶನಿವಾರ ಮೈಲೂರ ಕ್ರಾಸ್ ಬಳಿಯ ಕೃಷ್ಣ ಉಡುಪಿ ಹೊಟೇಲ್‌ನಲ್ಲಿರುವ ಮಹಾಲಕ್ಷ್ಮಿ ಸಾಂಸ್ಕೃತಿಕ ಭವನದಲ್ಲಿ ಸಾಹಿತ್ಯರತ್ನ ಅಣ್ಣಾಭಾವು ಸಾತೆ ಸಾಂಸ್ಕೃತಿಕ ಮತ್ತು ಸಾಹಿತಿಕ ಲೋಕಮಂಚ್ ಟ್ರಸ್ಟ್, ಬೀದರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರದಲ್ಲಿ 2025–26ನೇ ಸಾಲಿನ ಸಾಮಾನ್ಯ ಸಂಘ ಸಂಸ್ಥೆಗಳ ಸಾಂಸ್ಕೃತಿ ಚಟುವಟಿಕೆಗೆ ಧನ ಸಹಾಯ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಜಾನಪದ ಸಂಭ್ರಮ ಕವಿಗೋಷ್ಠಿ ಹಾಗೂ ಪ್ರತಿಭಾ ಪುರಸ್ಕಾರ ನಮ್ಮ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ವಿಶೇಷವಾಗಿ ಯುವ ಪೀಳಿಗೆಗೆ ಜನಪದ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಪರಿಚಯ ಮಾಡಿಕೊಡುವ ಕಾರ್ಯಗಳು ನಿರಂತರವಾಗಿ ನಡೆಯಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಅಣ್ಣಾಭಾವು ಸಾರೆ ಸಾಂಸ್ಕೃತಿಕ ಮತ್ತು ಸಾಹಿತಿಕ ಲೋಕಮಂಚ್ ಟ್ರಸ್ಟ್, ಅಧ್ಯಕ್ಷರಾದ ಎಂ,ಎಸ್, ಮನೋಹರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯ ಮತ್ತು ಸಂಸ್ಕೃತಿ ಸಮಾಜದ ಅಸ್ತಿತ್ವವನ್ನು ಉಳಿಸುವ ಶಕ್ತಿಯಾಗಿದ್ದು, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಕನ್ನಡ ನಾಡಿನ ಪರಂಪರೆ ಹಾಗೂ ಜನಪದ ಕಲೆಯನ್ನು ಜೀವಂತವಾಗಿಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಯಾರಾದರು ದಾನಿಗಳು ಸಹಾಯ ಸಹಕಾರ ಮಾಡಿದರೇ ನಮ್ಮ ಸಂಘ ಇರುವರೆಗೂ ಪ್ರಶಸ್ತಿ ಹಾಗೂ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಪ್ರತಿವರ್ಷ ಒಂದು ಪುಸ್ತಕ ಪ್ರಕಟಿಸುವಂತೆ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಪಂಚಾಯತ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಖಜಾಂಚಿ ಶರತಕುಮಾರ ಅಭಿಮಾನ, ಜೆಸ್ಕಾಂ ಬೀದರನ ಲೆಕ್ಕಾಧಿಕಾರಿ ಸುಮಂತ ಕಟ್ಟಿಮನಿ, ಹಿರಿಯ ಕಲಾವಿದರಾದ ಶಂಭುಲಿಂಗ ವಾಲ್ದೊಡ್ಡಿ ಮಾತನಾಡಿದರು, ಬೀದರ ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಸುಭಾಷ ರತ್ನ ಸೇರಿ ಇತರರು ವೇದಿಕೆ ಮೇಲಿದ್ದರು.

ಪ್ರಾರಂಭದಲ್ಲಿ ಸುಮಂತ ಕಟ್ಟಿಮನಿ ಪ್ರಸ್ತಾವಿಕ ಮಾತನಾಡಿದರು, ಪ್ರವೀಣ ಚಂದ್ರ ಸ್ವಾಗತಿಸಿದರು, ಪ್ರೇಮ ಅವಿನಾಶ ನಿರೂಪಿಸಿದರೇ, ಸಮೃತ ಸೂರ್ಯವಂಶಿ ವಂದಿಸಿದರು.

ಕಾರ್ಯಕ್ರಮದ ನಂತರ ಪ್ರಚಲಿತ ವಿದ್ಯಮಾನಗಳ ಕುರಿತು ಕವಿಗೋಷ್ಠಿ ನಡೆಯಿತು.

ಹಿರಿಯ ಸಾಹಿತಿ ಎಂ.ಜಿ.ದೇಶಪಾಂಡೆ ಉದ್ಘಾಟಿಸಿದರು, ಹಿರಿಯ ಸಾಹಿತಿ ಗುರುನಾಥ ಅಕ್ಕಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಮುಖ್ಯ ಅತಿಥಿಯಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಸಂಜೀವಕುಮಾರ್ ಅತಿವಾಳೆ, ಅವರು ಭಾಗವಹಿಸಿ ಮಾತನಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾ ತಂಡಗಳಾದ, ಪ್ರಿಯಾಂಕ ಗುರುದೇವ ಮತ್ತು ತಂಡದಿಂದ ಜನಪದ ಗೀತೆ, ಶ್ರೀಮತಿ ರಾಣಿ ಸತ್ಯಮೂರ್ತಿ ಮತ್ತು ತಂಡದಿಂದ ಭರತ ನಾಟ್ಯ, ಮಹೇಶ ಕುಮಾರ ಕುಂಬಾರ ಸಾರಿಗಮಪ ಕಲಾ ತಂಡದಿಂದ ತತ್ವಪದ, ಶ್ರೀಮತಿ ಚಿನ್ನಮ್ಮಾ ಲಾಧಾ ಮತ್ತು ತಂಡದಿಂದ ಮಹಿಳಾ ಡೊಳ್ಳು ಕುಣಿತ, ಸೋಬಾನ ಪದ ಶ್ರೀಮತಿ ಡಿಲ್ಲೆಮ್ಮಾ ಮತ್ತು ತಂಡದಿಂದ ಸೋಬಾನ ಪದ, ರಮೇಶ ಅಮಲಾಪೂರ ಮತ್ತು ತಂಡದಿಂದ ಬೌದ್ಧ ಗೀತೆ, ಶ್ರೀಮತಿ ಸೀಮಾ ಮತ್ತು ತಂಡದಿಂದ ಲಮಾಣಿ ನೃತ್ಯ, ಶ್ರೀಮತಿ ಕೀರ್ತಿ ಮತ್ತು ತಂಡದಿಂದ ಭುಲಾಯಿ ಹಾಡು, ಕುಮಾರಿ ಜಯಲಕ್ಷ್ಮಿ ಕಟ್ಟಿಮನಿ ಮತ್ತು ತಂಡದಿಂದ ಭರತ ನಾಟ್ಯ, ದೇವಪ್ಪ ಮತ್ತು ತಂಡದಿಂದ, ಕನ್ನಡ ಗೀತೆ, ಡಾ. ಜೈ ಭಾರತ ಮಂಗೆಸ್ಕರ್ ತಂಡದಿಂದ ದೇಶ ಭಕ್ತಿಗೀತೆ, ಸುನೀತಾ ಸಿ.ಬಿ. ಬಸವ ಪ್ರಸಾದ ಕಲಾ ತಂಡದಿಂದ ವಚನ ಗಾಯನ, ರಾಜಕುಮಾರ ಕರುಣಾ ಸಾಗರ ಮತ್ತು ತಂಡದಿಂದ ಅಂಬೇಡ್ಕರ್ ಗೀತೆಗಳು, ಕಂಟೆಪ್ಪಾ ಪೂಜಾರಿ ಮತ್ತು ತಂಡದಿಂದ ಸುಗಮ ಸಂಗೀತೆ, ಶಿವಾಜ ಮಾನಕರೆ ಮತ್ತು ತಂಡದಿಂದ ಕ್ರಾಂತಿಗೀತೆ, ತುಕಾರಾಮ ನಾಗೂರೆ ತಂಡದಿಂದ ಜಾನಪದ ಜಾದು, ಪ್ರದರ್ಶನವು ಪ್ರೇಕ್ಷಕರ ಗಮನ ಸೆಳೆದವು.

> ಜನಪದ ಕಲೆ, ಸಾಹಿತ್ಯ, ಸಂಗೀತ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ. ಕಲಾವಿದರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಹಾಗೂ ಯೋಜನೆಗಳನ್ನು ತಲುಪಿಸಲು ಇಲಾಖೆ ಸದಾ ಬದ್ಧವಾಗಿದೆ ಎಂದು ಹೇಳಿದರು.
>
> –ಸಿದ್ರಾಮ ಸಿಂಧೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು

ಅದೇ ಸಂದರ್ಭದಲ್ಲಿ ಜಿಲ್ಲೆಯ ಹಿರಿಯ ಸಾಹಿತಿಗಳು, ಯುವ ಬರಹಗಾರರು ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಸ್ವರಚಿತ ಕವನ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳು, ಕಲಾವಿದರು, ಯುವಕರು, ಮಹಿಳೆಯರು, ನಾಗರಿಕರು, ಇತರರು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುತ್ತಿರುವ ಸರ್ಕಾರ: ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು




ಕಾರ್ಮಿಕ ಹಕ್ಕುಗಳನ್ನು ಧಮನ ಮಾಡಲು ಹೊರಟಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮತ್ತೊಮ್ಮೆ ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳಿತ್ತಿವೆ ಎಂದು ಸಿಪಿಐ (ಎಂ)ಜಿಲ್ಲಾ ಕಾರ್ಯದರ್ಶಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ನಡೆದ ಸಿಐಟಿಯು ನೇತೃತ್ವದಲ್ಲಿ ನಡೆದ ವಿಶ್ವಕಾರ್ಮಿಕ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಹೋರಾಟದಿಂದ ಪಡೆದ ಕಾರ್ಮಿಕರ ಹಕ್ಕುಗಳನ್ನು ಇಂದು ದಮನ ಮಾಡಲು ಹೊರಟಿದೆ ಇಂತಹ ದಮನಕಾರಿ ನೀತಿಗಳ ವಿರುದ್ಧ ಕಾರ್ಮಿಕರ ಸಂಘಟಿತ ಹೋರಾಟವೇ ಇದಕ್ಕೆ ಮದ್ದು ಎಂದರು.

ಇಂದು ಕಾರ್ಮಿಕರ ಶ್ರಮಕ್ಕೆ ತಕ್ಕ ಬೆಲೆ ಸಿಗುತ್ತಿಲ್ಲ ಕಾರ್ಮಿಕರನ್ನು ಬೇಕಾಬಿಟ್ಟಿ ದುಡಿಸಿಕೊಳ್ಳುವ ಪರಿಪಾಠಕ್ಕೆ ಇಂದಿನ ಸರ್ಕಾರಗಳು ನಾಂದಿ ಹಾಡುತ್ತಿವೆ ಎಂದರು.

ಸಿಐಟಿಯು ತಾಲೂಕ್ ಸಂಚಾಲಕ ಬಸವರಾಜು ಕಲ್ಕುಣಿಕೆ ಮಾತನಾಡಿ ಕಾರ್ಮಿಕರು ಎಂಟು ಗಂಟೆ ಕೆಲಸ ಎಂಟು ಗಂಟೆ ಮನರಂಜನೆ 8:00 ವಿಶ್ರಾಂತಿ ಎಂಬಂತೆ ಹಿಂದಿನ ದಿನಗಳಲ್ಲಿ ಕೆಲಸ ಮಾಡುತ್ತಿದ್ದರು ಆದರೆ ಇಂದು ಕಾರ್ಮಿಕ ನೀತಿಗಳನ್ನು ಬದಲಾಯಿಸಿ 12 ಗಂಟೆ ಕೆಲಸ ಮಾಡುವ ಮೂಲಕ ಕಾರ್ಮಿಕರನ್ನು ಮತ್ತಷ್ಟು ಶೋಷಣೆಗೆ ಮಾಡಿ ಕಾರ್ಮಿಕರ ಬದುಕನ್ನು ಕಿತ್ತು ಕೊಳ್ಳುತ್ತಿವೆ ಎಂದ ಅವರು ಸರ್ಕಾರಗಳ ಜನಸಾಮಾನ್ಯರ ಪರವಾಗಿ ಕೆಲಸ ಮಾಡಬೇಕಾದ ಸರ್ಕಾರಗಳು ಕಂಪನಿಗಳ ಪರವಾಗಿ ಕಾನೂನುಗಳನ್ನು ಜಾರಿ ಮಾಡಿ ಕಾರ್ಮಿಕರನ್ನು ಶೋಷಣೆ ಮಾಡಲು ಮುಂದಾಗುತ್ತಿವೆ ಎಂದು ಖಂಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣಗೌಡ. ತಾಲೋಕು ಅಧ್ಯಕ್ಷ ಎಂ ಸಿ ಚಂದ್ರಶೇಖರ್. ಗ್ರಾಪಂ ನೌಕರರ ತಾಲೂಕು ಅಧ್ಯಕ್ಷ ಲೋಕೇಶ್ ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಮಂಜಳ ರಾಜಮ್ಮ ಧರ್ಮಪುರ. ಮಾತನಾಡಿದರು. ಇದಕ್ಕೂ ಮುನ್ನ ಸಂವಿಧಾನ ಸರ್ಕಲ್ ನಿಂದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಾರ್ಮಿಕರು ಕೆಂಪು ಭಾವುಟ ಹಿಡಿದು. ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ. ಸಿ ಐ ಟಿ ಯು ಜಿಂದಾಬಾದ್. ಕಾರ್ಮಿಕರ ಕಾಯ್ದೆ ಗಳ ತಿದ್ದುಪಡಿ ಬೇಡವೇ ಬೇಡ ಕಾರ್ಮಿಕ ವಿರೋಧಿ ನೀತಿ ಜಾರಿಮಡಲು ಹೊರಟಿರುವ ರಾಜ್ಯ ಕೇಂದ್ರ ಸರ್ಕಾರ ಗಳಿಗೆ ದಿಕ್ಕಾರ ಮುಂತಾದ ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿದರು. ಗ್ರಾಪಂ ನೌಕರರ ಜಿಲ್ಲಾ ಕಾರ್ಯದರ್ಶಿ ದಿನೇಶ್ ತಾಲೂಕು ಕಾರ್ಯದರ್ಶಿ ಜಗದೀಶ್ ಬಿಸಿಯೂಟ ಸಂಘದ ಕಾರ್ಯದರ್ಶಿ ಹೇಮಾ ಖಜಾಂಚಿ ಶಿವಮ್ಮ ಮುಖಂಡರಾದ ರಾಜೇಶ್ವರಿ. ಮೀನಾ ಪ್ರೀತಿ. ರಾಜಮ್ಮ ಶಾಂತಮ್ಮ ಜಾನಕಮ್ಮ

ಕೆ ಪಿ ಆರ್ ಎಸ್ ಮುಳ್ಳೂರ್ ಮಹಾದೇವ ಸಿದ್ದಯ್ಯ ಉಲ್ಲಾಸ್ ರವಿಕುಮಾರ್ ಮಹಾದೇವ ಮಧು ಮುಂತಾದವರು ನೇತೃತ್ವ ವಹಿಸದ್ದರು.

# ಕಬಡ್ಡಿ ಗ್ರಾಮೀಣ ಸೊಗಡಿನ ಕ್ರೀಡೆ: ಮಹಿಪಾಲರಡ್ಡಿ ಡಿಗ್ಗಾವಿ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ದೇಸಿ ಕ್ರೀಡೆ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳುವದರಿಂದ ಸ್ಥಳಿಯ ಪ್ರತಿಭೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ ಎಂದು ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮಹಿಪಾಲರೆಡ್ಡಿ ಡಿಗ್ಗಾವಿ ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಎನ್‌ಆರ್ ವೈಭವ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಬಡ್ಡಿ ಒಂದು ಗ್ರಾಮೀಣ ಸೊಗಡಿನ ಕ್ರೀಡೆ. ಹಿಂದಿನಿಂದಲೂ ಕಬಡ್ಡಿಗೆ ತನ್ನದೆ ಆದ ಮಹತ್ವವಿದೆ. ಕಬಡ್ಡಿಯಿಂದ ಅನೇಕ ಸ್ಥಳಿಯ ಪ್ರತಿಭೆಗಳು ಬೆಳಕಿಗೆ ಬರುತ್ತದೆ. ಎಲ್ಲ ಧರ್ಮ, ಜಾತಿ, ಮತ ಪಂಥವನ್ನು ಒಟ್ಟುಗೂಡಿಸುವದು ಕ್ರೀಡೆಯಾಗಿದೆ. ಎನ್‌ಆರ್ ದಾವಲಸಾಬ ಅವರ ಸ್ಮರಣಾರ್ಥ ಇಂತಹದೊಂದು ಟೂರ್ನಿ ಆಯೋಜಿಸಿರುವದು ಶ್ಲಾಘನೀಯ ಎಂದು ತಿಳಿಸಿದರು.

ಯುವ ಮುಖಂಡ ಆದಿತ್ಯಗೌಡ ಪಾಟೀಲ ಮಾತನಾಡಿ, ಎಲ್ಲ ಕ್ರೀಡಾಪಟುಗಳು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ. ಗೆದ್ದರೆ ಹಿಗ್ಗದೆ, ಸೋತರೆ ಕುಗ್ಗದೆ ಕ್ರೀಡಾಸ್ಪೂರ್ತಿಯಿಂದ ಕ್ರೀಡೆಯನ್ನು ಆನಂದಿಸಿ ಎಂದರು.

ನಂದಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಿ.ಸಿ.ಪಾಟೀಲ ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ಷ.ಬ್ರ.ಚನ್ನಬಸವ ಶಿವಾಚಾರ್ಯರು, ಆಶ್ರಯ ಕಮಿಟಿ ಅಧ್ಯಕ್ಷ ಶರಣಬಸವ ಡಿಗ್ಗಾವಿ, ಸುರೇಶಗೌಡ ಪಾಟೀಲ, ರಾಘು ದೊರೆ, ರಹೆಮಾನ ಪಟೇಲ, ಸಯ್ಯದ ಹುಸೇನ, ಸಾಹೇಬಲಾಲ ಆಂದೇಲಿ, ಶಿವಪ್ಪ ಕಂಬಾರ, ಶಿವಪ್ಪ ಕಟ್ಟಿಮನಿ, ಬಸಯ್ಯಸ್ವಾಮಿ, ಇಮ್ರಾನ ಪಟೇಲ, ಮಹಿಬೂಬ ನಾಶಿ, ಮೈನೂದ್ದೀನ ನಾಶಿ, ಶರಣು, ಗಿರಿರಾಜ ಶಹಾಪುರ, ಸಂಗಮೇಶ, ರೇವಣಸಿದ್ದಯ್ಯ ಇದ್ದರು.

# ಅಕ್ರಮ ಮದ್ಯ ಮಾರಾಟ ತಡೆಹಿಡಿಯಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ



ತಾಲೂಕಿನಾದ್ಯಂತ ಅಕ್ರಮ ಮಧ್ಯ ಮಾರಾಟ ಹೆಗ್ಗಿಲ್ಲದೇ ನಡೆಯುತ್ತಿದ್ದು, ಕೂಡಲೇ ಅಬಕಾರಿ ಇಲಾಖೆ ಅಕ್ರಮ ಮಧ್ಯ ಮಾರಾಟವನ್ನು ತಡೆಹಿಡಿದು, ಅಕ್ರಮ ಮಧ್ಯ ಮಾರಾಟಗಾರರ ಮೇಲೆ ಶಿಸ್ತು ಕ್ರಮ ಜರುಗಿಸಲು ಕರವೇ (ನಾರಾಯಣಗೌಡ ಬಣ) ಒತ್ತಾಯಿಸಿದೆ ಎಂದು ತಾಲೂಕ ಅಧ್ಯಕ್ಷರಾದ ಮಲ್ಲಿಕಾರ್ಜುನ ಗಿಣಿಮೋತಿ ತಿಳಿಸಿದರು.

ಅವರು ಗಂಗಾವತಿ ನಗರದಲ್ಲಿ ಅಕ್ರಮ ಮಧ್ಯ ವ್ಯಾಪಾರವನ್ನು ತಡೆಹಿಡಿಯಲು ಒತ್ತಾಯಿಸಿ, ನಗರ ಪೊಲೀಸ್ ಠಾಣೆಗೆ ನೂತನ ಆರಕ್ಷಕ ನಿರೀಕ್ಷಕರಾಗಿ ವರ್ಗಾವಣೆಯಾಗಿರುವ ಸಿಪಿಐ ಪ್ರಕಾಶ ಆರ್. ಯಾತನೂರು ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ನಮ್ಮ ಸಂಘಟನೆಯಿಂದ ಈಗಾಗಲೇ ಮೇ–16 ರಂದು ಅಬಕಾರಿ ಉಪ ಆಯುಕ್ತರು ಹಾಗೂ ಮೇ–18 ರಂದು ಕೊಪ್ಪಳ ವಲಯ ಅಬಕಾರಿ ನಿರೀಕ್ಷರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಸಿಎಲ್–2 ಸನ್ನದುದಾರರ ಎಲ್ಲಾ ಅಂಗಡಿಗಳಲ್ಲಿ ಕೌಂಟರ್ ನಿಂದ ಗ್ರಾಹಕರ ಟೇಬಲ್ ಗಳಿಗೆ ರಾಜಾರೋಷವಾಗಿ ಮಧ್ಯ ಸರಬರಾಜು ಮಾಡುತ್ತಿದ್ದು, ಇದು ಕರ್ನಾಟಕ ಅಬಕಾರಿ ನಿಯಮಗಳು 1965ರ ನಿಯಮ 5(2)ರ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘಿಸಿದಂತಾಗಿದೆ. ಈ ಅಂಗಡಿಗಳು ಚಿಲ್ಲರೆ ಮಾರಾಟದ ಪರವಾನಿಗೆಯನ್ನು ದುರುಪಯೋಗಪಡಿಸಿಕೊಂಡು, ಅಬಕಾರಿ ಶುಲ್ಕವನ್ನು ಪಾವತಿಸದೇ ಕಾನೂನುಬದ್ಧ ಮಾನದಂಡಗಳನ್ನು ಅನುಸರಿಸದೇ ಯಾವುದೇ ಮದ್ಯದ ರೇಟ್ ಬೋರ್ಡ್ ಹಾಕದೇ ಸಿಎಲ್–9 ಬಾರ್ ಮತ್ತು ರೆಸ್ಟೋರೆಂಟ್ ಗಳಂತೆ ಅನಧಿಕೃತವಾಗಿ ವರ್ತಿಸುತ್ತಿವೆ. ಇದರಿಂದ ಜನವಸತಿ ಪ್ರದೇಶಗಳಲ್ಲಿನ ಮಹಿಳೆಯರಿಗೆ, ಮಕ್ಕಳಿಗೆ ಹಾಗೂ ವಯೋಸಹಜ ಕಾಯಿಲೆ ಹೊಂದಿರುವವರಿಗೆ ಕಿರಿಕಿರಿ ಉಂಟುಮಾಡಿ ಅಶಾಂತಿಯ ವಾತಾವರಣ ಉಂಟಾಗುತ್ತಿದೆ ಎಂದು ಈಗಾಗಲೇ ಮೇ–18 ರಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯ–ಣಗೌಡ ಬಣ) ಕೊಪ್ಪಳ ಜಿಲ್ಲಾಧ್ಯಕ್ಷರಾದ ಶ್ರೀ ಬಿ. ಗಿರೀಶಾನಂದ ಜ್ಞಾನಸುಂದರ ನೇತೃತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿ ಮನವಿ ಸಲ್ಲಿಸಲಾಗಿದೆ. ಆದರೂ ಕೂಡಾ ಜಿಲ್ಲಾ ಮತ್ತು ತಾಲೂಕ ಕೇಂದ್ರ ಸ್ಥಾನದಿಂದ ಗ್ರಾಮೀಣ ಪ್ರದೇಶದಲ್ಲಿರುವ ಡಾಬಾಗಳು. ಪಾನ್ ಬೀಡಾ ಅಂಗಡಿಗಳು. ಸಣ್ಣ ಸಣ್ಣ ಕಿರಾಣಿ ಅಂಗಡಿಗಳಲ್ಲಿ ಕದ್ದು ಮುಚ್ಚಿ ಅಕ್ರಮ ಮದ್ಯ/ಬಿಯರ್/ವೈನ್ ವ್ಯಾಪಾರ ಮಾಡುತ್ತಿದ್ದು, ಅಬಕಾರಿ ಸತ್ಯಾಪನಾ ಪತ್ರ (ಇವಿಸಿ) ಪಡೆಯದೇ ಕರ್ನಾಟಕ ಅಬಕಾರಿ (ಮದ್ಯಪಾನೀಯಗಳ ಸ್ವಾಧೀನತೆ. ಸಾಗಾಣಿಕೆ. ಆಮದು ಮತ್ತು ರಫ್ತು) ನಿಯಮಗಳು, 1965ರ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಅನ್ವಯಿಸುವ ಅಬಕಾರಿ ರಫ್ತು ಸುಂಕವನ್ನು ಭರಿಸದೇ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವುದನ್ನು ನಮ್ಮ ಕರವೇ ಬಲವಾಗಿ ಖಂಡಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಕರವೇ (ನಾರಾಯಣಗೌಡ ಬಣ) ಸಂಘಟನೆಯ ತಾಲೂಕ ಉಪಾಧ್ಯಕ್ಷ ನಿಸಾರ್, ತಾಲೂಕ ಕಾರ್ಯದರ್ಶಿ ಅಂಜನಿ ಗೊರೂರು, ಪ್ರವೀಣಕುಮಾರ, ಸಾ.ಜಾ ತಾಲೂಕ ಸಂಚಾಲಕ ಶಬ್ಬೀರ್ ಪಾಶಾ, ನಗರ ಘಟಕದ ಪದಾಧಿಕಾರಿಗಳಾದ ಹೇಮಂತಕುಮಾರ ಹೊಸ್ಕೇರಾ, ಅಜಯಕುಮಾರ, ಬಸಣ್ಣ ಕಲ್ಗುಡಿ ಇತರರು ಇದ್ದರು.



ಹುಣಸೂರು: ನಗರದ ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನದ 20ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ಡಾ. ಪುಷ್ಪ ಅಮರನಾಥ್ ಹಾಗೂ ಹುಣಸೂರು ನಗರ ಅಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಎಚ್ ಪಿ ಅಮರನಾಥ್ ರವರು ಭಾಗವಹಿಸಿ ಸ್ವಾಮಿಯ ದರ್ಶನ ಪಡೆದರು.ರಾಜ್ಯ ಗ್ಯಾರಂಟಿ ಅನುಷ್ಠಾನದ ಸಮಿತಿಯ ಉಪಾಧ್ಯಕ್ಷರು ಡಾ.ಪುಷ್ಪ ಅಮರನಾಥ್ ಹಾಗೂ ಹೆಚ್ ಪಿ ಅಮರ್ನಾಥ್ ರವರನ್ನು ದೇವಾಲಯ ಸೇವಾ ಸಮಿತಿಯವರು ರವರನ್ನು ಸನ್ಮಾನಿಸಿ ಗೌರವಿಸಿದರು*ಈ ಸಂದರ್ಭದಲ್ಲಿ ಮಾಜಿ ಪುರಸಭೆ ಸದಸ್ಯರಾದ ಯೋಗಾನಂದ ಹಾಗೂ ಸಮಿತಿಯವರು ಸದಸ್ಯರು ಹಾಜರಿದ್ದರು



ಹುಣಸೂರು: ತಾಲೂಕಿನ ಮಾಜಿ ಶಾಸಕರಾದ ಹಾಗೂ ಸ್ನೇಹಜೀವಿ ಎಚ್. ಪಿ ಮಂಜುನಾಥ್ ರವರ ಹುಟ್ಟು ಹಬ್ಬದ ಪ್ರಯುಕ್ತ ಬೃಹತ್ ಉದ್ಯೋಗ ಮೇಳದ ಕಾರ್ಯಕ್ರಮದಲ್ಲಿ ಬಿಗ್ ಬಾಸ್ ವಿನ್ನರ್ ಗಿಲ್ಲಿ ನಟ ಅಭಿನಯದ "ಸರ್ವೆ ನಂಬರ್ 45" ಚಲನಚಿತ್ರ ಪೋಸ್ಟರ್ ಅನ್ನು ಮಾಜಿ ಶಾಸಕರಾದ ಎಚ್. ಪಿ ಮಂಜುನಾಥ್ ಬಿಡುಗಡೆ ಮಾಡಿದರು, ಚಿತ್ರದಲ್ಲಿ ನಿರ್ದೇಶಕರಾದ ಶಿವಕುಮಾರ್ ಎಂ. ಶೆಟ್ಟಳ್ಳಿ, ಹೂಡ ಅಧ್ಯಕ್ಷರಾದ ಎಚ್. ಪಿ ಅಮರನಾಥ್, ನಟರಾದ ಕುಮಾರ್ ಅರಸೇಗೌಡ, ರಾಘವೇಂದ್ರ ಕುಮಾರ್, ಸಹ ನಿರ್ಮಾಪಕರಾದ ಆನಂದ್, ಅರಸು ಕಲ್ಲಹಳ್ಳಿ ಕೌಶಿಕ್ ಫೈಸಲ್ ಇನ್ನು ಮುಂತಾದವರನ್ನು ಹಾಜರಿದ್ದರು



ಹುಣಸೂರು: ನಗರದ ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನದ 20ನೇ ವರ್ಷದವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಶಾಸಕಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರುಭಾಗವಹಿಸಿಸ್ವಾಮಿಯ ದರ್ಶನ ಪಡೆದರು. ದೇವಾಲಯ ಸೇವಾ ಸಮಿತಿಯ ವತಿಯಿಂದ ಮಾಜಿ ಶಾಸಕ ಹಾಗೂ ಸ್ನೇಹ ಜೀವಿ ಎಚ್ ಪಿ ಮಂಜುನಾಥ್ ರವರನ್ನು ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತರಾದ ಕವಿತಾ ಜಗನ್ನಾಥ್ ರವರನ್ನು ಸನ್ಮಾನಿಸಿ ಗೌರವಿಸಿದರು.

# ಮೇ 26 ರಂದು 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ಮೇಳ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ನೀರಾವರಿ ಮತ್ತು ಪಶು ಸಂಗೋಪನಾ ಇಲಾಖೆ, ಬಳ್ಳಾರಿ ಜಿಲ್ಲಾ ಕಾಟನ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘ ಬಳ್ಳಾರಿ ಜಿಲ್ಲಾ ಘಟಕ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘ, ಬಳ್ಳಾರಿ ದಲ್ಲಾಲಿ ವರ್ತಕರ ಸಂಘ, ಕನ್ನಡ ನಾಡು ರೈತ ಸಂಘ, ಬಳ್ಳಾರಿ – ರೈತ ಸಮೂಹದ ಸಹಕಾರದಲ್ಲಿ 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ಕುರಿತು ಮೇ 26ರ ಮಂಗಳವಾರ ಎಪಿಎಂಸಿ ಆವರಣದಲ್ಲಿ 'ಕೃಷಿ ಮೇಳ'ವನ್ನು ಏರ್ಪಡಿಸಲಾಗಿದೆ ಎಂದು ಬಿಡಿಸಿಸಿಐ ಅಧ್ಯಕ್ಷ ಮಂಜುನಾಥ್ ತಿಳಿಸಿದರು

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಮತ್ತು ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು ಈ ಕುರಿತು ಸುದ್ದಿಗಾರರಿಗೆ ಕಾರ್ಯಕ್ರಮದ ಕುರಿತು ವಿವರಣೆಗಳನ್ನು ನೀಡಿ, ಅಂದು ಬೆಳಗ್ಗೆ 9 ಗಂಟೆಗೆ ರೈತ ನಡಿಗೆ, ಎತ್ತಿನ ಬಂಡಿ ಮೆರವಣಿಗೆ ಹಾಗೂ ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಆರಂಭ ಆಗಲಿದೆ. ಕೃಷಿ ಸಚಿವರಾಗಿರುವ ಎನ್. ಚಲುವರಾಯಸ್ವಾಮಿ ಅವರು ಮೇಳವನ್ನು ಉದ್ಘಾಟಿಸಲಿದ್ದಾರೆ, ಮೇಳದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಬಿ.ಝೆಡ್. ಜಮೀರ್ ಅಹ್ಮದ್ ಖಾನ್, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾಗಿರುವ ಡಾ. ಎಂ. ಹನುಮಂತಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಮೇಳದಲ್ಲಿ ಕೃಷಿ ವಿಜ್ಞಾನಿಗಳಾಗಿರುವ ಡಾ. ಎ.ಜಿ. ಶ್ರೀನಿವಾಸ್, ಡಾ. ರವಿಶಂಕರ್ ಜಿ. ಡಾ. ಪಾಲಯ್ಯ ಮತ್ತು ಡಾ. ಎಂ. ಭೀಮಣ್ಣ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು, ಉಪನ್ಯಾಸ ನೀಡಲಿದ್ದಾರೆ.

ಅತಿಥಿಗಳಾಗಿ ಮೇಯರ್ ಪಿ. ಗಾದೆಪ್ಪ, ಶಾಸಕರಾದ ಬಿ. ನಾಗೇಂದ್ರ, ನಾರಾ ಭರತರೆಡ್ಡಿ, ಜೆ.ಎನ್. ಗಣೇಶ್, ಬಿ.ಎಂ. ನಾಗರಾಜ್, ಈ. ಅನ್ನಪೂರ್ಣ ತುಕಾರಾಂ, ವೈ.ಎಂ. ಸತೀಶ್, ಸಂಸದರಾದ ಈ. ತುಕಾರಾಂ, ಡಾ. ಸಯ್ಯದ್ ನಾಸೀರ್ ಹುಸೇನ್, ಬುಡಾ ಅಧ್ಯಕ್ಷರಾದ ಜೆ.ಎಸ್. ಆಂಜನೇಯಲು, ಲಿಡ್ಕರ್ ಅಧ್ಯಕ್ಷರಾದ ಮುಂಡ್ರಗಿ ನಾಗರಾಜ್, ಎಪಿಎಂಸಿ ಅಧ್ಯಕ್ಷರಾದ ಕಟ್ಟೇಮನಿ ನಾಗೇಂದ್ರ, ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಇ. ಚಿದಾನಂದಪ್ಪ, ಜಿಲ್ಲಾಧಿಕಾರಿಗಳಾಗಿರುವ ಕೆ. ನಾಗೇಂದ್ರ ಪ್ರಸಾದ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುವ ಮಹಮ್ಮದ್ ಹಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾಗಿರುವ ಡಾ. ಸುಮನ್ ಡಿ. ಪೆನ್ನೇಕರ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾಗಿರುವ ಕೆ.ಎಂ. ಸೋಮಸುಂಧರ್, ಉಪ ನಿರ್ದೇಶಕರಾಗಿರುವ ಎಸ್.ಎನ್. ಮಂಜುನಾಥ್ ಮತ್ತು ಗರ್ಜಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾಗಿರುವ ಶಶಿಕಾಂತ್ ಕಟ್ಟೀಮನಿ, ಹಿರಿಯ ಸಹಾಯಕ

ನಿರ್ದೇಶಕರಾಗಿರುವ ಜೆ. ಶಂಕ್ರಪ್ಪ, ಎಪಿಎಂಸಿ, ಕಾರ್ಯದರ್ಶಿಗಳಾಗಿರುವ ವಿ.ಆರ್. ಜಯಕುಮಾರ್, ಪಶು ಸಂಗೋಪನ ಇಲಾಖೆಯ

ಡಾ. ಸದಾಶಿವ ಉಪ್ಪಾರ್, ಡಾ. ರಾಜಶೇಖರ್, ಮೀನುಗಾರಿಕೆ ಇಲಾಖೆಯ ಶಿವಣ್ಣ, ಶ್ರೀಮತಿ ಭಾವನ, ನೀರಾವರಿ ಇಲಾಖೆಯ ಗುರುರಾಜ್, ರೇಷ್ಮೆ ಇಲಾಖೆಯ ಹರ್ಷ, ಹಾಲಪ್ಪ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಬಳ್ಳಾರಿ ಜಿಲ್ಲಾ ಕಾಟನ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಜಿಲ್ಲಾ ಘಟಕ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘ, ಬಳ್ಳಾರಿ ದಲ್ಲಾಲಿ ವರ್ತಕರ ಸಂಘ, ರೈತ ಸಮೂಹಗಳು ಈ ಮೇಳಕ್ಕೆ ಸಹಕಾರ ನೀಡಿವೆ.

ಈ ಮೇಳಾದಲ್ಲಿ ಸುಮಾರು ಐದು ಸಾವಿರ ರೈತರು ಸೇರುವ ನಿರೀಕ್ಷೆ ಇದೆ, ಈ ಸಂದರ್ಭದಲ್ಲಿ ಕೃಷಿ ಮೇಳದ ಕರಪತ್ರ ಬಿಡುಗಡೆ ಮಾಡಲಾಯಿತು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಉಪಾಧ್ಯಕ್ಷರಾಗಿರುವ ಸೊಂತಾ ಗಿರಿಧರ್, ಪಿ.ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾಗಿರುವ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ, ವಿ. ರಾಮಚಂದ್ರ, ಖಜಾಂಚಿಗಳಾಗಿರುವ ಸಿ.ಎಸ್. ಸತ್ಯನಾರಾಯಣ, ಮಾಜಿ ಅಧ್ಯಕ್ಷರುಗಳಾದ, ಸಿ.ಶ್ರೀನಿವಾಸ್, ಬಿ.ಮಹಾರುದ್ರಗೌಡ, ನೇಕಾರ ನಾಗರಾಜ್, ಇವೆಂಟ್ಸ್ ಕಮಿಟಿ ಚೇರ್ಮನ್, ಪ್ರೆಸ್ ಅಂಡ್ ಮೀಡಿಯಾ ಕಮಿಟಿ ಚೇರ್ಮನ್ ತಾಟಕೂರಿ ಶ್ರೀನಿವಾಸರಾವ್, ಮ್ಯಾಗಜಿನ್ ಕಮಿಟಿಯ ಕೌಡಿಕಿ ಹನುಮೇಶಬಾಬು, ಕೆ.ಎಂ. ಭೋಗೇಶ್, ಜೆ.ರಾಜೇಶ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಬಿತ್ತನೆ ಬೀಜ,ರಸಗೊಬ್ಬರ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.24: ಮುಂಗಾರು ಆಗಮನ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಬಿತ್ತನೆ ಬೀಜ, ರಸಗೊಬ್ಬರದ ಕೊರತೆಯಾಗದಂತೆ ಮುಂಜಾಗೃತ ಕ್ರಮ ಕೈಗೊಳ್ಳಬೇಕೆಂದು ಕೃಷಿ ಅಧಿಕಾರಿಗಳಿಗೆ ಜಿಲ್ಲಾ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಧಂಗಾಪೂರ ತಿಳಿಸಿದರು.

ಶುಕ್ರವಾರ ಇಲ್ಲಿನ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾ ಕೃಷಿಕ ಸಮಾಜದ ಕಾರ್ಯಕರಣಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತಾಪಿ ಜನರಿಗೆ ಸುಲಭವಾಗಿ ಬೀಜ, ರಸಗೊಬ್ಬರು ಸಿಗಬೇಕು. ಈ ನಿಟ್ಟಿನಲ್ಲಿ ದಾಸ್ತಾನು ಮಾಡಿ ಸಮರ್ಪಕವಾಗಿ ಪೂರೈಕೆಯಾಗುವಂತೆ ಕೃಚಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರು ಅಗತ್ಯ ಕ್ರಮ ವಹಿಸಬೇಕೆಂದರು.

ಸಭೆಯಲ್ಲಿ ಭಾಗವಹಿಸಿದ ಜಂಡಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅವರು ಮಾತನಾಡಿ, ಮುಂಗಾರು ಹಂಗಾಮಿನ ಮಳೆಯ ವಿವರ, ಬಿತ್ತನೆ ಬೀಜದ ಲಭ್ಯತೆ, ರಸಗೊಬ್ಬರದ ಸಮರ್ಪಕ ನಿರ್ವಹಣೆಯ ಕುರಿತು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಪಿ.ಯು.ಸಿ ಕಲಾ ವಿಭಾಗದಲ್ಲಿ ಅತಿ ಹೆಚ್ಚು ಶೇ.99.67 ಅಂಕ ಗಳಿಸಿದ ವಿದ್ಯಾರ್ಥಿನಿ ಕು. ಸೃಷ್ಟಿ ಮಲ್ಲಿನಾಥ ಪಾಟೀಲ್ ರವರಿಗೆ ಕೃಷಿಕ ಸಮಾಜದಿಂದ 10,000 ರೂಮ ಪ್ರೋತ್ಸಾಹಧನ ನೀಡಿ ಸತ್ಕರಿಸಲಾಯಿತು.

ಸಭೆಯಲ್ಲಿ ರಾಜ್ಯ ಪ್ರತಿನಿಧಿಗಳಾದ ಕೇದಾರಲಿಂಗಯ್ಯ ಹಿರೇಮಠ, ಬಸವರಾಜ ರುದ್ರಪ್ಪ ಪಾಟೀಲ, ಕೃಷಿಕ ಸಮಾಜದ ಪ್ರತಿನಿಧಿಗಳು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕೃಷಿಕ ಸಮಾಜದ ಅಧ್ಯಕ್ಷರು, ಕೃಷಿ ಇಲಾಖೆಯ ಅಧಿಕಾರಿಗಳು, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.


ಕರ್ನಾಟಕ ಸರ್ಕಾರ

**ಹಿಂದುಧಾರ್ಮಿಕ ಸಂಸ್ಥೆಗಳು ಮತ್ತುಧರ್ಮದಾಯದತ್ತಿ ಇಲಾಖೆ.**

ಕಾರ್ಯನಿರ್ವಾಹಣಾಧಿಕಾರಿಗಳ ಕಾರ್ಯಾಲಯ. ಶ್ರೀ ವಿರಭದ್ರೇಶ್ವರ ದೇವಸ್ಥಾನ. ಚಾಂಗಲೇರ ತಾ:– ಚಿಟಗುಪ್ಪ

ಜಿ:– ಬೀದರ 585227, 8867217179

ಸಂಖ್ಯೆ:ದೇವ;ನರಸಿಂಹ:ಸಿಆರ್: /2026–27 ದಿನಾಂಕ: .05.2026

**ಕಛೇರಿ ಟಿಪ್ಪಣಿ**

**:: ಮಳಿಗಗೆಗಳ ಹರಾಜು ಪ್ರಕಟಣೆ ::**

ವಿಷಯ :– ಬೀದರ ಜಿಲ್ಲೆ ಚಿಟಗುಪ್ಪ ತಾಲ್ಲೂಕಿನ ಚಾಂಗಲೇರ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿರುವ ವಾಣಿಜ್ಯ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡುವ ಬಗ್ಗೆ.

ಮೆಲ್ಕಂಡ ವಿಷಯಕ್ಕೆ ಸಂಬಂಧಿಸಿದೆಂತೆ ಬೀದರ ಜಿಲ್ಲೆ ಚಿಟಗುಪ್ಪ ತಾಲ್ಲೂಕಿನ ಚಾಂಗಲೇರ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಹೋಸದಾಗಿ 12 ಟೀನ ಶೇಡ್ಡ ಅಂಗಡಿಗಳ ಹರಾಜು ಪ್ರಕಟಣೆ ಈ ಕೆಳಕಂಡಂತೆ ಕೋಷ್ಟಕದಲ್ಲಿ ವಿವರಿಶಿರುವಂತೆ.

| ಕ್ರ.ಸಂ | ಅಂಗಡಿ ಹೆಸರು | ಒಂದು ಮಳಿಗೆ ನಿವೇಶನ ವಿಸ್ತೀರ್ಣ | ಒಂದು ಮಳಿಗೆ ಕಟ್ಟಡ ವಿಷ್ತೀರ್ಣ | ಒಂದು ಮಳೀಗೆ ಠೇವಣಿ ಮೊತ್ತ | ಒಂದು ಮಳಿಗೆಗೆ ನಿಗದಿಪಡಿಸಿದ ಕನಿಷ್ಟ ತಿಂಗಳ ಬಾಡಿಗೆ | ಮಳಿಗೆಗಳ ಸಂಖ್ಯೆ ಒಟ್ಟು (12) |
|---|---|---|---|---|---|---|
| 01 | ವಾಣಿಜ್ಯ ಕಟ್ಟಡ | ಉದ್ದ 15 ಅಗಲ 12 | ಉದ್ದ 15 ಅಗಲ 12 | 1,00,000/– | 10,000/– | ಪ.ಜಾ (02)<br>ಪ.ಪಂ (01)<br>ಅಂಗವಿಕಲರಿಗೆ (01)<br>ಸಾಮಾನ್ಯ ವರ್ಗ (8) |

ಮುಂಗಡ ಠೇವಣಿ ಮೊತ್ತ ರೂ.1,00,000/– ಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ ರವರ ಹೆಸರಿಗೆ ಡಿ.ಡಿ ಅಥವಾ ನಗದು ರೂಪದಲ್ಲಿ ದಿ.31–05–2026 ರ ಸಾಯಂಕಾಲ 5.00 ಗಂಟೆ ಒಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಿ ಸ್ವೀಕೃತಿ ಪಡೆಯ ತಕ್ಕದ್ದು ಸಮಯ ಮೀರಿ ಬಂದ ಅರ್ಜಿಗಳನ್ನು ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲಾ. ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಹೆಚ್ಚಿನ ಬಿಡ್ ಕೂಗಿದವರಿಗೆ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟು ವಾಣಿಜ್ಯ ಕಟ್ಟಡ ಹಂಚಿಕೆ ಮಾಡಲು ದಿ.01–06–2026 ಸೋಮವಾರ ರಂದು ಬೆಳಗ್ಗೆ 11:00 ಗಂಟೆಗೆದೇವಸ್ಥಾನದ ಆವರಣದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಆಸಕ್ತಿಯುಳ್ಳ ಬಿಡ್ ದಾರರು ಹೆಚ್ಚಿನ ಸಂಖ್ಯೆಯಲ್ಲಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಿದೆ.

ಬಹಿರಂಗ ಹರಾಜ/ಲಿಲಾವು ನಿಭಂದನೆಗಳು ಮತ್ತು ಷರತ್ತುಗಳು.

01) ಮಳಿಗೆ/ಅಂಗಡಿಗಳು ಪಡೆಯಲಿಚ್ಚಿಸಿ ಠೇವಣಿ ಮೋತ್ತವನ್ನು ಪಾವತಿಸದವರಿಗೆ ಮಾತ್ರ ಷರತ್ತುಗಳನ್ವಯ ಬಹಿರಂಗ ಹರಾಜು/ಲಿಲಾವಿನಲ್ಲಿಭಾಗವಹಿಸಲುಅವಕಾಶ ಕಲ್ಪಿಸಲಾಗುವುದು.

02) ಅರ್ಜುಇದಾರರು ವಿಳಾಸದ ಬಗ್ಗೆ ಗುರುತಿನ ದಾಖಲೆ (ಆಧಾರ ಕಾರ್ಡ, ಮತದಾರರ ಗುರುತಿನ ಚೀಟಿ, ಪ್ಯಾನ ಕಾರ್ಡ, ವಾಹನ ಚಾಲನಾ ಪರವಾನಗಿ ಇತ್ಯದಿ) ಇವುಗಳಲ್ಲಿ ಒಂದನ್ನು ಒದಗಿಸುವುದು)

03)ಪರಿಶಿಷ್ಟ ಜಾತಿ ಮತ್ತು ಪರಿಶೀಷ್ಟ ಪಂಗಡದವರು ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದು.

04)ಅಂಗವಿಕಲರು ಸಕ್ಷಮ ಪ್ರಾಧಿಕಾರದಿಂದ ವಿಕಲಚೇತನ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು ( ಇದರಲ್ಲಿ ಅಂಗವಿಕಲತೆಯ ಶೇಕಡವಾರು ನಮೋದಿದುವುದು)

05)ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002–ನಿಯಮ 31 ಉಪನಿಯಮ 05ರ ಪ್ರಕಾರ ಯಶಸ್ವಿಯಾದ ಬಿಡ್ಡುದಾರರು 10 ದಿನಗಳ ಒಳಗಾಘಿ ಮುಂಗಡವಾಗಿ 06 ತಿಂಗಳ ಬಾಡಿಗೆ ಮೋತ್ತವಬನ್ನು ಬಡ್ಡಿ ರಹಿತವಾಗಿ ಪಾವತಿಸತಕ್ಕದ್ದು. ಈ ಮುಂಗಡ ಮೋತ್ತವನ್ನು ಗುತ್ತಿಗೆ ಅವಧಿಯೊಳಗೆ ಮುಂಗಡ ಮೋತ್ತವನ್ನು ಪಾವತಿಸದೆ ಇದ್ದಲ್ಲಿ ಹರಾಜಿಗೆ ಪಾವತಿಸಲಾದ ಠೇವಣಿ ಮೋತ್ತವನ್ನು ಮುಟ್ಟುಗೊಲು ಹಾಕಿಕೊಂಡು ಹರಾಜು ನಡೆಸಲಾಗುವುದು.

06)ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002 ನಿಯಮ 31 ಉಪನಿಯಮ 09 ರ ಪ್ರಕಾರ ಬಾಡಿಗೆ ನೀಡುವ ಮಳಿಗೆಗಳಲ್ಲಿ ಬಾರ್, ಮಾಂಸ ಮಾರಾಟ, ಮಾಂಸಹಾರದ ಹೋಟೇಲ್ ಮಧ್ಯ ಅಥವಾ ಮಾದಕ ಪಾನೀಯಗಳ ಅಂಗಡಿ ಅಥವಾ ಲೈವ ಬ್ಯಾಂಡಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

07)ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002 ನಿಯಮ 31 ಉಪನಿಯಮ 12 ರ ಪ್ರಕಾರ ಹಿಂದುಗಳಲ್ಲದವರಿಗೆ ಗುತ್ತಿಗೆಯನ್ನು ನೀಡುವುದಿಲ್ಲಾ.

08)ಮುಂಗಡ ಮೋತ್ತ 1,00,000/– ಗಳನ್ನು ದಿನಾಂಕ:– 31–05–2026 ರ ಸಾಯಂಕಾಲ 05:00 ಗಂಟೆಯ ಒಳಗಾಘಿ ಪಾವತಿಸ ತಕ್ಕದ್ದು.

09)ಬಿಡ್ಡಾರರು ಹರಾಜಿನಲ್ಲಿ ಭಾಗವಹಿಸಲು ಮೊದಲು ಮಳಿಗೆಗಳನ್ನು ಪರಿಶಿಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸಲತಕ್ಕದ್ದು ಮಳಿಗೆ ಪಡೆದ ನಂತರ ಮಳಿಗೆಯನ್ನು ಯಾವುದೆ ಕಾರಣಕ್ಕೆ ಮಾರ್ಪಾಡುಗಳನ್ನು ದೇವಸ್ಥಾನದ ವತಿಯಿಂದ ಮಾಡಿಕೊಡಲಾಗುವುದಿಲ್ಲಾ. ಬಿಡ್ಡಾರರು ತಮ್ಮ ಸ್ವಂತ ಖರ್ಚಿನಲ್ಲಿ ಮಳಿಗೆ ಮಾರ್ಪಾಡು ಮಾಡಲು ದೇವಸ್ಥಾನದ ವತಿಯಿಂದ ಪೂರ್ವಾನುಮತಿ ಪಡೆಯತಕ್ಕದ್ದು.

10) ಯಶಸ್ವಿಯಾಗಿ ಇರುವ ಬಿಡದಾರರ ಠೇವಣಿಯನ್ನು ಹರಾಜು ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಬಿಡ್ ದಾರರಿಗೆ ಹಿಂದಿರುಗಿಸಲಾಗುವುದು.

11) ಮಾಸಿಕ ಬಾಡೆಗೆ ನೀಡುವ ಅಂಗಡಿ ಮಳಿಗೆಗಳನ್ನು ಪ್ರಸ್ತುತ ಇರುವ ಸ್ಥಿತಿಯಲ್ಲಿಯೇ ಹರಾಜು ಮಾಡಲಾಗುವುದು.

12) ಯಶಸ್ವಿ ಬಿಡ್ಡಾರರು ಇ.ಎಂ.ಡಿ ಠೇವಣಿ ಮೋತ್ತವನ್ನು ಬಾಡಿಗೆ ಅವಧಿ ಮುಗಿದ ನಂತರ ಯಾವುದೆ ಬಾಕಿ ಇಲ್ಲದೆ ಇದ್ದಲ್ಲಿ ಮೂಲ ಠೇವಣಿಯ ರಶೀದಿ ಹಾಜರು ಪಡಿಸಿ ಬಡ್ಡಿ ರಹಿತವಾಗಿ ಹಿಂಪಡೆಯಲು ಬದ್ದರಾಗಿರುವತಕ್ಕದ್ದು.

13) ಟೆಂಡರನಲ್ಲಿ ಪಡೆದ ಅಂಗಡಿ ಮಳಿಗೆಗಳ ಸ್ಥೀರಿಕರಣ ಆದೇಶಗೊಂಡ ದಿನಾಂಕದಿಂದ ಗರಿಷ್ಠ 5 ವರ್ಷಗಲ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ ಹಾಗೂ 2 ನೇ ವರ್ಷ ಕ್ಕೆ ಹರಾಜು ಮೋತ್ತದ ಮೇಲೆ ಪ್ರತಿ ವರ್ಷ ಶೇಕಡ 10 ರಂತೆ ಅಥವಾ ಸರ್ಕಾರ ಕಾಲ ಕಾಲಕ್ಕೆ ನಿಗಧಿಪಡಿಸುವ ಆದೇಶಕ್ಕುನುಗುಣವಾಗಿ ಪ್ರತಿವರ್ಷವು ಬಾಡಿಗೆ ಮೋತ್ತ ಹೆಚ್ಚಳಕ್ಕೆ ಒಳಪಟ್ಟಿರುತ್ತದೆ.

14) ಟೆಂಡರ ಅವಧಿಯು ಮುಗಿದ ಅಂಗಡಿ ಮಳಿಗೆಗಳನ್ನು ಸುಸ್ಥಿತಿಯಲ್ಲಿ ದೇವಾಲಯಕ್ಕೆ ಬಿಟ್ಟು ಕೋಡತಕ್ಕದ್ದು ಹಾಗೂ ಒಂದು ವೇಳೆ ಅಂಗಡಿ ಮಳಿಗೆಯನ್ನು ಹಿಂದುಗಿಸದೆ ಹೋದಲ್ಲಿ ಬಾಡಿಗೆ ಮುಕ್ತಾಯದ ದಿನಾಂಕದಂದು ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಪ್ರತಿ ತಿಂಗಳು ನಷ್ಟ ಪರಿಹಾರ ವನ್ನು ಶೇ% 18% ರಷ್ಟು ಬಡ್ಡಿಯೊಂದಿಗೆ ಪಾವತಿಸಲು ಬದ್ದರಾಗಿರುತ್ತಾರೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರರು ಬಸವಕಲ್ಯಾಣ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ ರವರಿಗೆ ಸಲ್ಲಿಸತಕ್ಕದ್ದು.

15) ಹೆಚ್ಚಿನ ಬಿಡ್ಡಾರರು ಪ್ರತಿ ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ 05ನೇ ತಾರೀಖಿನೋಳಗೆ ಪಾವತಿಸತಕ್ಕದ್ದು ವಿಳಂಬವಾಗಿ ಪಾವತಿಸುವ ಮೋತ್ತಕ್ಕೆ ಶೇಖ.18% ರ ದರದಂತೆ ಬಡ್ಡಿಯನ್ನು ಪಾವತಿಸಕೋಳ್ಳಲಾಗುವುದು ನಂತರವೂ ಸತತವಾಗಿ 2 ತಿಂಗಲಳ ಅವಧಿಗೆ ಬಾಡಿಗೆ ಪಾವತಿಸದೆ ಇದ್ದಲ್ಲಿ ಸದರಿ ಅಂಗಡಿ ಮಳಿಗೆಯನ್ನು ತೆರವುಗಳಿಸಿ, ಮರು ಹರಾಜು ಮಾಡುವ ಅಧಿಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ ರವರಿಗೆ ದತ್ತವಾಗಿರುತ್ತದೆ.

16) ದೇವಾಲಯಕ್ಕೆ ಸೇರಿದ ಅಂಗಡಿ ಮಳಿಗೆಯನ್ನು ಹಿಂದೆ ಬಾಡಿಗೆಗೆ ಪಡೆದು ಬಾಕಿ ಉಳಿಸಿಕೊಂಡಿರುವ/ಬಇನಾಮಿ ಹೆಸರಿನಲ್ಲಿಯೂ ಸಹ ಬಿಡ್ ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲಾಈ ನಿಯಮ ಬಾಹಿರಾಗಿ ಟೆಂಡನಲ್ಲಿ ಭಾಗವಹಿಸಿರುವುದು ಕಂಡುಬಂದಲ್ಲಿ ಅಂತವರ ಬಿಡ್ ಆದ ಹರಾಜನ್ನು ರದ್ದುಗೋಳಿಸಿ ಪಾವತಿಸಲಾದ ಇ.ಎಂ.ಡಿ ಮೋತ್ತವನ್ನು ದೇವಾಲಯದ ಉಳಿತಾಯ ಖಾತೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

17) ಯಶಸ್ವಿಯಾದಬಿಡ್ ದಾರರು ಅಂಗಡಿ ಮಳಿಗೆಯ ಆಸ್ತಿ ತೆರಿಗೆ ವಿದ್ಯೂತ ಹಾಗೂ ನೀರಿನ ಶುಲ್ಕವನ್ನು ಸಂಬಂಧಪಟ್ಟ ಇಲಾಖೆಯಲ್ಲಿ ಪ್ರತಿ ತಿಂಗಳು ಸಂಬಂಧ ಪಟ್ಟ ಇಲಾಖೆಯ ನಿಯಮುನಸಾರ ಪಾವತಿಸತಕ್ಕದ್ದು ಹಾರಜು ಮುಗಿದ ನಂತ ಅಂತಿಮ ಬಿಲ್ಲು ಪಾವತಿ ಪ್ರತಿಗಳನ್ನು ಈ ಕಛೇರಿಗೆ ಸಲ್ಲಿಸ ತಕ್ಕದ್ದು.

18) ಅಂಗಡಿಗಳಲ್ಲಿ ಕೆಲಸಕ್ಕಾಗಿ ಬಾಲ ಮಕಾರ್ಮಿಕರನ್ನು ನೇಮಿಸಿಕೋಳ್ಳಲು ಅವಕಾಶಿವಿರುದಿಲ್ಲಾ.

19) ಹರಾಜಿನ ಸಮಯದಲ್ಲಿ ಹೊಸ ನಿಭಂದನೆ ಮತ್ತು ಷರತ್ತುಗಳನ್ನು ವಿಧಿಸುವ ಅಧಿಖಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ ರವರಿಗೆ ಇರುತ್ತದೆ.

20) ಹರಾಜಿ ಮೋತ್ತವನ್ನು ಅಂತಿಮವಾಗಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ ರವರೆಇಗೆ ಇರುತ್ತದೆ.

21) ಹರಾಜಿನಲ್ಲಿ ಭಾಗವಹಿಸುವ ಬಿಡ್ಡಾರರು ಶಾಂತಿ ಮತ್ತು ಶಿಸ್ತು ಕಾಪಾಡತಕ್ಕದ್ದು.

ಕಾರ್ಯನಿರ್ವಾಹಣಾಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಚಾಂಗಲೇರ/–

# ಕೊಪ್ಪಳ ಜಿಲ್ಲೆಯಲ್ಲಿನ ಸ್ಕ್ಯಾನಿಂಗ್ ಸೆಂಟರ್‌ಗಳ ಕಟ್ಟುನಿಟ್ಟಿನ ತಪಾಸಣೆಗೆ ನಿರ್ಣಯ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಲಿಂಗ ಆಯ್ಕೆತಡೆ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನುಬಲಪಡಿಸುವಉದ್ದೇಶದಿಂದ ರಚನೆಯಾದ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ (ಪಿಸಿ ಅಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಜಿಲ್ಲಾ ಸಲಹಾ ಸಮಿತಿ ಸಭೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಲಿಂಗರಾಜು ಟಿ ಅವರ ಅಧ್ಯಕ್ಷತೆಯಲ್ಲಿ ಮೇ 22ರಂದು ನಡೆಯಿತು.

ಜಿಲ್ಲಾಡಳಿತದ ಭವನದಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನು ಮನ್ನಷ್ಟು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಸಮಿತಿಯ ಸದಸ್ಯರು ತಮ್ಮ ಕರ್ತವ್ಯದ ನಡುವೆಯೂ ಜಂಟಿ ತಪಾಸಣೆಗೆ ಅಗತ್ಯ ಸಮಯ ಮೀಸಲಿಡಬೇಕೆಂದು ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು ಟಿ. ಅವರು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮೊದಲ ತ್ರೈಮಾಸಿಕದ ಅವಧಿ ಏಪ್ರಿಲ್‌ನಿಂದ ಇದುವರೆಗೆ ಜಿಲ್ಲೆಯಾದ್ಯಂತ ಈಗಾಗಲೇ 34 ಸ್ಕ್ಯಾನಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲಾಗಿದೆ. ಪ್ರಸ್ತುತ ತಪಾಸಣಾ ಪ್ರಗತಿ ಶೇ.100ರಷ್ಟಿದ್ದು, ಉಳಿದ ಕೇಂದ್ರಗಳಿಗೂ ಭೇಟಿ ನೀಡಿ ಪರಿಶೀಲನೆ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಸ್ಕಾ ??ನಿಂಗ್ ಸೆಂಟರಗಳಿಗೆ ನಿಯಮಿತ ತಪಾಸಣೆ, ಪಾರದರ್ಶಕತೆ ಮತ್ತು ಕಾಯ್ದೆಯ ಸಮರ್ಪಕ ಅನುಷ್ಠಾನದ ಕುರಿತು ಸಭೆಯಲ್ಲಿ ಸದಸ್ಯರು ನಾನಾ ಸಲಹೆಗಳನ್ನು ನೀಡಿದರು. ಜಿಲ್ಲೆಯಲ್ಲಿ ಪ್ರಸ್ತುತ 60 ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸುತ್ತಿವೆ. ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.



ಕೆಪಿಎಂಇ ನೋಂದಣಿ ಸಂಖ್ಯೆ ಹೊಂದಿದ ಸ್ಕಾ ??ನಿಂಗ್ ಸೆಂಟರಗಳನ್ನು ಪಿಸಿ ಅಂಡ್ ಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ನೋಂದಣಿ ಹಾಗೂ ನವೀಕರಣ ಮಾಡಲು ಬೇಕಾದ ಎಲ್ಲಾ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ ಕೊಪ್ಪಳದ ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಪೋಸ್ಟ್‌ಗ್ರಾ ??ಜುಯೇಟ್ ಸ್ಟಡೀಸ್ ಅಂಡ್ ರಿಸರ್ಚ್ ಸೆಂಟರ್, ಗಂಗಾವತಿಯ ಬಂಬೂ ಬಜಾರ್‌ದಲ್ಲಿನ ಚೈತನ್ಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಗಂಗಾವತಿಯ ಕಂಪ್ಲಿ ರೋಡನಲ್ಲಿರುವ ಮಲ್ಲಿಕಾರ್ಜುನ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್, ಕೊಪ್ಪಳ ಸಿಟಿಯ ಹೊಸಪೇಟೆ ರಸ್ತೆಯಲ್ಲಿನ ಶಿವಶಾಂತ ಕಾಲೋನಿಯ ನವಜೀವನ ಹಾಸ್ಪಿಟಲ್, ಗಂಗಾವತಿಯ ರಾಯಚೂರು ರಸ್ತೆಯಲ್ಲಿರುವ ಸಿದ್ದೇಶ್ವರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಇವರ ದಾಖಲಾತಿಗಳನ್ನು ಸಭೆಯಲ್ಲಿ ಪರಿಶೀಲಿಸಿ ಈ ಸ್ಕಾ ??ನಿಂಗ್ ಸೆಂಟರಗಳ ಪಿಸಿ ಪಿಎನ್‌ಡಿಟಿ ಪರವಾನಿಗೆಯನ್ನು ಪಿಸಿ ಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ನೋಂದಣಿ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಕೊಪ್ಪಳದ ದಿವಟರನಗರದಲ್ಲಿನ ಶ್ರೀ ಮಂಗಳ ಹಾಸ್ಪಿಟಲ್ ಅವರ ಮನವಿಯನ್ನು ಪರಿಶೀಲಿಸಿ ಈ ಸ್ಕಾ ??ನಿಂಗ್ ಸೆಂಟರನ ಪಿಸಿ ಪಿಎನ್‌ಡಿಟಿ ಪರವಾನಿಗೆಯನ್ನು ಪಿಸಿ ಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ನವೀಕರಣ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯಲ್ಲಿ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ್ ಎಂ. ಹೆಚ್., ಸದಸ್ಯ ಕಾರ್ಯದರ್ಶಿ ಕಿಮ್ಸ್ ಆಸ್ಪತ್ರೆಯ ರೇಡಿಯಾಲಜಿಸ್ಟ್ ಡಾ. ದಯಾನಂದಸ್ವಾಮಿ, ಪಿಸಿಪಿಎನ್‌ಡಿಟಿ ಕಾರ್ಯಕ್ರಮದ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಮುನಿರಾಬಾದ್ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಡಾ.ಕೆ.ಎಚ್.ತೊಗರಿ, ಜಿಲ್ಲಾ ಸಲಹಾ ಸಮಿತಿ ಸದಸ್ಯರಾದ ಮಕ್ಕಳ ತಜ್ಞರಾದ ಡಾ.ಗಿರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ವಕೀಲರಾದ ಶಂಕರ ಬಿಸರಳ್ಳಿ, ರಿಲೀಫ್ ಫೌಂಡೇಶನ್ ಹೆಲ್ತ್ ಸರ್ವಿಸ್ ಕೊಪ್ಪಳದ ಎನ್‌ಜಿಓದ ಡಾ.ವಿಶ್ವನಾಥ ನಲ್ವಾಡ, ಧ್ವನಿ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷರಾದ ಶಂಕ್ರಪ್ಪ ಬಿ ಸುರಳ್, ಅಲ್ಫಾ ಹೆಲ್ತ್ ಎಜ್ಯುಕೇಶನ್ ಅಂಡ್ ರೂರಲ್ ಡೆವಲಪಮೆಂಟ್ ಫೌಂಡೇಶನ್ ಕೊಪ್ಪಳದ ಸಲೀಮಾ ಜಾನ್ ಉಪಸ್ಥಿತರಿದ್ದರು.

# ಬಕ್ರೀದ್ ವೇಳೆ ಅನಧೀಕೃತ ಜಾನುವಾರುಗಳ ವಧೆ, ಸಾಗಣೆಗೆ ಅವಕಾಶವಿಲ್ಲ: ಜಿಲ್ಲಾಧಿಕಾರಿ ಡಾ. ಸುರೇಶ ಬಿ.ಇಟ್ನಾಳ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಮೇ 28ರಂದು ಆಚರಿಸಲಾಗುವ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅನಧೀಕೃತ ಜಾನುವಾರುಗಳ ವಧೆ ಹಾಗೂ ಜಾನುವಾರುಗಳ ಸಾಗಣೆಗೆ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಹೇಳಿದರು.

ಬಕ್ರೀದ್ ಆಚರಣೆ ಸಂದರ್ಭದಲ್ಲಿ ಅನಧೀಕೃತ ಜಾನುವಾರುಗಳ ವಧೆ ಹಾಗೂ ಜಾನುವಾರುಗಳ ಸಾಗಾಣಿಕೆಯನ್ನು ತಡೆಗಟ್ಟುವ ಕುರಿತು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 21ರಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಕಾಯ್ದೆ ಮತ್ತು ಸಂರಕ್ಷಣೆ ಅಧಿನಿಯಮ–2020ರ ಅನ್ವಯ ಗೋ ಹತ್ಯೆ ನಿಷೇಧಿಸಲಾಗಿದೆ. ಎಲ್ಲಾ ವಯಸ್ಸಿನ ಆಕಳು, ಆಕಳು ಕರು, ಹೋರಿ, ಗೂಳಿ ಮತ್ತು 13 ವರ್ಷದೊಳಗಿನ ಎಮ್ಮೆ ಮತ್ತು ಕೋಣಗಳ ಹತ್ಯೆಯನ್ನು ನಿಷೇಧಿಸಲಾಗಿದೆ. ಹದಿಮೂರು ವರ್ಷ ಮೇಲ್ಪಟ್ಟ ಎಮ್ಮೆ ಅಥವಾ ಕೋಣವನ್ನು ಸಕ್ಷಮ ಪ್ರಾಧಿಕಾರಿಯ ಶಿಫಾರಸ್ಸಿನ ಮೇರೆಗೆ ವಧೆಗೆ ಅವಕಾಶ ನೀಡಲಾಗಿದೆ. ಉಳಿದ ಎಲ್ಲ ಜಾನುವಾರುಗಳ ವಧೆಯನ್ನು ಸಂಪೂರ್ಣ ನಿಷೇಧಿಸಲಾಗಿದೆ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಕಾಯ್ದೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವ ಅತ್ಯವಶ್ಯಕತೆ ಇದೆ. ಈ ಕುರಿತು ಪಶುಪಾಲನಾ ಇಲಾಖೆ, ಪೊಲೀಸ್ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ತಂಡಗಳನ್ನು ರಚಿಸಿ ಸೂಕ್ತ ನಿಗಾ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ಕೃಷಿ ಅಥವಾ ಪಶುಸಂಗೋಪನೆಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಜಾನುವಾರು ಸಾಗಣೆಯನ್ನು ಪರವಾನಿಗೆ ಪಡೆದು ಜಾನುವಾರು ಸಾಗಣೆ ಮಾಡಬೇಕು. ಅಪರಾಧ ಸಾಬೀತಾದಲ್ಲಿ ಮೂರರಿಂದ ಏಳು ವರ್ಷದವರೆಗೆ ಕಾರವಾಸ ಅಥವಾ ಒಂದು ಜಾನುವಾರಿಗೆ 50 ಸಾವಿರದಿಂದ 5 ಲಕ್ಷಗಳವರೆಗೆ ಜುಲ್ಮಾನೆಗೆ ಅವಕಾಶವಿರುತ್ತದೆ. ಕೃಷಿ ಅಥವಾ ಪಶುಸಂಗೋಪನೆಯ ಉದ್ದೇಶಕ್ಕೆಂದು ರಾತ್ರಿ ವೇಳೆ ಹಸು, ಕರು, ಎತ್ತು, ಎಮ್ಮೆ, ಕೋಣಗಳನ್ನು ಸಾಗಣೆ ಮಾಡುವಂತಿಲ್ಲ. ಪರವಾನಗಿ ಪಡೆದು–ಕೊಂಡಾಗ್ಯೂ ಮಾಲೀಕತ್ವದ ದಾಖಲೆ ಮತ್ತು ಪಶುವೈದ್ಯಕೀಯ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹೊಂದಿರಬೇಕು. ಪರವಾನಿಗೆ ಪಡೆದು ಸಾಗಣೆ ಮಾಡುತ್ತಿದ್ದಲ್ಲಿ ಜಾನುವಾರು ಸಂಖ್ಯೆ, ಕಳುಹಿಸಿದವರು ಮತ್ತು ಪಡೆಯುವವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಯನ್ನು ದೊಡ್ಡ ಅಕ್ಷರಗಳಲ್ಲಿ ವಾಹನದ ಮೇಲೆ ಬರೆಯುವುದು ಹಾಗೂ ಜಾನುವಾರುಗಳ ಮಾಲೀಕರು ಮಾಲೀಕತ್ವದ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ ಎಂದರು. ಚೆಕ್‌ಪೋಸ್ಟಗಳಲ್ಲಿ ಪಶುವೈದ್ಯಾಧಿಕಾರಿಗಳನ್ನು ಸಹ ನಿಯೋಜಿಸಬೇಕು ಎಂದು ಹೇಳಿದರು.

ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅನಧೀಕೃತ ಜಾನುವಾರುಗಳ ಸಾಗಾಟದ ಮೇಲೆ ನಿಗಾವಹಿಸಲು ಪಶು ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ ತಂಡಗಳನ್ನು ರಚಿಸಿ ಕ್ರಮ ವಹಿಸಲಾಗುತ್ತಿದೆ. ಜಿಲ್ಲೆಯಲ್ಲಿ 16 ಕಡೆಗಳಲ್ಲಿ ಚೆಕ್‌ಪೋಸ್ಟ್ ಮಾಡಲಾಗುತ್ತದೆ. ಕೊಪ್ಪಳ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಹಿರೇಸಿಂದೋಗಿ ರಸ್ತೆಯ ಶ್ರೀಶೈಲ ನಗರ ಕ್ರಾಸ್ ಹತ್ತಿರ, ಹೊಸಪೇಟೆ ರಸ್ತೆ ಎಸ್.ಎಫ್.ಎಸ್ ಶಾಲೆ ಹತ್ತಿರ, ಗದಗ ರಸ್ತೆಯ ಜಿಲ್ಲಾ ಕ್ರಿಡಾಂಗಣದ ಹತ್ತಿರ ಹಾಗೂ ಕಿನ್ನಾಳ ರಸ್ತೆಯ ಭಾಗ್ಯನಗರ ಕ್ರಾಸ್ ಬಳಿ ಚೆಕ್‌ಪೋಸ್ಟ್ ತೆರೆಯಲಾಗುವುದು. ಅದೇ ರೀತಿ ಮುನಿರಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಎನ್–ಹೆಚ್–50ರಲ್ಲಿ ಬರುವ ಹೊಸಲಿಂಗಾಪುರ–ಹುಲಗಿ ಕ್ರಾಸ್ ಹತ್ತಿರ, ಅಳವಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮುಂಡರಗಿ ರಸ್ತೆಯ ಬೆಳಗಟ್ಟಿಯಲ್ಲಿ, ಯಲಬುರ್ಗಾ ಪೊಲೀಸ್ ಠಾಣೆ ವ್ಯಾಪ್ತಿಯ ಗಜೇಂದ್ರಗಡ ರಸ್ತೆಯಲ್ಲಿನ ಬಂಡಿ ಗ್ರಾಮದಲ್ಲಿ ಹಾಗೂ ಗದಗ ರಸ್ತೆಯ ಸಂಕನೂರು ಕ್ರಾಸ್ ಹತ್ತಿರ, ಗಂಗಾವತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಆನೆಗೊಂದಿ ರಸ್ತೆಯ ತಹಶೀಲ್ ಆಫಿಸ್ ಹತ್ತಿರ ಹಾಗೂ ಕೊಪ್ಪಳ ರಸ್ತೆಯ ವಡ್ಡರಹಟ್ಟಿ ಕ್ಯಾಂಪ್ ರಸ್ತೆಯಲ್ಲಿ, ಕುಕನೂರು ಪೊಲೀಸ್ ಠಾಣೆ ವ್ಯಾಪ್ತಿಯ ಗದಗ ರಸ್ತೆಯ ಬನ್ನಿಕೊಪ್ಪದಲ್ಲಿ, ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಕಂಪ್ಲಿ ರಸ್ತೆಯಲ್ಲಿನ ಚಿಕ್ಕಜಂತಕಲ್ಲನಲ್ಲಿ ಹಾಗೂ ಹೊಸಪೇಟೆ ರಸ್ತೆಯ ಕಡೇ ಬಾಗಿಲುದಲ್ಲಿ, ಕಾರಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಸಿಂಧನೂರು ರಸ್ತೆಯ ಚೆನ್ನಳ್ಳಿ ಕ್ರಾಸ್ ಬಳಿ, ಕುಷ್ಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಇಳಕಲ್ಲ ರಸ್ತೆಯಲ್ಲಿನ ಕ್ಯಾದಿಗುಪ್ಪಾ ಕ್ರಾಸ್ ಬಳಿ ಮತ್ತು ತಾವರಗೇರಾ ಠಾಣೆ ವ್ಯಾಪ್ತಿಯಲ್ಲಿ ಬರುವ ಮುದಗಲ್ಲ ರಸ್ತೆಯ ಕಿಲ್ಲಾರ ಹಟ್ಟಿ ಬಳಿ ಸೇರಿ ಜಿಲ್ಲೆಯಲ್ಲಿ ಒಟ್ಟು 16 ಚೆಕ್‌ಪೋಸ್ಟ್ ತೆರೆಯಲಾಗುತ್ತಿದೆ. ಪ್ರಾಣಿ ಬಲಿ ನಿಷೇದ ಕಾಯ್ದೆ–1959 ಕಾಯ್ದೆಯ ಸೆಕ್ಷನ್ (3) ರನ್ವಯ ಸಾರ್ವಜನಿಕ ಸ್ಥಳಗಳಲ್ಲಿ, ಪೂಜಾ ಸ್ಥಳಗಳಲ್ಲಿ ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಾವುದೇ ರೀತಿಯ ಪ್ರಾಣಿಯ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರಾದ ಡಾ. ಪಿ.ಎಂ.ಮಲ್ಲಯ್ಯ ಅವರು ಸಭೆಗೆ ಮಾಹಿತಿ ನೀಡಿದರು.ಸಭೆಯಲ್ಲಿ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲೆಯ ವಿವಿಧ ತಾಲ್ಲೂಕಿನ ಪಶುವೈದ್ಯಾಧಿಕಾರಿಗಳು ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇತರೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನಿಷ್ಟ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆಗೆ ಎಐಟಿಯುಸಿ ಸ್ವಾಗತ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 13103/2023 ಮತ್ತು ಇತರ ಪ್ರಕರಣಗಳಲ್ಲಿ ನೀಡಲಾದ ತೀರ್ಪಿನ ಅನ್ವಯ, ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಗಳನ್ನು ರದ್ದುಪಡಿಸಲಾಗಿತ್ತು. ಸುಪ್ರೀಂಕೋರ್ಟ್‌ನ ಮಾರ್ಗಸೂಚಿಗಳನ್ನು ಅನುಸರಿಸಿ ಹೊಸದಾಗಿ ಕನಿಷ್ಟ ವೇತನ ಲೆಕ್ಕಾಚಾರ ಮಾಡಲು ನ್ಯಾಯಾಲಯವು ನಿರ್ದೇಶನ ನೀಡಿತ್ತು.

ಈ ಪರಿಷ್ಕೃತ ಅಂತಿಮ ಅಧಿಸೂಚನೆಯು ರಾಜ್ಯದ ಒಟ್ಟು 99 ಅನುಸೂಚಿತ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನ್ವಯವಾಗಲಿದೆ.

2022 ರಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆಯ ಭಾಗವಾಗಿ, ಕಳೆದ ಎರಡು ವರ್ಷಗಳ ಕಾಲದ ವೇರಿಯಬಲ್ ಡಿಯರ್ನೆಸ್ ಅಲೋಯನ್ಸ್ (VDA) ಅನ್ನು ಸೇರಿಸುವ ಅಗತ್ಯವನ್ನು ಸರ್ಕಾರವು ಪರಿಗಣಿಸಿದೆ.

ಕನಿಷ್ಟ ವೇತನ ಕಾಯ್ದೆ 1948ರ ಕಲಂ 3(1)(ಬಿ) ಮತ್ತು 5(1)(ಬಿ) ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕೌಶಲ್ಯವಾರು ಮತ್ತು ವಲಯವಾರು ವೇತನ ದರಗಳಲ್ಲಿನ ವ್ಯತ್ಯಾಸಗಳನ್ನು ಸರಿಪಡಿಸಿ ಈ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಕಾರ್ಮಿಕರ ದೀರ್ಘಕಾಲದ ಬೇಡಿಕೆಗೆ ಸ್ಪಂದಿಸಿ ಈ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ಕಾರ್ಮಿಕ ಸಚಿವರಿಗೆ ಎಐ–ಟಿಯುಸಿ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಕಾರ್ಮಿಕರ ಹಿತದೃಷ್ಟಿಯಿಂದ ಈ ಅಂತಿಮ ಅಧಿಸೂಚನೆಯನ್ನು ತಕ್ಷಣದಿಂದಲೇ ಜಾರಿಗೆ ತರುವಂತೆ ಮತ್ತು ರಾಜ್ಯದ ಎಲ್ಲಾ ಕಾರ್ಮಿಕರಿಗೆ ಇದರ ಸೌಲಭ್ಯ ದೊರೆಯುವಂತೆ ಮಾಡಬೇಕೆಂದು ಎಐಟಿಯುಸಿ ಕಲಬುರಗಿ ಜಿಲ್ಲಾ ಸಮಿತಿಯು ಸರ್ಕಾರವನ್ನು ಆಗ್ರಹಿಸುತ್ತದೆ. ಮುಂದುವರೆದು ಮ್ಯಾನ ಪವಾರ ಏಜೆನ್ಸಿ ಮತ್ತು ಗುತ್ತಿಗೆ ಪದ್ಧತಿಯನ್ನು ಎಲ್ಲಾ ರಂಗದಲ್ಲಿ ರದ್ದುಪಡಿಸಿ ನೇರ ನೇಮಕಾತಿ ಮಾಡಿಕೊಳ್ಳಬೇಕೆಂದು ರಾಜ್ಯ ಸರಕಾರವ್ನು ಒತ್ತಾಯಿಸುತ್ತೇವೆ. ಹಾಗೆಯೇ ಕಾರ್ಮಿಕ ಪರವಾಗಿ ಕನಿಷ್ಠ ವೇತನ ಪರಿಷ್ಕರಣೆ ಅಂತಿಮ ಅಧಿಸೂಚನೆಯಿಂದ ಸುಮಾರು ಒಂದು ಕೋಟಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಂಡಿರುವುದು ಕಾರ್ಮಿಕರಿಗೆ ನೆಮ್ಮದಿ ತಂದಿದೆ. ಎಐಟಿಯುಸಿ ದೀರ್ಘ ಕಾಲದ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಒಟ್ಟಿನಲ್ಲಿ ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ಸರಕಾರ ಜಾರಿಗೆ ತಂದಿರುವ ಕ್ರಮವನ್ನು ಮತ್ತೊಮ್ಮೆ ಎಐಟಿಯುಸಿ ರಾಜ್ಯ ಮತ್ತು ಜಿಲ್ಲಾ ಸಮಿತಿ ಸ್ವಾಗತಿಸಿದೆ.

# ಅಂಬಿಗರ ಚೌಡಯ್ಯ ಮೂರ್ತಿ ಮೆರವಣಿಗೆ ,ಪ್ರತಿಷ್ಠಾಪನೆ ಯಶಸ್ವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಗರದ ಗಂಜ್ ಸರ್ಕಲ್‌ನಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ನಿಜ ಶರಣ ಅಂಬಿಗರ ಚೌಡಯ್ಯ ಅವರ 11 ಫೀಟ್ ಉದ್ದನೆಯ ಪಂಚಲೋಹದ ಭವ್ಯ ಮೂರ್ತಿಯನ್ನು ಜಿಲ್ಲಾ ಕೋಲಿ, ಕಬ್ಬಲಿಗ ಸಮಾಜದ ನೇತೃತ್ವದಲ್ಲಿ ಶುಕ್ರವಾರ ಸಡಗರ, ಸಂಭ್ರಮ ಮತ್ತು ಅದ್ದೂರಿಯಾಗಿ ಮೆರವಣಿಗೆ ಮೂಲಕ ತಂದು ಸಕಲ ಪೂಜಾ ವಿಧಿವಿಧಾನಗಳೊಂದಿಗೆ ಕೂಡಿಸಲಾಯಿತು.ಸಂಧ್ಯಾಕಾಲದ ಶುಭಗಳಿಗೆಯ ಅಲ್ಲಿ ಕ್ರೇನ್ ಮೂಲಕ ಮೂರ್ತಿಯನ್ನು ಎತ್ತಿ ಪ್ರತಿಷ್ಠಾಪಿಸುವ ಬೃಹತ್ ಕಟ್ಟೆ ಮೇಲೆ ಕೂಡಿಸಲಾಯಿತು. ಈ ವೇಳೆ ವೇದಮೂರ್ತಿ ಪೂಜಾರಿಯಿಂದ ಸ್ಥಾಪನೆ ಕಟ್ಟೆ ಮತ್ತು ಮೂರ್ತಿ ಪೂಜೆ ಮಂತ್ರ ಘೋಷಣೆಗಳ ಮೂಲಕ ಭಕ್ತಿ ಸಡಗರದಿಂದ ಜರುಗಿತು. ಚೌಡಯ್ಯ ಅವರ ಮೂರ್ತಿ ಲಾರಿಯಿಂದ ಕ್ರೇನ್ ಮೂಲಕ ಕೆಳಗಿಳಿಸಿ ಮೇಲೆತ್ತುವಾಗ ಸಾವಿರಾರು ಜನರಿಂದ ಬಂದ ಘೋಷಣೆಗಳು ಮುಗಿಲು ಮುಟ್ಟಿದರೇ, ಪಟಾಕಿ ಶಬ್ದ ನಗರದಲ್ಲಿ ಎಲ್ಲಡೆ ಸದ್ದು ಮಾಡಿತು. ಸಂಜೆ 6ಗಂಟೆಯಿಂದ 7.15ರತನಕ ನಡೆದ ಮೂರ್ತಿ ಕೂಡಿಸುವ ಕಾರ್ಯಕ್ರಮಕ್ಕೆ ಸಮಾಜದ ಸಾವಿರಾರು ಜನರು ಸೇರಿದಂತೆಯೇ ವಿವಿಧ ಸಮುದಾಯಗಳ ಅನೇಕರು ಭಾಗವಹಿಸಿ ಐತಿಹಾಸಿಕ ಕ್ಷಣಗಳನ್ನು ಕಣ್ಣು ತುಂಬಿಸಿಕೊಂಡರು. ಕಲಬುರಗಿಯಿಂದ ತರಲಾದ ಈ ಮೂರ್ತಿಗೆ ಮಧ್ಯಾಹ್ನ 2 ಗಂಟೆಗೆ ಇಲ್ಲಿನ ಮುದ್ದಾಳ ಸರ್ಕಲ್ ನಲ್ಲಿ ಅಲ್ಲಿ ಸೇರಿದ್ದ ಸಮಾಜದ ಸಾವಿರಾರು ಜನರು ಜೈ ಘೋಷಣೆಗಳಿಂದ ಭವ್ಯ ಸ್ವಾಗತ ನೀಡಿದರು. ನಂತರ ಗಂಗಾಸ್ನಾನ ಮಾಡಿಸಿ, ಪೂಜೆ ನೆರವೇರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮುದ್ದಾಳ ಸರ್ಕಲ್ ನಿಂದ ಆರಂಭವಾದ ಮೆರವಣಿಗೆ ಸರ್ಕಾರಿ ಪದವಿ ಮಹಾವಿದ್ಯಾಲಯ ಸರ್ಕಲ್ ಕನಕ ಸರ್ಕಲ್, ಗಾಂಧಿ ಚೌಕ, ಮೈಲಾಪುರ ಅಗಸಿ ಮೂಲಕ ಮೆರವಣಿಗೆ ಕೂಡಿಸುವ ಸ್ಥಳ ತಲುಪಿತು. ಮಾರ್ಗದೊದ್ದಕ್ಕೂ ಚೌಡಯ್ಯ ಮತ್ತು ಕೋಲಿ ಸಮಾಜದ ಹೆಸರಿನ ಘೋಷಣೆಗಳು ಮುಗಿಲು ಮುಟ್ಟಿದವು. ಚೌಡಯ್ಯ ಬಾವಚಿತ್ರವಿರುವ ಸಾವಿರಾರುಬಾವುಟಗಳು ರಾರಾಜಿಸಿದವು. ಮುದ್ದಾಳ ಸರ್ಕಲ್, ಸುಭಾಷ ವೃತ್ತ, ಗಾಂಧಿ ವೃತ್ತ, ಮೈಲಾಪುರ ಅಗಸಿ ಮತ್ತು ಗಂಜ್ ಸರ್ಕಲ್ ಗಳಲ್ಲಿ ಸಮಾಜದ ವಿವಿಧ ಮುಖಂಡರು ಪೂಜೆ ಸಲ್ಲಿಸಿದರು. ದಾರಿಯುದ್ದಕ್ಕೂ ಮೂರ್ತಿ ಹೊತ್ತ ವಾಹನಕ್ಕೆ ನೀರು ಎರೆಯುವ ಮೂಲಕ ಅನೇಕರು ಭಕ್ತಿ ಮೆರೆದರು. ಸಮಾಜದ ಈ ವಿಶೇಷ ಕಾರ್ಯಕ್ರಮದಲ್ಲಿ ಮುಖಂಡರಾದ ಮೌಲಾಲಿ ಅನಪುರ, ದೇವು ಬಳಿಚಕ್ರ, ಸುಭಾಷಚಂದ್ರ ಕಟಕಟ್ಟಿ, ತಾಲೂಕು ಅಧ್ಯಕ್ಷ ನಿಂಗಪ್ಪ ಜಾಲಗಾರ, ಬಸವರಾಜಪ್ಪ ವಡಗೇರಿ, ಅಯ್ಯಪ್ಪ ನಾಲ್ವೋಡಿ, ಭೀಮರೆಡ್ಡಿ ಯರಗೋಳ, ಮಹಾದೇವಪ್ಪ ಗಣಪುರ, ಮಲ್ಲಯ್ಯ ಕಡ್ಡಿ, ಭೀಮಣ್ಣ ಮುಂಡರಗಿ, ಬಸವರಾಜಪ್ಪ ಬಾಗ್ಲಿ, ಸಣ್ಣ ಹಣಮಂತಪ್ಪ ಬಳಿಚಕ್ರ, ಮಲ್ಲಣ್ಣ ಕೊಯಮುತ್ತೂರು,ಮುದುಕಪ್ಪ ಚಾಮನಹಳ್ಳಿ ತಾಲೂಕ್ ಅಧ್ಯಕ್ಷರು ತಾಲೂಕ್ ಗೌರವಾಧ್ಯಕ್ಷರು ಮಲ್ಲಿಕಾರ್ಜುನ ಕೌಲೂರು, ತಾಲೂಕು ಪ್ರಧಾನ ಕಾರ್ಯದರ್ಶಿಗಳು ಕಂಡಪ್ಪ ಹೊಸೂರ್, ಬಸವರಾಜ್ ಹಿರೇನೂರ್ , ವೆಂಕಟೇಶ್ ಬಂದಳ್ಳಿ , ರೆಡ್ಡಿ ಬಂದಳ್ಳಿ , ನಾಗಪ್ಪ ಯಡ್ಡಳಿ, ಭೀಮರಾಯ ಕಡಿ ಶಾಪುರ್

ಶರಣಪ್ಪ ಮೊಟನಳ್ಳಿ, ಶಾಂತಪ್ಪ, ದುರ್ಗಪ್ಪ, ರಾಜು ಸೈದಾಪುರ, ನರಸಪ್ಪ ಬಾಗ್ಲಿ, ರಾಮಣ್ಣ ಪೂಜಾರಿ, ಶರಣಪ್ಪ ಚಾಮನಳ್ಳಿ, ಲಕ್ಷ್ಮಣ ಬಾಡದ, ಮೋಹನ್ ಬಾಬು ಸೇರಿದಂತೆಯೇ ಇತರರಿದ್ದರು.

> ನಗರದಲ್ಲಿ ಪ್ರಪ್ರಥಮ ಬಾರಿಗೆ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರವನ್ನು ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ನಮ್ಮ ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗಂಗಾಮತ ಕೋಲಿ ಸಮಾಜದವರು ಭಾಗಿಯಾಗಿ ಭವ್ಯವಾದ ಮೆರವಣಿಗೆ ಮೂಲಕ ನಗರದಲ್ಲಿ ಮೆರಗು ತಂದು ಮೂರ್ತಿನ ಪ್ರತಿಷ್ಠಾಪನೆ ಮಾಡಲು ಸಹಕರಿಸಿದ ಸರ್ವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ, 12ನೇ ಶತಮಾನದ ಕಾಯಕಶರಣ ನಿಜಶರಣ ಅಂಬಿಗರ ಚೌಡಯ್ಯನವರ ಕೃಪ ಆಶೀರ್ವಾದ ನಮ್ಮ ಸಮಾಜದ ಮೇಲೆ ಇರಲಿ ಎಂದರು.
>
> **ನಿಂಗಪ್ಪ ಜಾಲಗಾರ**
> **ಕೋಲಿ ಸಮಾಜದ ತಾಲೂಕು ಅಧ್ಯಕ್ಷ**

# ಯಾವುದೇ ಜನರಲ್ ಬಾಡಿ ಸಭೆ ಇಲ್ಲದೇ ಪದಾಧಿಕಾರಿಗಳ ಆಯ್ಕೆ: ಲಾರಿ ಮಾಲಿಕರ ಸಂಘದಲ್ಲಿ ಗೊಂದಲ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ಜಿಲ್ಲಾ ಲಾರಿ ಮಾಲೀಕರ ಸಂಘದಲ್ಲಿ ಯಾವುದೇ ಜನರಲ್ ಬಾಡಿ ಸಭೆ ನಡೆಸದೇ ನೂತನ ಪದಾಧಿಕಾರಿಗಳನ್ನು ಏಕಾಏಕಿ ಆಯ್ಕೆ ಮಾಡಿರುವ ಕ್ರಮಕ್ಕೆ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಎನ್.ಟಿ. ಮುಲ್ಲಾ ಮೆಹಬೂಬ್ ಬಾಷ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ನಿಯಮಾವಳಿ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಕೆಲವರು ರಾಜಕೀಯ ಪ್ರಭಾವ ಬಳಸಿ ಸಂಘದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಸಂಘದಲ್ಲಿ ಸುಮಾರು 300ಕ್ಕೂ ಹೆಚ್ಚು ಸದಸ್ಯರಿದ್ದು, ಅವರ ಅಭಿಪ್ರಾಯ ಪಡೆಯದೇ ಕೆಲವೇ ಜನರು ಹೊರಗಡೆ ಕೂತು ನಿರ್ಧಾರ ತೆಗೆದುಕೊಂಡು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಇತರ ಪದಾಧಿಕಾರಿಗಳನ್ನು ಘೋಷಿಸಿರುವುದು ಅಸಂವಿಧಾನಿಕ ಕ್ರಮವಾಗಿದೆ ಎಂದು ಹೇಳಿದರು.

"ಸಂಘದ ಕಚೇರಿಯಲ್ಲಿ ಯಾವುದೇ ಜನರಲ್ ಬಾಡಿ ಮಿಟಿಂಗ್ ನಡೆದಿಲ್ಲ. ಸದಸ್ಯರಿಗೆ ನೋಟಿಸ್ ನೀಡಲಾಗಿಲ್ಲ. ಪ್ರಧಾನ ಕಾರ್ಯದರ್ಶಿಯಾಗಿರುವ ನನಗೂ ಮಾಹಿತಿ ನೀಡಿಲ್ಲ. ಕೆಲ ಅಪರಿಚಿತರು, ಸಂಘದಲ್ಲಿ ಸದಸ್ಯತ್ವವೇ ಇಲ್ಲದವರು ಬಂದು ಕೆಲ ಕಿಡಿಗೇಡಿಗಳ ಜೊತೆ ಸೇರಿ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ಇದು ಸಂಘದ ಇತಿಹಾಸದಲ್ಲೇ ಮೊದಲ ಘಟನೆ," ಎಂದು ಎಂ.ಎನ್.ಟಿ. ಮುಲ್ಲಾ ಮೆಹಬೂಬ್ ಬಾಷ್ ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯತ್ವವೇ ಇಲ್ಲದವರಿಗೆ ಅಧ್ಯಕ್ಷ ಸ್ಥಾನ?

ಮೇ 16, 2026ರಂದು ಬಳ್ಳಾರಿ ಲಾರಿ ಅಸೋಸಿಯೇಷನ್ಗೆ ನೂತನ ಅಧ್ಯಕ್ಷರಾಗಿ ಸಿ. ಮಹೇಶ್ವರ ಅವರನ್ನು ಘೋಷಿಸಿರುವುದನ್ನು ಪ್ರಶ್ನಿಸಿದ ಅವರು, "ಅವರಿಗೆ ಸಂಘದಲ್ಲಿ ಸದಸ್ಯತ್ವವೇ ಇಲ್ಲ. ಸದಸ್ಯತ್ವ ಇಲ್ಲದ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಘೋಷಿಸಿರುವುದು ಯಾವ ನಿಯಮದಡಿ ನಡೆದಿದೆ?" ಎಂದು ಪ್ರಶ್ನಿಸಿದರು.

ಇದೇ ವೇಳೆ ಮಾಜಿ ಅಧ್ಯಕ್ಷ ಮಿಂಚು ಶ್ರೀನಿವಾಸ್ ಅವರ ವಿಚಾರವನ್ನೂ ಉಲ್ಲೇಖಿಸಿದ ಅವರು, "ಮಿಂಚು ಶ್ರೀನಿವಾಸ್ ಅವರಿಗೂ ಆರಂಭದಲ್ಲಿ ಸದಸ್ಯತ್ವ ಇರಲಿಲ್ಲ. ರಾಜಕೀಯ ಒತ್ತಡದಿಂದ ಅವರನ್ನು ಅಧ್ಯಕ್ಷರನ್ನಾಗಿ




ಮಾಡಿ ಬಳಿಕ ಸದಸ್ಯತ್ವ ಕಲ್ಪಿಸಲಾಯಿತು," ಎಂದು ವ್ಯಂಗ್ಯವಾಡಿದರು. "ರಾಜೀನಾಮೆಯೇ ಇಲ್ಲ, ಹೊಸ ತಂಡದ ದರ್ಪ ಮಾತ್ರ"ಸಂಘದ ಹಳೆಯ ಪದಾಧಿಕಾರಿಗಳಾದ ಪೆದ್ದಣ್ಣ, ವಿಶ್ವನಾಥ್ ಸೇರಿದಂತೆ ಹಲವರು ಇನ್ನೂ ಅಧಿಕೃತವಾಗಿ ರಾಜೀನಾಮೆ ನೀಡಿಲ್ಲ. ಆದರೂ ಹೊಸ ತಂಡ ಒಂದು ಬಂದು ತಾವೇ ಅಧ್ಯಕ್ಷರು, ಕಾರ್ಯದರ್ಶಿಗಳು ಎಂದು ಘೋಷಿಸಿಕೊಂಡು ದರ್ಪ ತೋರುತ್ತಿದೆ ಎಂದು ಮೆಹಬೂಬ್ ಬಾಷ್ ಆರೋಪಿಸಿದರು.

"ನೀವೇ ಅಧ್ಯಕ್ಷರಾಗಲಿ, ನಮಗೆ ತೊಂದರೆ ಇಲ್ಲ. ಆದರೆ ಅದು ಜನರಲ್ ಬಾಡಿ ಸಭೆಯ ಮೂಲಕ ನಡೆಯಬೇಕು. ಸದಸ್ಯರ ಅಭಿಪ್ರಾಯ ಪಡೆದು ಪ್ರಜಾಸತ್ತಾತ್ಮಕವಾಗಿ ಚುನಾವಣೆ ನಡೆಸಬೇಕು," ಎಂದು ಹೇಳಿದರು. ಸಂಘದ ಆಸ್ತಿ ವಿಚಾರದಲ್ಲಿ ಮತ್ತೆ ವಿವಾದ :

ಸಂಘಕ್ಕೆ ಸೇರಿದ ಮೂರು ಎಕರೆ ಜಾಗದ ವಿಚಾರದಲ್ಲಿಯೂ ಗಂಭೀರ ಪ್ರಶ್ನೆಗಳನ್ನು ಮೆಹಬೂಬ್ ಬಾಷ್ ಎತ್ತಿದರು. "ಮಾಜಿ ಅಧ್ಯಕ್ಷ ವೆಂಕಟರಾವ್ ಅವರು ಸುಮಾರು 30 ವರ್ಷಗಳ ಕಾಲ ಸಂಘವನ್ನು ಮುನ್ನಡೆಸಿ ಆಸ್ತಿಯನ್ನು ಅಭಿವೃದ್ಧಿಪಡಿಸಿದ್ದರು. ಆದರೆ ನಂತರ ಅಧ್ಯಕ್ಷ ಸ್ಥಾನಕ್ಕೆ ಬಂದ ಮುನ್ನವರು ಒಂದು ಎಕರೆ ಜಾಗವನ್ನು ಲೀಸ್ಗೆ ನೀಡಿರುವ ವಿಚಾರದಲ್ಲಿ ಸದಸ್ಯರಿಗೆ ಮಾಹಿತಿ ನೀಡಲಾಗಿಲ್ಲ," ಎಂದು ದೂರಿದರು.

ಈ ಕುರಿತು ಈಗಾಗಲೇ ಕೆಲ ಸದಸ್ಯರು ನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯದಿಂದ ಇಂಜಕ್ಷನ್ ಆದೇಶವೂ ಬಂದಿರುವುದಾಗಿ ಅವರು ತಿಳಿಸಿದರು. "ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಹೊಸದಾಗಿ ಘೋಷಿಸಿಕೊಂಡಿರುವ ಪದಾಧಿಕಾರಿಗಳು ಮತ್ತೆ ಆಸ್ತಿ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದು ಸಮಂಜಸವಲ್ಲ," ಎಂದು ಹೇಳಿದರು.

"ಮಿಂಚು ಶ್ರೀನಿವಾಸ್ ಮೇಲೆ ವಿಶ್ವಾಸ ಇಟ್ಟಿದ್ದೆವು"

"ಸಂಘದ ಆಸ್ತಿಯನ್ನು ರಕ್ಷಿಸುತ್ತಾರೆ ಎಂಬ ನಂಬಿಕೆಯಿಂದ ಮಿಂಚು ಶ್ರೀನಿವಾಸ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಸದಸ್ಯರಿಗೆ ನ್ಯಾಯ ಒದಗಿಸಲು ಅವರು ವಿಫಲರಾಗಿದ್ದಾರೆ. ಈಗ ಕಾರ್ಯಕ್ರಮಗಳಲ್ಲಿಯೂ ಕಾಣಿಸಿಕೊಳ್ಳುತ್ತಿಲ್ಲ," ಎಂದು ಮೆಹಬೂಬ್ ಬಾಷ್ ಟೀಕಿಸಿದರು.

"ವಿಜಯ ಭಾಸ್ಕರ್ ರೆಡ್ಡಿ ಅವಧಿಯಲ್ಲಿ ಸಂಘ ಸುಸೂತ್ರವಾಗಿತ್ತು"

ಹಿಂದಿನ ಅಧ್ಯಕ್ಷರಾದ ವಿಜಯ ಭಾಸ್ಕರ್ ರೆಡ್ಡಿ ಅವರ ಅವಧಿಯಲ್ಲಿ ಸಂಘದಲ್ಲಿ ಯಾವುದೇ ಗೊಂದಲಗಳಿರಲಿಲ್ಲ. ಎಲ್ಲ ಸದಸ್ಯರನ್ನೂ ಒಳಗೊಂಡಂತೆ ಸಂಘ ಸುಸೂತ್ರವಾಗಿ ನಡೆಯುತ್ತಿತ್ತು ಎಂದು ಅವರು ಸ್ಮರಿಸಿದರು.

"ಸಂಘ ಸರಿಯಾದ ಮಾರ್ಗದಲ್ಲಿ ಇದ್ದಿದ್ದರೆ ಇಂತಹ ಸಮಸ್ಯೆಗಳು ಹುಟ್ಟುತ್ತಿರಲಿಲ್ಲ. ಈಗ ಕೆಲವರು ರಾಜಕೀಯ ಬೆಂಬಲದ ಮೇಲೆ ಸಂಘವನ್ನು ಹಿಡಿಯಲು ಯತ್ನಿಸುತ್ತಿದ್ದಾರೆ," ಎಂದು ಆರೋಪಿಸಿದರು. ಜನರಲ್ ಬಾಡಿ ಸಭೆ ಸಂಘದ ಕಚೇರಿಯಲ್ಲೇ ನಡೆಯಲಿಸಂಘದ ಭವಿಷ್ಯ ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕಾದರೆ ಅದು ಸಂಘದ ಅಧಿಕೃತ ಕಚೇರಿಯಲ್ಲೇ ನಡೆಯಬೇಕು. ಸದಸ್ಯರಿಗೆ ಮುಂಚಿತ ನೋಟಿಸ್ ನೀಡಿ ಜನರಲ್ ಬಾಡಿ ಸಭೆ ಕರೆಯಬೇಕು. ಹೊರಗಡೆ ಎಲ್ಲೋ ಸಭೆ ನಡೆಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದು ಒಪ್ಪಲಾಗುವುದಿಲ್ಲ ಎಂದು ಮೆಹಬೂಬ್ ಬಾಷ್ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಪೆದ್ದಣ್ಣ ವಿಶ್ವನಾಥ್, ಮಾಜಿ ಉಪಾಧ್ಯಕ್ಷ ಪ್ರವೀಣ್ ಕುಮಾರ್, ಲಾರಿ ಮಾಲೀಕರಾದ ಪ್ರದೀಪ್ ಕುಮಾರ್, ನಾಗರಾಜ್, ನೀಲಕಂಠ ನಾಯ್ಡು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಎಪಿಎಂಸಿ ಸರ್ಕಲ್‌ನಿಂದ ಡಿವೈಎಸ್ಪಿ ಕಚೇರಿವರೆಗೆ ರಸ್ತೆ ಅಭಿವೃದ್ಧಿಗೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ 3ನೇ ವಾರ್ಡ್ ವ್ಯಾಪ್ತಿಯ ಎಪಿಎಂಸಿ ಸರ್ಕಲ್‌ನಿಂದ ಡಿವೈಎಸ್ಪಿ ಕಚೇರಿವರೆಗೆ, ಬೆಂಕಿ ಮಾರೆಮ್ಮ ದೇವಸ್ಥಾನ ಮಾರ್ಗವಾಗಿ ಸಂಪರ್ಕಿಸುವ ಪ್ರಮುಖ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಶುಕ್ರವಾರ ಚಾಲನೆ ನೀಡಿದರು. ಸುಮಾರು ?4.50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ಈ ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ಸ್ಥಳೀಯರ ಹಲವು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ನಾರಾ ಭರತ್ ರೆಡ್ಡಿ, ನಗರದ ವೇಗವಾಗಿ ವಿಸ್ತಾರವಾಗುತ್ತಿರುವ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು. ಎಪಿಎಂಸಿ ಸರ್ಕಲ್‌ನಿಂದ ಡಿವೈಎಸ್ಪಿ ಕಚೇರಿವರೆಗೆ ಸಾಗುವ ಈ ರಸ್ತೆ ವ್ಯಾಪಾರಿಕ ಹಾಗೂ ವಸತಿ ಪ್ರದೇಶಗಳನ್ನು ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದ್ದು, ರಸ್ತೆಯ ದುಸ್ಥಿತಿಯಿಂದ ಸಾರ್ವಜನಿಕರು ಹಾಗೂ ವಾಹನ ಸವಾರರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದರು. ಇದೀಗ ಸಮಗ್ರ ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ಸಂಚಾರ ವ್ಯವಸ್ಥೆ ಸುಗಮವಾಗಲಿದ್ದು, ಸ್ಥಳೀಯರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಗುಣಮಟ್ಟದ ಡಾಂಬರೀಕರಣ, ಒಳಚರಂಡಿ ವ್ಯವಸ್ಥೆ ಸುಧಾರಣೆ, ಅಗತ್ಯವಿರುವ ಕಡೆಗಳಲ್ಲಿ ಪಾದಚಾರಿ ವ್ಯವಸ್ಥೆ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಮಳೆಗಾಲದಲ್ಲಿ ನೀರು ನಿಲ್ಲುವ ಸಮಸ್ಯೆ ನಿವಾರಣೆಯಾಗುವ ಜೊತೆಗೆ ವಾಹನ ದಟ್ಟಣೆ ಕೂಡ ಕಡಿಮೆಯಾಗಲಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ಎಂ. ಪ್ರಭಂಜನಕುಮಾರ್, ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು ಹಾಗೂ ವಾಸು ರೆಡ್ಡಿ ಮಾತನಾಡಿ, ನಗರದ ಅಭಿವೃದ್ಧಿಗೆ ಶಾಸಕ ನಾರಾ ಭರತ್ ರೆಡ್ಡಿ ನಿರಂತರವಾಗಿ ಸ್ಪಂದಿಸುತ್ತಿದ್ದು, ವಿವಿಧ ವಾರ್ಡ್‌ಗಳಲ್ಲಿ ರಸ್ತೆ ಹಾಗೂ ಕುಡಿಯುವ ನೀರಿನ ಕಾಮಗಾರಿಗಳಿಗೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಸ್ಥಳೀಯರಾದ ಭರತ್, ಕವಿತಾ, ಕುಮಾರನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕೋಟಗಾಳವಾಡಿ ಕ್ರಾಸ್ ಬಳಿ ಹಂಪ್ ನಿರ್ಮಾಣಕ್ಕೆ ಗ್ರಾಮಸ್ಥರ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಕೋಟಗಾಳವಾಡಿ ಕ್ರಾಸ್ ಸಮೀಪ ನಿರಂತರವಾಗಿ ರಸ್ತೆ ಅಪಘಾತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ತಕ್ಷಣವೇ ಹಂಪ್ ನಿರ್ಮಿಸಿ, ಎಚ್ಚರಿಕೆ ನಾಮಫಲಕ ಅಳವಡಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಈ ಕುರಿತು ಮಾತನಾಡಿದ ಗ್ರಾಮಸ್ಥರು, ವಾಹನಗಳು ಅತಿವೇಗದಲ್ಲಿ ಸಂಚರಿಸುತ್ತಿರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ವಿಶೇಷವಾಗಿ ರಾತ್ರಿ ವೇಳೆಯಲ್ಲಿ ವಾಹನ ಸವಾರರು ನಿಯಂತ್ರಣ ಕಳೆದುಕೊಂಡು ಅಪಾಯಕ್ಕೀಡಾಗುತ್ತಿರುವ ಘಟನೆಗಳು ನಡೆಯುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ರಸ್ತೆ ಸುರಕ್ಷತಾ ಕ್ರಮವಾಗಿ ಹಂಪ್ ನಿರ್ಮಿಸುವುದರ ಜೊತೆಗೆ 'ನಿಧಾನವಾಗಿ ಚಲಿಸಿ' ಎಂಬ ಎಚ್ಚರಿಕೆ ಫಲಕ ಅಳವಡಿಸಿದರೆ ಅಪಘಾತಗಳನ್ನು ತಡೆಗಟ್ಟಲು ಸಹಕಾರಿಯಾಗಲಿದೆ ಎಂದು ಸಂತೋಷ್ ನಾಗರೆ ಹಾಗೂ ಗ್ರಾಮಸ್ಥರು ತಿಳಿಸಿದ್ದಾರೆ.

ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರ ಜೀವ ರಕ್ಷಣೆಗಾಗಿ ತ್ವರಿತವಾಗಿ ರಸ್ತೆ ಸುರಕ್ಷತಾ ವ್ಯವಸ್ಥೆ ಕಲ್ಪಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

# ಎಸ್ಸೆಸ್ಸೆಲ್ಸಿ ಮರು ಮೌಲ್ಯಮಾಪನ ಫಲ ವಿದ್ಯಾರ್ಥಿ ಶುಭಂ ಶ್ರೀಹರಿಗೆ ಹೆಚ್ಚುವರಿ 16 ಅಂಕ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ನಗರದ ಲೆಕ್ಚರ್ ಕಾಲೋನಿಯ ಖಡಕೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿ ಶುಭಂ ಶ್ರೀಹರಿ ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನದಲ್ಲಿ 16 ಅಂಕಗಳನ್ನು ಹೆಚ್ಚು ಪಡೆದು ಕೊಳ್ಳುವ ಮೂಲಕ 625ಕ್ಕೆ 588 ಅಂಕಗಳನ್ನು ಪಡೆದು ಕೊಂಡಿದ್ದಾರೆ ಮುಖ್ಯಗುರು ಆನಂದ ಕಲ್ಯಾಣೆ ತಿಳಿಸಿದ್ದಾರೆ. ವಿದ್ಯಾರ್ಥಿ ಶುಭಂ ಶ್ರೀಹರಿ ವಿಜ್ಞಾನ ವಿಷಯದಲ್ಲಿ ಈ ಮೊದಲು 100ಕ್ಕೆ 79 ಅಂಕ ಪಡೆದಿದ್ದರು. ಆದರೆ, ವಿದ್ಯಾರ್ಥಿ ಶುಭಂ ಈ ವಿಷಯದಲ್ಲಿ ಹೆಚ್ಚು ಅಂಕ ಪಡೆಯುವ ವಿಶ್ವಾಸ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಗುರು ಆನಂದ ಕಲ್ಯಾಣೆ ಮತ್ತು ವಿಷಯ ಶಿಕ್ಷಕರ ಮಾರ್ಗದರ್ಶನದ ಮೇರೆಗೆ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದರು. ಹಾಗಾಗಿ ವಿಜ್ಞಾನ ವಿಷಯದಲ್ಲಿ ಹೆಚ್ಚುವರಿಯಾಗಿ 16 ಅಂಕ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದು ಕೊಂಡಿದ್ದಾನೆ.

> ವಿದ್ಯಾರ್ಥಿ ಶುಭಂ ವಾರ್ಷಿಕ ಪರೀಕ್ಷೆಗೂ ಮುನ್ನ ಶಾಲೆಯಲ್ಲಿ ನಡೆಸಿದ ಎಲ್ಲ ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತಮ ಪಡೆಯುತ್ತಿದ್ದ. ಆದರೆ, ವಾರ್ಷಿಕ ಪರೀಕ್ಷೆಯಲ್ಲಿ ಒಮ್ಮೆಲೆ 16 ಅಂಕ ಕಡಿಮೆ ಬಂದಿರುವುದು ಕಂಡು ಆತಂಕ ವ್ಯಕ್ತಪಡಿಸಿದ್ದೇವು. ಹಾಗಾಗಿ ಮರು ಮೌಲ್ಯಮಾಪನಕ್ಕೆ ಸಲಹೆ ನೀಡಲಾಗಿತ್ತು. ಇದೀಗ ಹೆಚ್ಚುವರಿ ಅಂಕ ಬಂದಿರುವುದು ಸಮಾಧಾನ ತರಿಸಿದೆ.
>
> **– ಆನಂದ ಕಲ್ಯಾಣೆ ಮುಖ್ಯಗುರುಗಳು ಖಡಕೇಶ್ವರ ಪ್ರೌಢ ಶಾಲೆ ಭಾಲ್ಕಿ**

# ಸೌಹಾರ್ದತೆಯಿಂದ ಬಕ್ರೀದ್ ಆಚರಣೆಗೆ ಪಿಎಸ್‌ಐ ಶೇಕ್ ಶಾ ಪಟೇಲ್ ಕರೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ




ತ್ಯಾಗ, ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಸರ್ವರು ಶಾಂತಿ ಹಾಗೂ ಸೌಹಾರ್ದತೆ ಯಿಂದ ಆಚರಣೆ ಮಾಡುವುದರ ಜೊತೆಗೆ ಸರ್ಕಾರ ವಿಧಿಸಿರುವ ಮಾರ್ಗ ಸೂಚಿಗಳನ್ನು ಕಟ್ಟು ನಿಟ್ಟಾಗಿ ಪಾಲನೆ ಮಾಡಬೇಕು ಎಂದು ಪಿಎಸ್‌ಐ ಶೇಕ್ ಶಾ ಪಟೇಲ್ ಹೇಳಿದರು. ತಾಲೂಕಿನ ಠಾಣಾ ಕುಶನೂರ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಿದ ಬಕ್ರೀದ್ ಹಬ್ಬದ ಶಾಂತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಅನೇಕತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತ ದೇಶದಲ್ಲಿ ಎಲ್ಲರೂ ಅಣ್ಣ ತಮ್ಮಂದಿರಂತೆ, ಯಾವುದೇ ಜಾತಿಗೆ ಸೀಮಿತವಾಗದೆ, ಎಲ್ಲರೂ ಪ್ರತಿಯೊಂದು ಹಬ್ಬಗಳಲ್ಲಿ ಭಾಗಿಯಾಗಿ , ಉತ್ತಮ ಬಾಂಧವ್ಯದ ಜೊತೆಗೆ ಹಬ್ಬಗಳನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಬೇಕು ಎಂದರು. ಮುಖಂಡ ಚಾಂದ್ ಪಾಶ ಮಾತನಾಡಿ, ಹಬ್ಬ ಹರಿದಿನಗಳಲ್ಲಿ ನಾವೆಲ್ಲರೂ ಹಿಂದೂ ಮುಸ್ಲಿಂಗಳೆನ್ನದೆ, ಎಲ್ಲರೂ ನಮ್ಮ ಅಣ್ಣ ತಮ್ಮಂದಿರಂತೆ ಭಾತೃತ್ವ ಭಾವದಿಂದ ಹಬ್ಬಗಳನ್ನು ಆಚರಿಸಿ, ಪ್ರತಿಯೊಬ್ಬರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತೇವೆ ಎಂದರು.

ಠಾಣಾ ಕುಶನೂರ ಮುಸ್ಲಿಂ ಮುಖಂಡ ಶೇಟ್ ಸಾಬ ಮಾತನಾಡಿ, ಅಹಿತಕರ ಘಟನೆಗಳಿಗೆ ಯಾರು ಕೂಡ ಆಸ್ಪದ ನೀಡದಂತೆ ಪ್ರತಿಯೊಂದು ಗ್ರಾಮಗಳಲ್ಲಿ ಎಲ್ಲರೂ ಜೊತೆಗೂಡಿ ಹಬ್ಬವನ್ನು ಆಚರಿಸಿ, ಎಲ್ಲರೂ ಒಟ್ಟುಗೂಡಿ ಊಟ ಮಾಡುವುದರ ಮೂಲಕ ಸರ್ವರು ಕಾನೂನಿನ ಪರಿಪಾಲನೆಯ ಮೂಲಕ ಹಬ್ಬವನ್ನು ಆಚರಣೆ ಮಾಡೋಣ ಎಂದರು.

ಈವೇಳೆ ಎಎಸ್‌ಐ ಅನಿಲ ಸರ್ ಉಮಾಕಾಂತ್, ಬಾಲಾಜಿ ಗೌಡ, ಗಿನೇಶ್, ರಮೇಶ್ ,ಹಾಗೂ ಬೆಳಕುಣಿ ಚೌ ,ಹಿಪ್ಪಳಗಾವ್, ಹೆಡಗಾಪುರ್, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಬಸವಾದಿ ಶರಣರ ಅಧ್ಯಯನ ಶರಣಲೋಕ ಗ್ರಂಥ ಮೂಲಕ ಸಾಕಾರ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಬಸವಾದಿ ಶರಣರ ಕುರಿತ ಅಧ್ಯಯನ ಶರಣಲೋಕ ಗ್ರಂಥದ ಮೂಲಕ ಸಕಾರಗೊಂಡಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ನಗರದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಶುಕ್ರವಾರ ಆಯೋಜಿಸಿದ್ದ 332ನೆಯ ಮಾಸಿಕ ಶರಣ ಸಂಗಮ ಮತ್ತು ಶರಣಲೋಕ ಗ್ರಂಥ ಲೋಕಾರ್ಪಣೆ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಶರಣಲೋಕ ಗ್ರಂಥದಲ್ಲಿ ಎಲ್ಲ ಸಮುದಾಯದ ಶರಣರ ಕುರಿತು ಇದು ವರೆಗೂ 150 ಲೇಖನಗಳು ಪ್ರಕಟಗೊಂಡಿವೆ. ಪ್ರತಿಯೊಬ್ಬರು ಈ ಗ್ರಂಥ ಕೊಂಡುಕೊಂಡು ಶರಣರ ಇತಿಹಾಸ ಅರಿಯುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು. ಗ್ರಂಥ ಲೋಕಾರ್ಪಣೆಗೊಳಿಸಿದ ಹಿರಿಯ ಪತ್ರಕರ್ತ ದೇವಯ್ಯ

ಗುತ್ತೇದಾರ್ ಮಾತನಾಡಿದರು. ಹಿರಿಯ ಸಾಹಿತಿ ಬಂಡೆಪ್ಪ ಎಂ. ಶರಣರು ಅಧ್ಯಕ್ಷತೆ ವಹಿಸಿದರು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ ಬಸವ ಗುರುಪೂಜೆ ನೆರವೇರಿಸಿದರು. ಸಾಹಿತಿ ರಾಜು ಜುಬರೆ ಗ್ರಂಥ ಪರಿಚಯ ಮಾಡಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಸಂಗಮೇಶ ಬಿ. ಬಿರಾದಾರ ಸೇರಿದಂತೆ ಹಲವರು ಇದ್ದರು.

> ಬಸವತತ್ವ ಪ್ರಚಾರ ಪ್ರಸಾರಕ್ಕಾಗಿ ಪರಮ ಪೂಜ್ಯರು 43 ಗ್ರಂಥಗಳು ರಚಿಸಿದ್ದಾರೆ. ಅದರಲ್ಲಿ ಶರಣಲೋಕ ಅಮೂಲ್ಯ ಗ್ರಂಥವಾಗಿದೆ. ಪರಮ ಪೂಜ್ಯರು ಬಿಡುವಿಲ್ಲದ ನಡುವೆಯೂ ಕಳೆದ ಮುರ್ನಾಲ್ಕು ವರ್ಷಗಳಿಂದ ಬೋಧಿವೃಕ್ಷ ಪತ್ರಿಕೆಗೆ ಪರಮ ಪೂಜ್ಯರು ತಪ್ಪದೇ ಲೇಖನ ನೀಡುತ್ತಿದ್ದಾರೆ.
>
> **– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ಸನ್ಮಾನ ಇದೇವೇಳೆ ಫೋಟೋಗ್ರಾಫರ್ ಶರಣು ಬೆಣ್ಣೂರು ಅವರನ್ನು ಶ್ರೀಮಠದ ಪರವಾಗಿ ಸನ್ಮಾನಿಸಲಾಯಿತು. ಸವಿತಾ ಭೂರೆ ವಚನ ಗಾಯನ ಮಾಡಿದರು. ದೀಪಕ ಠಮಕೆ ನಿರೂಪಿಸಿದರು. ಶ್ರೀಮಠದ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನೆರವೇರಿತು.

# ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಆಯ್ಕೆ ಅಧ್ಯಕ್ಷ ಬಸವರಾಜ ದಾನಾ ,ಕಾರ್ಯದರ್ಶಿ ರಾಮರಾವ ಬಾನಾ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಭಾಲ್ಕಿ ತಾಲೂಕು ಘಟಕದ ಅಧ್ಯಕ್ಷರಾಗಿ ಬಸವರಾಜ ದಾನಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳು:

ಬಸವರಾಜ ದಾನಾ (ಅಧ್ಯಕ್ಷರು), ನಿರ್ಮಲಾ ಚೆಲ್ವಾ ಮತ್ತು ಸುಧಾಕರ ಗಾಯಕವಾಡ್ (ಉಪಾಧ್ಯಕ್ಷರು), ರಾಮರಾವ ಬಾನಾ (ಪ್ರಧಾನ ಕಾರ್ಯದರ್ಶಿ), ಸತ್ಯವಾನ ಕಾಂಬಳೆ (ಖಜಾಂಚಿ), ಅನೀತಾ ಎಸ್ ಮುಧಾಳೆ (ಸಹಕಾರ್ಯದರ್ಶಿ ಮಹಿಳೆ), ದತ್ತು ಮುಧಾಳೆ (ಸಹಕಾರ್ಯದರ್ಶಿ ಸಾಮಾನ್ಯ), ಅನ್ನಪೂರ್ಣ ಡಿ ಮೇತ್ರೆ (ಸಂಘಟನಾ ಕಾರ್ಯದರ್ಶಿ ಮಹಿಳೆ), ರತ್ನಮ್ಮಾ ಹಾಲಕುಡೆ ( ಸಂಘಟನಾ ಕಾರ್ಯದರ್ಶಿ ಸಾಮಾನ್ಯ) ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಿ.ಎಸ್ ಪಾಟೀಲ್ ತಿಳಿಸಿದ್ದಾರೆ.

ಆಯ್ಕೆಯಾದ ಎಲ್ಲ ಪದಾಧಿಕಾರಿಗಳಿಗೆ ಸ್ವಾಭಿಮಾನಿ ಶಿಕ್ಷಕರ ಸಂಘದ ಅಭಿಮಾನಿಗಳು ಸನ್ಮಾನಿಸಿ ಗೌರವಿಸಿದರು. ಬಳಿಕ ಮಾತನಾಡಿದ ನೂತನ ಅಧ್ಯಕ್ಷ ಬಸವರಾಜ ದಾನಾ ಅವರು ,ನಾವು 05 ವರ್ಷದ (2026–2031) ರ ಅವಧಿಗಾಗಿ ಎಲ್ಲ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತೇವೆ. ಮೇ. 1 ರಂದು ನಡೆದ 13 ನಿರ್ದೇಶಕರ ಸ್ಥಾನಕ್ಕೆ ಸ್ವಾಭಿಮಾನಿ ಶಿಕ್ಷಕರ ಸಂಘದ ಪೆನಾಲ್‌ನವರು ಭರ್ಜರಿ ಗೆಲವು ಸಾಧಿಸಿದ್ದೇವೆ. 08 ಜನ ಸ್ವಾಭಿಮಾನಿ ಶಿಕ್ಷಕರ ಸಂಘ ಮತ್ತು ಸ್ವಾಮಿ ವಿವೇಕಾನಂದ ಪೆನಾಲ್‌ನವರು 05 ಜನ ಆಯ್ಕೆಯಾಗಿರುತ್ತಾರೆ. ನಮ್ಮ ಟೀಮ್‌ನವರು ಎಲ್ಲರ ಸಹಕಾರ, ಬೆಂಬಲದೊಂದಿಗೆ ಶಿಕ್ಷಕರು ಎದುರಿಸುವ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ದೊರಕಿಸಿ ಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ.

ಶಿಕ್ಷಕರ ಅಗತ್ಯ ಬೇಡಿಕೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಸಮಾಲೋಚಿಸಿ ಹಂತ ಹಂತವಾಗಿ ಈಡೇರಿಸಲು ಪ್ರಯತ್ನಿಸಲಾಗುವುದು. ತಾಲೂಕಿನಲ್ಲಿ ಶಿಕ್ಷಕರಿಗಾಗಿ ಗುರು ಭವನ, ನೌಕರರ ಭವನ ನಿರ್ಮಿಸಲಾಗುವುದು. ಹೆಚ್ಚುವರಿ ಶಿಕ್ಷಕರ ಸಮಸ್ಯೆ ಬಗೆಹರಿಸಲು ಡೈಸ್‌ಕೋಡ್, ಗುರುಸ್ಪಂದನಾ ಕಾರ್ಯಕ್ರಮ, ಶಿಕ್ಷಕರ ವೇತನ ಬಡ್ತಿ, ಶಾಲಾ ಅಭಿವೃದ್ಧಿಗಾಗಿ ಶೈಕ್ಷಣಿಕ ಕಾರ್ಯಾಗಾರ, ಎಚ್‌ಆರ್‌ಎಮ್‌ಎಸ್ ಸೇವಾ ಪುಸ್ತಕದಲ್ಲಿ ಗಳಿಕೆ ರಜೆ ನಮೂದಿಸುವುದು, ಅನಾವಶ್ಯಕವಾಗಿ ಎಸ್‌ಡಿಎಮ್‌ಸಿಯಿಂದ ಆಗುವ ಕಿರುಕುಳ ತಪ್ಪಿಸುವುದು, ಮಹಿಳಾ ಶಿಕ್ಷಕಿಯರ ಶಿಶು ಪಾಲನಾ ರಜೆ ಸೇರಿದಂತೆ ಇತರೆ ಗುರುತರವಾದ ಸಮಸ್ಯೆಗಳಿಗೆ ತಿಲಾಂಜಲಿ ನೀಡಲು ಪ್ರಯತ್ನಿಸಲಾಗುವುದು. ಸಂಘದ ಬೈಲಾ ಪ್ರಕಾರ ವಾರ್ಷಿಕ ಮಹಾಸಭೆ ನಡೆಸಿ ಲೆಕ್ಕ ಪತ್ರ ಸೇರಿದಂತೆ ಇತರೆ ಕಲ್ಯಾಣಕಾರಿ ಯೋಜನೆಗಳು ರೂಪಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದತ್ತಾತ್ರಿ ಕಾಟಕರ್, ನಿರ್ದೇಶಕರಾದ ಗಣಪತಿ ಭಕ್ತಾ , ಬಿಆರ್‌ಪಿಗಳಾದ ಸಂಜೀವಕುಮಾರ, ಸಂತೋಷ ಮುದಾಳೆ ಮತ್ತು ಪ್ರಮುಖರಾದ ಡಾ.ಕಾಶಿನಾಥ ಚೆಲ್ವಾ, ನಿರಂಜಪ್ಪಾ ಪಾತ್ರೆ, ಸುಭಾಷ ಹುಲಸೂರೆ, ಅಶೋಕ ಬಿರಾದಾರ, ರಂಗರಾವ ಮೇತ್ರೆ, ಉತ್ತಮ ಶಿಂದೆ, ರಾಜಕುಮಾರ ಮಾನೆ, ಬಾಲಾಜಿ ಬೈರಾಗಿ, ರಾಜಕುಮಾರ ಬಾಲಾಪುರೆ, ರಘುನಾಥ ಧುರ್ವೆ, ಇಸಿಓ ಶಿವಾಜಿ, ನಾಮದೇವರಾವ ಇಂಗಳೆ, ಸರಿತಾ ಕುಮಾರಿ, ರಾಣಾಪ್ರತಾಪ, ರಾಜಕುಮಾರ ನೆಲವಾಡೆ, ವಿಠಲ, ದಯಾನಂದ, ನಾಗನಾಥ ಭೋಸ್ಲೆ, ವಿಶ್ವನಾಥ ಕರಕರೆ, ವಿಠಲರಾವ ಬಿರಾದಾರ, ಬಾಲಾಜಿ ಬಿರಾದಾರ, ಕಲ್ಯಾಣರಾವ ಕುಂಬಾರಗೆರೆ, ಜಗನ್ನಾಥ ಪನಶೆಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಯಶಸ್ಸಿಗೆ ಅಧಿಕಾರಿಗಳು ಸಮರ್ಪಣಾ ಭಾವದಿಂದ ಕೆಲಸ ಮಾಡಿ: ಡಾ. ಶರಣಬಸಪ್ಪ ಗಣಜಲಖೇಡ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)



ಸರ್ಕಾರದಿಂದ ಜಾರಿಯಾಗುತ್ತಿರುವ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಆರೋಗ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಮರ್ಪಣಾ ಭಾವದಿಂದ ಕೆಲಸ ಮಾಡಬೇಕು ಎಂದು ಕಲ್ಬುರ್ಗಿ ವಿಭಾಗೀಯ ಸಹ ನಿರ್ದೇಶಕರ ಕಚೇರಿಯ ಉಪನಿರ್ದೇಶಕರಾದ *ಡಾ. ಶರಣಬಸಪ್ಪ ಗಣಜಲಖೇಡ* ಅವರು ಸೂಚಿಸಿದರು. ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಯಿ–ಮಗು ಆರೋಗ್ಯಕ್ಕೆ ಮೊದಲ ಆದ್ಯತೆ: ಚಿಕಿತ್ಸೆ ಅರಸಿ ಬರುವ ಗರ್ಭಿಣಿಯರು ಮತ್ತು ಬಾಣಂತಿಯರ ಆರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ತಾಯಿ ಮರಣ ಹಾಗೂ ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ಸಂಪೂರ್ಣವಾಗಿ ಶೂನ್ಯಕ್ಕೆ ತರುವಲ್ಲಿ ಅಧಿಕಾರಿಗಳು ಶ್ರಮಿಸಬೇಕು. ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ನೀಡಲಾಗುವ ಲಸಿಕೆಗಳನ್ನು ಕಾಲಕಾಲಕ್ಕೆ ಯಾವುದೇ ಲೋಪವಾಗದಂತೆ ನಿಗದಿತ ಗುರಿ ಸಾಧಿಸಬೇಕು.

ಇನ್ನೇನು ಮಳೆಗಾಲ ಹತ್ತಿರ ಬರುತ್ತಿರುವುದರಿಂದ ಮಲೇರಿಯಾ, ಡೆಂಗು, ಚಿಕನ್ ಗುನ್ಯಾದಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಸದಾ ಸನ್ನದ್ಧವಾಗಿರಬೇಕು. ತುರ್ತು ಚಿಕಿತ್ಸೆಗೆ ಔಷಧಗಳ ಕೊರತೆಯಾಗದಂತೆ ಅಧಿಕಾರಿಗಳು ನಿರಂತರ ನಿಗಾವಹಿಸಬೇಕು. ಸೊಳ್ಳೆಗಳ ನಿಯಂತ್ರಣ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಾರ್ಯಗಾರ ಆಯೋಜಿಸಬೇಕು ಎಂದ ಅವರು, ಜಿಲ್ಲೆಯ ಎಲ್ಲಾ ತಾಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಾಯಿ ಕಡಿತ, ಮತ್ತು ಹಾವು ಕಡಿತಕ್ಕೆ ಅಗತ್ಯವಿರುವ ತುರ್ತು ಚಿಕಿತ್ಸಾ ಲಸಿಕೆಗಳು ಹಾಗೂ ಔಷಧಗಳು ಸದಾ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಖಡಕ್ ಸೂಚನೆ ನೀಡಿದರು.

ಕ್ಷಯ ಹಾಗೂ ಕುಷ್ಠರೋಗ ಮುಕ್ತ ಜಿಲ್ಲೆಯಾಗಿಸಿ: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರಂಭಿಕ ಹಂತದಲ್ಲೇ ಕ್ಷಯ ರೋಗಿಗಳನ್ನು ಸಕಾಲದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಬೇಕು. ಇದರೊಂದಿಗೆ ಕುಷ್ಠರೋಗ ನಿರ್ಮೂಲನೆಗೆ ವಿಶೇಷ ಒತ್ತು ನೀಡಬೇಕು ಎಂದು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಲ್. ಆರ್. ಶಂಕರ ನಾಯ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಜಿಲ್ಲಾ ಆರ್.ಸಿ.ಎಚ್ ಅಧಿಕಾರಿಗಳಾದ ಡಾ. ಜಂಬಯ್ಯ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಸತೀಶ್ ಚಂದ್ರ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಷಣ್ಮುಖ, ಶಸ್ತ್ರಚಿಕಿತ್ಸಕರಾದ ಡಾ. ಹರಿಪ್ರಸಾದ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ. ಪಿ. ದೊಡ್ಡಮನಿ ಸೇರಿದಂತೆ ಜಿಲ್ಲಾ ಮಟ್ಟದ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# 27 ರಿಂದ ಬಿತ್ತನೆ ಬೀಜ ವಿತರಣೆಗೆ ಚಾಲನೆ:ಪ್ರಭು ಚವ್ಹಾಣ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಕಮಲನಗರ:ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಸಮಯಕ್ಕೆ ಬಿತ್ತನೆ ಬೀಜ ಕಲ್ಪಿಸಲು ಔರಾದ(ಬಿ) ಕ್ಷೇತ್ರದಲ್ಲಿ ಮೇ.27 ರಿಂದ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಲಾಗುತ್ತಿದೆ ಎಂದು ಔರಾದ(ಬಿ) ಕ್ಷೇತ್ರದ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 27 ರಂದು ಔರಾದ, ಏಕಂಬಾ, ಭಂಡಾರಕುಮಟಾ, 28 ರಂದು ಕಮಲನಗರ, ಠಾಣಾ ಕುಶನೂರ, ಸಂತಪೂರ, 29 ರಂದು ಚಿಂತಾಕಿ, ವಡಗಾಂವ ಹಾಗೂ ದಾಬಕಾ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜವಿತರಣೆಯನ್ನು ಆರಂಭಿಸಲಾಗುತ್ತಿದೆ ರೈತ ಸಂಪರ್ಕ ಕೇಂದ್ರಗಳಲ್ಲಿ ಆಯಾ ಗ್ರಾಮಗಳ ರೈತರಿಗೆ ನಿಗದಿತ ದಿನಾಂಕಗಳಂದು ಬಿತ್ತನೆ ಬೀಜಗಳನ್ನು ಸಮರ್ಪಕವಾಗಿ ಪೂರೈಸಲು ವ್ಯವಸ್ಥೆ ಮಾಡಿಕೊಳ್ಳಬೇಕು. ಔರಾದ ಕ್ಷೇತ್ರದಲ್ಲಿ ಹೆಚ್ಚಾಗಿ ಸೋಯಾಬೀನ್ ಹಾಗೂ ತೊಗರಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಅಲ್ಲದೆ ರೈತರು ಬೆಳೆಸುವ ಇತರೆ ಬೆಳೆಗಳ ಬಿತ್ತನೆ ಬೀಜಗಳನ್ನೂ ಅವಶ್ಯಕತೆಗೆ ಅನುಗುಣವಾಗಿ ಸಮರ್ಪಕ ಪ್ರಮಾಣದಲ್ಲಿ ಒದಗಿಸಬೇಕೆಂದು ಮತ್ತು ಗುಣಮಟ್ಟದ ಬಿತ್ತನೆ ಬೀಜಗಳನ್ನು ಪೂರೈಸಬೇಕೆಂದು ಕೃಷಿ ಇಲಾಖೆಯ ಜಂಟಿನಿರ್ದೇಶಕರಿಗೆ ತಿಳಿಸಿದ್ದೇನೆ. ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಹಾಯಕ ಕೃಷಿ ನಿರ್ದೇಶಕರು ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಬಿತ್ತನೆ ಬೀಜದ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಬಿತ್ತನೆಗೂ ಮುನ್ನ ರೈತರು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಯಾವ ಸಮಯದಲ್ಲಿ ಬಿತ್ತನೆ ಮಾಡಬೇಕು, ಯಾವ ಬೆಳೆಗಳಿಗೆ ಯಾವ ರೀತಿಯ ನಿರ್ವಹಣೆ ಅಗತ್ಯ ಎನ್ನುವ ಬಗ್ಗೆ ರೈತರಿಗೆ ಕೃಷಿ ಇಲಾಖೆ ವತಿಯಿಂದ ತಿಳುವಳಿಕೆ ಮೂಡಿಸುವ ಕೆಲಸ ಪರಿಣಾಮಕಾರಿಯಾಗಿ ಮಾಡಬೇಕು ಎಂದು ನಿರ್ದೇಶನ ನೀಡಿದ್ದಾರೆ.

ನಮ್ಮೆಲ್ಲರಿಗೂ ಅನ್ನ ನೀಡಿ ಪೋಷಿಸುವ ರೈತ ದೇಶದ ಬೆನ್ನೆಲುಬಾಗಿದ್ದಾನೆ. ರೈತರಿಗೆ ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು.

ಇಳುವರಿ ಹೆಚ್ಚಾಗಿ ಆರ್ಥಿಕವಾಗಿ ಸಧೃಡರಾಗಲು ರೈತರಿಗೆ ಸಹಕರಿಸಬೇಕೆಂದು ಶಾಸಕರು ತಿಳಿಸಿದ್ದಾರೆ.

# ಸಮಾಜಕ್ಕೆ ರಜಪೂತರ ತ್ಯಾಗ, ಬಲಿದಾನ ಮತ್ತು ದೇಶಭಕ್ತಿಯ ಆದರ್ಶಗಳು ದಾರಿದೀಪ : ಡಾ. ಸಂಜೀವಸಿಂಗ್ ರಾಯಚೂರಕರ್

• ಮಲ್ಲಮ್ಮ ನುಡಿ ವಾರ್ತೆ ಸುರಪುರ

ಯಾದಗಿರಿ ಜಿಲ್ಲಾ ರಜಪೂತ ಸಮಾಜದ ವತಿಯಿಂದ ಜೂನ್ 14ರಂದು ನಡೆಯಲಿರುವ ಮಹಾರಾಣಾ ಪ್ರತಾಪ್ ಸಿಂಗ್ ಜಯಂತಿ ಮಹೋತ್ಸವವನ್ನು ಅತ್ಯಂತ ವಿಜೃಂಭಣೆ ಹಾಗೂ ಸಡಗರದಿಂದ ಆಚರಿಸಲು ಸಮಾಜದ ಎಲ್ಲ ಬಾಂಧವರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಯಾದಗಿರಿ ಜಿಲ್ಲಾ ರಜಪೂತ ಸಮಾಜದ ಜಿಲ್ಲಾಧ್ಯಕ್ಷರಾದ ಡಾ. ಸಂಜೀವಸಿಂಗ್ ರಾಯಚೂರಕರ್ ಕರೆ ನೀಡಿದರು.

ಶನಿವಾರ ಸುರಪುರ ಪಟ್ಟಣದ ಕಬಾಡಗೇರಾ ಪ್ರದೇಶದ ರಜಪೂತ ಗಲ್ಲಿಯಲ್ಲಿ ಆಯೋಜಿಸಲಾದ ಪೂರ್ವಭಾವಿ ಸಭೆಗೆ ದೀಪ ಬೆಳಗುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ರಜಪೂತ ಸಮಾಜವು ಸ್ವಾಭಿಮಾನ, ಶೌರ್ಯ ಹಾಗೂ ದೇಶಭಕ್ತಿಗೆ ಹೆಸರಾಗಿದ್ದು, ದೇಶರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದ ಮಹಾನ್ ಇತಿಹಾಸವನ್ನು ಹೊಂದಿದೆ. ಮಹಾರಾಣಾ ಪ್ರತಾಪ್ ಸಿಂಗ್ ಅವರ ಆದರ್ಶಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಿದ್ದು, ಪ್ರತಿಯೊಬ್ಬರೂ ಅವರ ದೇಶಭಕ್ತಿ, ತ್ಯಾಗ ಮತ್ತು ಸ್ವಾಭಿಮಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಪೂರ್ವಭಾವಿ ಸಭೆಯಲ್ಲಿ ಜೂನ್ 14ರಂದು ನಡೆಯಲಿರುವ ಮಹಾರಾಣಾ ಪ್ರತಾಪ್ ಸಿಂಗ್ ಜಯಂತಿ ಅಂಗವಾಗಿ ಸಮಾಜದ



ಸಾಧಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುವುದು, ರಜಪೂತ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು, ದೇಶಭಕ್ತಿ ಗೀತೆಗಳು ಹಾಗೂ ವಿಚಾರಗೋಷ್ಠಿಗಳನ್ನು ಆಯೋಜಿಸುವ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ ಗಣ್ಯರು ಮಾತನಾಡಿ, ರಜಪೂತ ಸಮಾಜವು ದೇಶದ ಸ್ವಾಭಿಮಾನ, ಶೌರ್ಯ ಮತ್ತು ತ್ಯಾಗದ ಪ್ರತೀಕವಾಗಿದ್ದು, ಮಹಾರಾಣಾ ಪ್ರತಾಪ್ ಸಿಂಗ್ ತೋರಿದ ಆದರ್ಶಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿವೆ ಎಂದು ಅಭಿಪ್ರಾಯಪಟ್ಟರು.

ಸಭೆಯು ಸಮಾಜದ ಬಾಂಧವರ ಐಕ್ಯತೆ ಮತ್ತು ಸಂಘಟಿತ ಶಕ್ತಿಗೆ ಸಾಕ್ಷಿಯಾಯಿತು. ಕಾರ್ಯಕ್ರಮದ ಬಳಿಕ ಎಲ್ಲರಿಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಸಮಾಜದ ಗಣ್ಯರಾದ ಬಾಬುಸಿಂಗ್, ವಿಠ್ಠಲ್ ಸಿಂಗ್, ಮುನಿರಾಜಸಿಂಗ್, ಭಾರತಸಿಂಗ್, ಭಗವಾನಸಿಂಗ್, ಜಿತೇಂದ್ರ ಸಿಂಗ್ ಠಾಕೂರ್, ವಿಕ್ರಮಸಿಂಗ್ ಠಾಕೂರ್, ಚಂದನಸಿಂಗ್, ರಘುವೀರಸಿಂಗ್ ಠಾಕೂರ್, ದೀಪಕಸಿಂಗ್, ಸುನೀಲಸಿಂಗ್, ಪವನಸಿಂಗ್, ನಾಗರಾಜ ನಾಯಕ್, ಗೋಪಾಲಸಿಂಗ್, ವಿನಾಯಕಸಿಂಗ್, ನಾಗರಾಜ ಸಿಂಗ್, ಸತ್ಯನಾರಾಯಣಸಿಂಗ್, ಸುಭದ್ರಾಬಾಯಿ ಸಿಂಗ್, ಜ್ಯೋತಿ ಲಕ್ಷ್ಮೀ ಠಾಕೂರ್, ಪೂಜಾ ಠಾಕೂರ್, ಅಮೂಲ್ಯ ಠಾಕೂರ್, ನಿರ್ಮಲಾಬಾಯಿ, ಹೀರಾಬಾಯಿ, ಆರತಿ, ಸಪ್ನಾ ಸೇರಿದಂತೆ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು, ಮಹಿಳೆಯರು ಹಾಗೂ ಅಪಾರ ಸಂಖ್ಯೆಯ ಸಮಾಜ ಬಾಂಧವರು ಉಪಸ್ಥಿತರಿದ್ದರು.

# ಆಟ ಕೂಟ ಮಕ್ಕಳ ರಂಗಶಿಬಿರ ಹಾಗೂ ನಾಟಕ ಪ್ರದರ್ಶನ




• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಮೇ.24:ಆಟ ಕೂಟ ಮಕ್ಕಳ ರಂಗಶಿಬಿರ ಹಾಗೂ ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಅಮರೇಶ್ವರ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಬಸವಂತರಾಯ ಕುರಿ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕರ್ನಾಟಕ ನಾಟಕ ಆಕಾಡೆಮಿ ಬೆಂಗಳೂರು, ವಿಜಯಲಕ್ಷ್ಮೀ ಸ್ವಸಹಾಯ ಸಹಕಾರ ಸಂಘ, ಅಮರೇಶ್ವರ ವಿದ್ಯಾವರ್ಧಕ ಸಂಘ ಇವರ ಸಂಯುಕ್ತಾಶ್ರಯದಲ್ಲಿ 1 ಮೇ ರಿಂದ 27ರ ವರೆಗೆ ನಾಟಕ ಶಿಬಿವರನ್ನು ಅಮರೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿಸಲಾಗಿದೆ.

ಮಕ್ಕಳಿಗೆ ರಂಗಗೀರ್ತೆಗಳು, ಮುಖವಾಡ ತಯಾರಿಕೆ, ಧ್ವನಿಯ ಏರಿಳಿತ, ರಂಗಾಟಗಳು, ಕರಕುಶಲ ಕಲೆಗಳು ಹಾಗೂ ನಾಟಕ ತಯಾರಿ ಮುಂತಾದ ವಿಷಯಗಳನ್ನು ಮಕ್ಕಳಿಗೆ ಕಲಿಸಿಕೊಡಲಾಗಿದೆ. 24 ಮೇ 2026ರಂದು ಸಂಜೆ 4 ಘಂಟೆಗೆ "ಆಟಕೂಟ" ಚಿನ್ನಣ್ಣರ ಸಂತೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಲ್ಲದೇ 27 ಮೇ 2026ರಂದು ವೀರಶೈವ ವಿದ್ಯಾವರ್ಧಕ ಸಂಘದ ಬಸವ ಸಭಾಂಗಣದಲ್ಲಿ ಸಂಜೆ 5.30 ಘಂಟೆಗೆ ರಂಗಗೀತೆಗಳು ಮತ್ತು ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಕಾರಣ ಸಾರ್ವಜನಿಕರು ಮಕ್ಕಳ ರಂಗಗೀತೆ ಹಾಗೂ ನಾಟಕ ಪ್ರದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಕ್ಕಳನ್ನು ಪ್ರೋತ್ಸಾಹಿಸಬೇಕೆಂದು ಕೋರಿದರು.ಈ ಸಂದರ್ಭದಲ್ಲಿ ನಟ ನಿರ್ದೇಶಕ, ರೀಯಾಲಿಟಿ ಶೋಗಳ ಮೆಂಟರ್ ಡಾ.ಪ್ರಭುರಾಜ, ನಾಟಕ ನಿರ್ದೇಶಕ ಮತ್ತು ನಟ ಶಂಕರಯ್ಯ.ಆರ್.ಘಂಟಿ, ವೀರಭದ್ರಪ್ಪ ಸೇರಿ ಇತರರು ಇದ್ದರು.

# ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಸಚಿವರುಗಳ ರಾಜೀನಾಮೆಗೆ ಜ್ಯೋತಿ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮೇ 3 ರಂದು ದೇಶಾದ್ಯಂತ ನಡೆದ ನೀಟ್ ಪರೀಕ್ಷೆಯ ಅಕ್ರಮ ಮತ್ತು ಪ್ರಶ್ನೆ ಪತ್ರಿಕೆ ಸೋರಿಕೆ (ಲೀಕ್) ಕುರಿತು ತನಿಖೆ ನಡೆಸಿ, ಕೇಂದ್ರ ಶಿಕ್ಷಣ ಸಚಿವರು ಹಾಗೂ ಕೇಂದ್ರ ಗೃಹ ಸಚಿವರ ರಾಜೀನಾಮೆ ಪಡೆಯುವಂತೆ ಒತ್ತಾಯಿಸಿ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಎಂ. ಗೊಂಡಬಾಳ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಕೊಪ್ಪಳ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ವತಿಯಿಂದ ರಾಷ್ಟ್ರಪತಿಗಳಿಗೆ ಹಲವು ಒತ್ತಾಯಗಳನ್ನು ಮಾಡಿದ್ದು, ನೀಟ್ ಪರೀಕ್ಷೆಯನ್ನು ರಾಜ್ಯಗಳಿಗೆ ಮರಳಿ ನೀಡುವಂತೆ ಒತ್ತಾಯಿಸಿದ್ದಾರೆ.

ದೇಶದ ಲಕ್ಷಾಂತರ ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಕನಸಿಗೆ ಆಧಾರವಾಗಿರುವ ನೀಟ್ ಪರೀಕ್ಷೆಯಲ್ಲಿ ಇತ್ತೀಚೆಗೆ ನಡೆದಿರುವ ಬೃಹತ್ ಪ್ರಮಾಣದ ಅಕ್ರಮಗಳು ಮತ್ತು ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ಇಡೀ ದೇಶವನ್ನೇ ತಲ್ಲಣಗೊಳಿಸಿವೆ. ಹಗಲಿರುಳು ಕಷ್ಟಪಟ್ಟು ಓದಿದ ಪ್ರಾಮಾಣಿಕ ವಿದ್ಯಾರ್ಥಿಗಳ ಭವಿಷ್ಯ ಇಂದು ಬೀದಿಗೆ ಬಂದು ನಿಲ್ಲುವಂತಾಗಿದೆ.

ಜವಾಬ್ದಾರಿ ಮತ್ತು ರಾಜೀನಾಮೆ: ದೇಶದ ಶಿಕ್ಷಣ ವ್ಯವಸ್ಥೆಯ ಪಾವಿತ್ರತೆಯನ್ನು ಕಾಪಾಡುವಲ್ಲಿ ಮತ್ತು ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಬೃಹತ್ ಅಕ್ರಮದ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ



ಸಚಿವರು ಹಾಗೂ ದೇಶದ ಭದ್ರತೆ ಮತ್ತು ತನಿಖಾ ವೈಫಲ್ಯದ ಹೊಣೆ ಹೊತ್ತು ಕೇಂದ್ರ ಗೃಹ ಸಚಿವರು ತಕ್ಷಣವೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು. ಇಲ್ಲವೇ ತಾವುಗಳು ಅವರ ರಾಜೀನಾಮೆಯನ್ನು ಪಡೆದುಕೊಳ್ಳಬೇಕು.


ಉನ್ನತ ಮಟ್ಟದ ತನಿಖೆ: ಈ ಹಗರಣದ ಹಿಂದೆ ದೊಡ್ಡ ಜಾಲವೇ ಸಕ್ರಿಯವಾಗಿದ್ದು, ಸುಪ್ರೀಂ ಕೋರ್ಟ್ನ ಹಾಲಿ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ನಿಷ್ಪಕ್ಷಪಾತ ಉನ್ನತ ಮಟ್ಟದ ತನಿಖೆ ನಡೆಯಬೇಕು.

ವಿದ್ಯಾರ್ಥಿಗಳಿಗೆ ನ್ಯಾಯ: ವಂಚನೆಗೆ ಒಳಗಾದ ಲಕ್ಷಾಂತರ ಅರ್ಹ ವಿದ್ಯಾರ್ಥಿಗಳಿಗೆ ಸೂಕ್ತ ನ್ಯಾಯ ಸಿಗುವಂತಾಗಬೇಕು ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ದೇಶದ ಭವಿಷ್ಯವಾಗಿರುವ ಯುವ ಪೀಳಿಗೆಗೆ ಮತ್ತು ಭವಿಷ್ಯದ ವೈದ್ಯರಿಗೆ ನ್ಯಾಯ ಒದಗಿಸಲು, ತಾವುಗಳು ಈ ವಿಷಯದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ವಿಶಾಲಾಕ್ಷಿ ತಾವರಗೇರಿ, ಮುಖಂಡರಾದ ಸುಮಂಗಲಾ ನಾಯಕ, ಚನ್ನಮ್ಮ ಮುಳಗುಂದ ಇತರರು ಇದ್ದರು, ತಹಶೀಲ್ದಾರರು, ಕೊಪ್ಪಳ ಇವರ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಅರ್ಪಿಸಲಾಯಿತು, ತಹಶೀಲ್ದಾರ ಪರವಾಗಿ ಗ್ರೇಡ್ 2 ತಹಶೀಲ್ದಾರ ಗವಿಸಿದ್ದಪ್ಪ ಮನ್ನೂರ ಮನವಿ ಸ್ವೀಕರಿಸಿದರು.

# ಸರ್ಕಾರಿ ಜಾಗ ಒತ್ತುವರಿ ಜಿಲ್ಲಾ ಆಡಳಿತ ತೆರವು ಕಾರ್ಯಚರಣೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ





ನಗರದ ಹೊರವಲಯದ ಪಾತ್ರಬೂದಿಹಾಳ್ ಗ್ರಾಮದ ಸರ್ವೆ ನಂ.125ಪಿ ವ್ಯಾಪ್ತಿಯ ಸುಮಾರು 7.87 ಎಕರೆ ಸರ್ಕಾರಿ ಜಾಗದಲ್ಲಿ 70 ವರ್ಷಗಳಿಂದ ದಲಿತ ಕುಟುಂಬ ಆದ ನಾವು ನಮ್ಮ ಅವ್ವತಾತ ಕಾಲದಿಂದ ಇಲ್ಲಿಯ ವರೆಗೆ ಸಾಗುವಳದಾರರಾಗಿ ಇದ್ದೇವೆ ಎಂದು ಜಾಗದ ಮಾಲಿಕ ಪಿ ಹೊನ್ನೂರಪ್ಪ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆ ಜಾಗಕ್ಕೆ ಸಂಬಂಧಪಟ್ಟ ಪಹಣಿ ಸಹ ನಮ್ಮ ಹೆಸರಿನ ಮೇಲೆ ಇದೆ .ಯಾರೋ ದುರುದ್ದೇಶದಿಂದ ತಪ್ಪು ಮಾಹಿತಿ ನೀಡಿದ್ದಾರೆ . ಇದರ ಬಗ್ಗೆ ಸೋಮವಾರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ನೀಡಲಿದ್ದೇವೆ. ನಮ್ಮ ಅವ್ವ ತಾತ ಕಾಲದಿಂದ ಸಾಗುವಳಿದಾರರಾಗಿ ಇದ್ದು ನಮ್ಮ ಕಷ್ಟ ಪರಿಸ್ಥಿತಿಗಳಿಗೆ ಅದೇ ಜಾಗದಲ್ಲಿ ಬಡ ಕುಟುಂಬಗಳಿಗೆ ಹಣವನ್ನು ಪಡೆದು ಜಾಗವನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಆದರೆ ಮಹಾನಗರ ಪಾಲಿಕೆ ಉಮಾದೇವಿ ಪತ್ನಿ ಶಿವರಾಜು ನಾವು ಒಂದೇ ಪ್ರದೇಶದಲ್ಲಿ ಇರುವುದರಿಂದ ಆ ಜಾಗಕ್ಕೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ ಅವರನ್ನು ಸಾಕ್ಷಿ ದಾರನಾಗಿಟ್ಟುಕೊಂಡು ಫಲಾನುಭವಿಗಳು ಹಣವನ್ನು ನನಗೆ ಕೊಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ಯಾರು ಕೈವಾಡ ಏನು ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಈಗ ಜಿಲ್ಲಾಡಳಿತ ನವರು ಇದು ಸರ್ಕಾರ ಜಾಗ ತೆರವು ಮಾಡುತ್ತಿದ್ದೇವೆ ಎಂದು ಕಾರ್ಯಾಚರಣೆ ಪ್ರಾರಂಭಿಸಿದ್ದಾರೆ . ಆದರೆ ಬಡ ಕುಟುಂಬಗಳಿಗೆ ಅನ್ಯಾಯ ಆಗೋದು ಬೇಡ ಅವರ ಹಣವನ್ನು ವಾಪಸು ನೀಡುತ್ತೇನೆ . ಇದರ ಬಗ್ಗೆ ನ್ಯಾಯಾಲಯ ಮೊರೆ ಹೋಗುತ್ತೇನೆ ಎಂದು ಜಾಗದ ಮಾಲಿಕ ಪಿ .ಹೊನ್ನೂರಪ್ಪ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಜಿಲ್ಲಾಡಳಿತದ ಸೂಚನೆಯ ಮೇರೆಗೆ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಒತ್ತುವರಿ ತೆರವು ಕಾರ್ಯಾಚರಣೆಯ ವೇಳೆ ಅಕ್ರಮ ಲೇಔಟ್ ಹಾಗೂ ಸೈಟ್ ಮಾರಾಟದ ವಿಚಾರ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಕಾರ್ಯಾಚರಣೆಯ ಸಂದರ್ಭದಲ್ಲಿ ಹಣ ನೀಡಿ ಸೈಟ್ ಪಡೆದಿದ್ದ ಹಲವಾರು ಕುಟುಂಬಗಳು ಅಧಿಕಾರಿಗಳ ಎದುರು ತಮ್ಮ ಅಳಲು ತೋಡಿಕೊಂಡಿದ್ದು, "ನಮಗೆ ಮನೆ ಸೈಟ್ ಸಿಗುತ್ತದೆ ಎಂಬ ನಂಬಿಕೆಯಲ್ಲಿ ಹಣ ನೀಡಿದ್ದೇವೆ. ಅಧಿಕಾರಗಳ ಮೊರೆ ಹೋಗಿದ್ದಾರೆ. ಈಗ ಎಲ್ಲವೂ ತೆರವುಗೊಳ್ಳುತ್ತಿದೆ" ಎಂದು ಕಣ್ಣೀರಿಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಸರ್ಕಾರಿ ಹಳ್ಳದ ಜಾಗವನ್ನು ಒತ್ತುವರಿ ಮಾಡಿಕೊಂಡು ಅಕ್ರಮ ಲೇಔಟ್ ನಿರ್ಮಿಸಿ ಬಡ ಜನರಿಗೆ ಸೈಟ್ ಮಾರಾಟ ಮಾಡಲಾಗಿದೆ ಎಂಬ ಆರೋಪ ಸುಳ್ಳು ಎಂದರು.

ಮಹಾನಗರ ಪಾಲಿಕೆ ಸದಸ್ಯ ಪತಿ ಶಿವರಾಜು ಪ್ರತಿಕ್ರಿಯೆ....

ಈ ಆರೋಪಗಳು ಸತ್ಯಕ್ಕೆ ದೂರವಾದದ್ದು ಜಾಗದ ಮಾಲೀಕ ನಮ್ಮ ಮನೆ ಎದುರು ನಮ್ಮ ವಾರ್ಡಿನಲ್ಲಿ ಇರುವುದರಿಂದ ಕೆಲವು ಬಡ ಕುಟುಂಬಗಳಿಗೆ ನಮ್ಮ ಜಾಗದಲ್ಲಿ ಸೈಟುಗಳನ್ನು ನೀಡುತ್ತೇನೆ ಎಂದು ನನ್ನ ಬಳಿ ವಿಚಾರಿಸಿದಾಗ ಯಾರನ್ನಾದರೂ ಸಾಕ್ಷಿಗಾಗಿ ಇಟ್ಕೊಂಡು ಸೈಟ್ಗಳನ್ನು ನೀಡು ಎಂದು ನನ್ನ ಕಡೆಯಿಂದ ಸಲಹೆ ನೀಡಿದ್ದಾಗ ಕೆಲವರು ಫಲಾನುಭವಿಗಳು ನನ್ನ ಬಳಿ ಬಂದು ನನ್ನ ಎದುರು ಗೆ ಹಣವನ್ನು ನೀಡಿದ್ದಾರೆ ಎಂದು ಮಹಾನಗರ ಪಾಲಿಕೆ ಸದಸ್ಯ ಪತಿ ಶಿವರಾಜ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಆದರೆ ನನಗೆ ತಿಳಿದ ವಿಷಯ ಆ ಜಮೀನು ಹೊನ್ನೂರಪ್ಪ ಅವ್ವ ತಾತರ ಕಾಲದಿಂದ ಸಾಗುವಳದಾರರಾಗಿ ಇದ್ದಾರೆ ಎಂದು ಹೇಳಿದ್ದಾರೆ.

# ಎಸ್.ಸಿ –ಎಸ್.ಟಿ ಮೀಸಲಾತಿ ರಕ್ಷಣೆ ಹಾಗೂ 9ನೇ ಷೆಡ್ಯೂಲ್‌ಗೆ ಸೇರಿಸಲು ಒತ್ತಾಯಿಸಿ ಸಿಎಂಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ (17.1%) ಮತ್ತು ಪರಿಶಿಷ್ಟ ಪಂಗಡಗಳ (6.95%) ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕ್ರಮವಾಗಿ ಶೇ. 17 ಹಾಗೂ ಶೇ. 7ಕ್ಕೆ (ಒಟ್ಟು 56%) ಹೆಚ್ಚಿಸಿ ಜಾರಿಗೆ ತರಲಾದ 2022ರ ಅಧಿನಿಯಮವನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು ಮತ್ತು ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ಒತ್ತಾಯಿಸಿ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹಾಗೂ ಕೊಪ್ಪಳ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಡಾ. ಕೆ.ಎನ್. ಪಾಟೀಲ ಸೇರಿದಂತೆ ಪ್ರಮುಖ ನಾಯಕರು ಕೊಪ್ಪಳ ಜಿಲ್ಲಾಧಿಕಾರಿಗಳ ಮುಖಾಂತರ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಜಂಟಿ ಮನವಿ ಸಲ್ಲಿಸಿದರು.

ಅಶೋಕ ವೃತ್ತದಲ್ಲಿ ಆಗಮಿಸಿದ ಸಮುದಾಗಳ ಮುಖಂಡರು ಸಹಾಯಕ ಆಯುಕ್ತ ಕ್ಯಾ. ಮಹೇಶ ಮಾಲಗಿತ್ತಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ದಶಕಗಳ ಹೋರಾಟ ಹಾಗೂ ನ್ಯಾಯಮೂರ್ತಿಗಳಾದ ನಾಗಮೋಹನದಾಸ್ ಮತ್ತು ಸುಭಾಷ್ ಆಡಿ ಆಯೋಗಗಳ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರ ಜಾರಿಗೆ ತಂದಿದ್ದ 56% ಮೀಸಲಾತಿಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಉದ್ಯೋಗ ಆಕಾಂಕ್ಷಿಗಳು ಸೌಲಭ್ಯ ಪಡೆದಿದ್ದರು. ಆದರೆ, ಇತ್ತೀಚೆಗೆ ಹೈಕೋರ್ಟ್ ಈ ಕಾನೂನಿಗೆ ತಡೆಯಾಜ್ಞೆ ನೀಡಿರುವುದರಿಂದ ಈ ಸಮುದಾಯಗಳ ಸಾಮಾಜಿಕ ನ್ಯಾಯಕ್ಕೆ ಭಾರಿ ಹಿನ್ನಡೆಯಾಗಿದೆ ಎಂದು ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

ಕಾನೂನಿನ ಶಾಶ್ವತ ರಕ್ಷಣೆಗಾಗಿ ಇದನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು 2025ರ ಬೆಳಗಾವಿ ಅಧಿವೇಶನದಲ್ಲಿ ಸರ್ವಸಮ್ಮತ ನಿರ್ಣಯ ಕೈಗೊಳ್ಳಲಾಗಿದ್ದರೂ, ಕೇಂದ್ರ ಸರ್ಕಾರದ ಮೇಲೆ ಸೂಕ್ತ ಒತ್ತಡ ಹೇರದೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಲಹರಣ ಮಾಡುತ್ತಿವೆ ಎಂದು ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಪ್ರಮುಖ ಬೇಡಿಕೆಗಳು:

ಸರ್ವಪಕ್ಷಗಳ ಸಭೆ ಮತ್ತು ನಿಯೋಗ: ಈ ವಿಷಯವಾಗಿ ತಕ್ಷಣವೇ ಸರ್ವಪಕ್ಷಗಳ ಸಭೆ ಕರೆಯಬೇಕು ಹಾಗೂ ಪ್ರಧಾನಮಂತ್ರಿಗಳ ಬಳಿಗೆ ಸರ್ವಪಕ್ಷಗಳ ನಿಯೋಗವನ್ನು ಕೊಂಡೊಯ್ಯಬೇಕು.ನ್ಯಾಯಾಲಯದಲ್ಲಿ ಕಾನೂನು ಹೋರಾಟ:

ಹೈಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಸಮರ್ಥ ವಕೀಲರನ್ನು ನೇಮಿಸಬೇಕು. ಒಂದು ವೇಳೆ ತಡೆಯಾಜ್ಞೆ ತೆರವಾಗದಿದ್ದರೆ ತಕ್ಷಣವೇ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ (ಖಐಕ) ದಾಖಲಿಸಬೇಕು.

ಜನಪ್ರತಿನಿಧಿಗಳ ತುರ್ತು ಸಭೆ: ಎಸ್.ಸಿ/ಎಸ್.ಟಿ ಹಾಗೂ ಒಬಿಸಿ ವರ್ಗದ ಜನಪ್ರತಿನಿಧಿಗಳು ಮತ್ತು ಕಾನೂನು ತಜ್ಞರ ತುರ್ತು ಸಭೆ ಕರೆದು ಚರ್ಚಿಸಬೇಕು.

ಸುಳ್ಳು ಜಾತಿ ಪ್ರಮಾಣ ಪತ್ರಗಳ ವಿರುದ್ಧ ಕ್ರಮ: ಲಕ್ಷಾಂತರ ಜನರು ಸುಳ್ಳು ಎಸ್.ಸಿ/ಎಸ್.ಟಿ ಜಾತಿ ಪ್ರಮಾಣ ಪತ್ರ ಪಡೆದು ಸೌಲಭ್ಯ ಕಬಳಿಸುತ್ತಿದ್ದು, ಅಂತಹವರ ಹಾಗೂ ಪ್ರಮಾಣ ಪತ್ರ ನೀಡಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.ರಾಜ್ಯದ ಎಲ್ಲಾ ಸಂಸದರು, ಶಾಸಕರು ಮತ್ತು ಮಂತ್ರಿಗಳು ಪಕ್ಷಾತೀತವಾಗಿ ಒತ್ತಡ ತಂದು ಈ ಕಾನೂನನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು ಹೋರಾಡಬೇಕೆಂದು ಮನವಿಯಲ್ಲಿ ವಿನಂತಿಸಲಾಗಿದೆ. ಈ ಸಂದರ್ಭದಲ್ಲಿ ಲಿಂಗಸೂರ ಗೋಲಪಲ್ಲಿ ವಾಲ್ಮೀಕಿ ಆಶ್ರಮದ ಸ್ವಾಮೀಜಿ, ಮುಖಂಡರಾದ ರಾಮಣ್ಣ ಕಲ್ಲನವರ, ಟಿ. ರತ್ನಾಕರ, ತುಳಸಿರಾಮ ಬೆಂಗಳೂರು, ಮಂಜುನಾಥ ಜಿ. ಗೊಂಡಬಾಳ, ಹನುಮೇಶ ನಾಯಕ, ಶಿವರಡ್ಡಿ ಕಾರಟಗಿ, ಮಾಲತಿ ನಾಯಕ, ಜ್ಯೋತಿ ಎಂ. ಗೊಂಡಬಾಳ, ಮಂಗಳೇಶ ಕುಕನೂರ, ಮಾನಪ್ಪ ಪೂಜಾರ, ಗದ್ದೆಪ್ಪ ನಾಯಕ, ವೆಂಕಟೇಶ ನಾಯಕ, ರಾಜಣ್ಣ ಚಿತ್ರದುರ್ಗ, ಮುತ್ತು ನಾಯ್ಕರ, ಬಸವರಾಜ ಶಹಪೂರ, ಮಾರ್ಕಂಡಪ್ಪ ಕಲ್ಲನವರ, ಅಂಬಣ್ಣ ನಾಯಕ, ಯಮನೂರಪ್ಪ ಸಿಂಗನಾಳ, ಮಾನಪ್ಪ ಶಾಖಾಪೂರ, ಯಲ್ಲಪ್ಪ ಹಡಗಲಿ, ಹಂಚ್ಯಾಳಪ್ಪ, ಸಂಗಪ್ಪ ಕುಷ್ಟಗಿ, ಬಸವರಾಜ ಕುಷ್ಟಗಿ, ಕೊಟೇಶ ತಳವಾರ, ಪ್ರಶಾಂತ ನಾಯಕ, ಸಂಜೀವ ಇಟಗಿ, ಸಿದ್ದು ಕೋಳಿಪೇಟೆ, ರಾಜೇಶ ಗಂಗಾವತಿ ಅನೇಕರು ಉಪಸ್ಥಿತರಿದ್ದರು.

# ಚಿತ್ತಾಪುರ: ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.24-ಚಿತ್ತಾಪೂರತಾಲ್ಲೂಕಿನಲ್ಲಿಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಪಿ.ಯು.ಸಿ ಕೋರ್ಸಿನ ವಿದ್ಯಾರ್ಥಿಗಳು)

ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2026-27 ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಚಿತ್ತಾಪುರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಚಿತ್ತಾಪೂರ ತಾಲ್ಲೂಕಿನ ಎಲ್ಲಾ ವಿವಿಧಕಾಲೇಜುಗಳಲ್ಲಿ (ಪಿ.ಯು.ಸಿ ಕೋರ್ಸಿನ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು https:shp.karnataka.gov.in/bcwd ವೆಬ್‌ಸೈಟ್‌ದಲ್ಲಿ ಆನ್‌ಲೈನ್ ಮೂಲಕ 2026ರ ಜೂನ್ 15 ರೊಳಗಾಗಿ ಅರ್ಜಿ ಸಲ್ಲಿಸಬೇಕು. ನಂತರ ವಿದ್ಯಾರ್ಥಿಗಳು ಅಪ್ಲಿಕೇಶನ್ ಪ್ರಿಂಟ್ ತೆಗೆದುಕೊಂಡು ವಸತಿ ನಿಲಯದ ಮೇಲ್ವಿಚಾರಕರಿಗೆ ಸಲ್ಲಿಸಬೇಕು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ www.bcwd.karnataka.gov.in<http://WWW.back.karnataka.gov.in> ವೆಬ್‌ಸೈಟ್‌ನ್ನು, ಸಹಾಯವಾಣಿಸಖ್ಯೆ: 8050770004, ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.helpline@gmail.com ಇ-ಮೇಲ್ ಮೂಲಕ ಅಥವಾ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ದಾಖಲೆಗಳೊಂದಿಗೆ ಸಂಪರ್ಕಿಸಲು ಕೋರಲಾಗಿದೆ.

# ದಿಢೀರ್ ದಾಳಿ ನಡೆಸಿ ಲಾರಿ ಸಹಿತ ಮರದ ದಿಮ್ಮಿಗಳ ವಶ



**ಹುಣಸೂರು:** ಲಾರಿಯಲ್ಲಿ ಅಕ್ರಮವಾಗಿ ಲಕ್ಷಾಂತರ ರೂ. ಬೆಲೆಬಾಳುವ ಬೀಟೆ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ಆರೋಪಿಯನ್ನು ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದವರು ದಿಢೀರ್ ದಾಳಿ ನಡೆಸಿ ಲಾರಿ ಸಹಿತ ಮರದ ದಿಮ್ಮಿಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ ಘಟನೆ ನಡೆದಿದೆ.

ಮೂಲತಃ ಕೇರಳಂ ರಾಜ್ಯದ ಮಲಪುರಂನ ಲಾರಿ ಮಾಲೀಕ ಕಂ ಚಾಲಕ ಅಬ್ದುಲ್ ಶುಕೂರ್ ಬಂಧಿತ ಆರೋಪಿ. ಲಾರಿಯಲ್ಲಿದ್ದ ಸುಮಾರು 30 ಲಕ್ಷ ರೂ. ಬೆಲೆ ಬಾಳುವ 45 ಬೀಟೆ ಮರದ ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಲಾರಿಯಲ್ಲಿ ಕೊಡಗಿನಿಂದ ಕಾಫಿ ಹಾಗೂ ಮರದ ಹೊಟ್ಟು ತುಂಬಿದ ಮೂಟೆಗಳ ನಡುವೆ ಬೀಟೆ ಮರದ ದಿಮ್ಮಿಗಳನ್ನಿಟ್ಟು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಕಿರುಬನಂತನ್, ಎಸಿಎಫ್ ಮಹದೇವಯ್ಯರ ಮಾರ್ಗದರ್ಶನದಲ್ಲಿ ಹುಣಸೂರು ಆರ್‌ಎಫ್‌ಓ ಸಂತೋಷ್ ಎಂ.ಹೂಗಾರ್ ನೇತೃತ್ವದ ತಂಡ ಹುಣಸೂರು–ಎಚ್.ಡಿ.ಕೋಟೆ ಮುಖ್ಯರಸ್ತೆಯ ಆಜಾದ್ ನಗರದ ಪೆಟ್ರೋಲ್ ಬಂಕ್ ಬಳಿ ಹೊಂಚು ಹಾಕಿ ಲಾರಿಯನ್ನು ಅಡ್ಡಗಟ್ಟಿ ಪರಿಶೀಲಿಸಿದ ವೇಳೆ ಮರದ ದಿಮ್ಮಿಗಳಿರುವುದು ಪತ್ತೆಯಾಗಿದೆ.

ಲಾರಿಯನ್ನು ಜಪ್ತಿ ಮಾಡಿ, ಮರದ ತುಂಡುಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಸಹಿತ ಆರೋಪಿ ಅಬ್ದುಲ್ ಶುಕೂರ್‌ನನ್ನು ವಶಕ್ಕೆ ಪಡೆದಿದ್ದಾರೆ.

# ಸಮಾಜ ಸೇವೆಯಿಂದ ಬದುಕು ಸಂತೃಪ್ತಿ



**ಬಾಗಲಕೋಟೆ:** ಸಮಾಜ ಸುಧಾರಣೆಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಪಾತ್ರ ಮುಖ್ಯವಾಗಿದೆ. ವ್ಯಕ್ತಿ ಸಮಾಜ ಋಣ ತೀರಿಸಲು ಸೇವೆಯಿಂದ ಸಾಧ್ಯವಿದೆ. ಸಮಾಜ ಸೇವೆಯಿಂದ ಸಂತೃಪ್ತಿಯ ಬದುಕು ರೂಪಗೊಳ್ಳುತ್ತದೆ ಎಂದು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಹೇಳಿದರು.

ನವನಗರದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ರವಿವಾರ ನಡೆದ ಬೆನಕಟ್ಟಿ ಗ್ರಾಮದ ನಿವೃತ್ತ ಕೃಷಿ ಅಧಿಕಾರಿ ಹಣಮಂತಗೌಡ ಭೀಮಪ್ಪ ಗೊರವರ ಅವರ 75ನೇ ಹುಟ್ಟು ಹಬ್ಬದ ಅಮೃತ ಮಹೋತ್ಸವ ಮತ್ತು 'ಸಮಾಜ ಚಿಂತಕ' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ ಅವರು ಮಾತನಾಡಿದರು.

ವ್ಯಕ್ತಿಯು ಸೇವೆ ಮಾಡುತ್ತಾ ಸಾಗಿದರೆ ತಾವು ಮಾಡಿದ ಕೆಲಸ ಸಮಾಜಕ್ಕೆ ಸಮರ್ಪಿತವಾಗುತ್ತದೆ. ಸಾಹಿತ್ಯ ವಲಯದಲ್ಲಿ ಅಭಿನಂದನಾ ಗ್ರಂಥಗಳಿಂದ ವ್ಯಕ್ತಿಯ ಸೇವೆ ಮತ್ತು ಸಾಧನೆಗಳನ್ನು ದಾಖಲಿಸಿ ಮುಂದಿನ ಜನಾಂಗದವರಿಗೆ ನೀಡುವ ಕಾರ್ಯ ಮಾಡುವುದು ಮಾದರಿಯಾಗಿದೆ ಎಂದರು.

ಗ್ರಂಥ ಪ್ರಧಾನ ಸಂಪಾದಕ ಪ್ರೊ.ವಾಯ್.ಎಂ.ಯಾಕೊಳ್ಳಿ ಮಾತನಾಡಿ, ವ್ಯಕ್ತಿ ಸಮಾಜ ಜೀವಿಯಾಗಿ, ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಕಾರ್ಯಗಳನ್ನು ಮಾಡುವ ಮೂಲಕ ಸಮಾಜಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುವ ಜೀವನ ಮಾಡಿರುವ ಹೆಚ್.ಬಿ. ಗೊರವರ ಅವರ ಸೇವೆ ಅನನ್ಯವಾಗಿದೆ ಎಂದರು.

ಸಂಶೋಧಕ ಪ್ರೊ. ಚಂದ್ರಶೇಖರ ಕಾಳನ್ನವರ ಸಮಾಜ ಚಿಂತಕ ಗ್ರಂಥವನ್ನು ಅವಲೋಕನ ಮಾಡಿ ಮಾತನಾಡಿ, ಸಮಾಜದ ಅಭಿನಂದನೆಗೆ ಅರ್ಹವಾದ ಹೆಚ್.ಬಿ.ಗೊರವರ ಅವರ ಕುಟುಂಬದ ಸಾಂಸ್ಕೃತಿಕ, ಸಂಪ್ರದಾಯ, ಪರಂಪರೆ ಮತ್ತು ಬೆನಕಟ್ಟಿ ಗ್ರಾಮದ ಗ್ರಾಮೀಣ ಪರಿಸರದ ಅಸ್ಮಿತೆ ಅಳವಡಿಸಿಕೊಂಡ ಇವರು ಸಾಮಾಜಿಕ ಸೇವೆ ಪ್ರತಿರೂಪವಾದ ಸಮಾಜ ಚಿಂತಕ ಅಭಿನಂದನಾ ಗ್ರಂಥವು ಮುಂದಿನ ಪೀಳಿಗಿಗೆ ಆಕರ ಗ್ರಂಥವಾಗಿದೆ ಎಂದು ಹೇಳಿದರು.

ಕೆಪಿಸಿಸಿ ಓಬಿಸಿ ರಾಜ್ಯ ಕಾರ್ಯದರ್ಶಿ ಮಹೇಶ ಹೊಸಗೌಡರ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಸೊಗಡಿನ ಹೆಚ್.ಬಿ.ಗೊರವರ ಬದುಕು ಸಾರ್ಥಕವಾಗಿದೆ ಎಂದರು.

ಶಿರೂರಿನ ಚಿನ್ಮಯಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅಭಿನಂದನಾ ಸಮೀತಿ ಸಂಯೋಜಕ ಪಾಂಡುರಂಗ ಸಣ್ಣಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖಂಡ ಸತ್ಯಪ್ಪ ಮೇಲ್ನಾಡ, ಸಾಹಿತಿ ಕಿರಣ ಬಾಳಾಗೋಳ, ಕೃಷ್ಣ ಓಗೆನ್ನವರ, ಬಸವರಾಜ ಅಂಟರತಾನಿ, ಗೀತಾ ದಾನಶೆಟ್ಟಿ, ರಾಜು ಮನ್ನಿಕೇರಿ, ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ನೀಲಪ್ಪ ಗೊರವರ, ಎಚ್.ಎಸ್.ಘಂಟಿ ಮತ್ತಿತರರು ಇದ್ದರು.

# ಕಾಳು ಮಾತ್ರೆಗಳನ್ನು ಸೇವಿಸಿ ರೈತ ಆತ್ಮಹತ್ಯೆ

**ಹುಣಸೂರು:** ತಾಲ್ಲೂಕು ವ್ಯವಸಾಯ ಮಂಟಿಕೊಪ್ಪಲು ಗ್ರಾಮದ ರೈತ ಬೆಳೆದ ಬೆಳೆಗೆ ಸಿಗದೇ–ಸಾಲದ ಬಾದೆ ತಾಳಲಾರದೆ ರೈತ ಆತ್ಮಹತ್ಯೆ ಮೃತನು ದೇವರಾಜು ವಯಸ್ಸು 62 ಅವರು ಜಮೀನಿನ ಮೇಲೆ ಮಾಡಿರುವ ಸಾಲವನ್ನು ತೀರಿಸಲಾಗದೆ ಜೀವನದಲ್ಲಿ ಜಿಗುಪ್ಸೆಗೊಂಡು ಬ್ಯಾರನ್ ಮನೆಯ ಹಿಂಭಾಗದಲ್ಲಿ ಕಾಳು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಘಟನೆ ಬೆಳಕಿಗೆ ಬಂದಿದೆ.

ಕಳೆದ 3ವರ್ಷಗಳಿಂದ ಬೆಳೆ ಬಾರದೆ ನಷ್ಟ ಉಂಟಾಗಿ ಹಾಗೂ ಹೊಗೆಸೊಪ್ಪು ಬೆಲೆ ಕುಸಿತದ ಹಿನ್ನೆಲೆಯಲ್ಲಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಮೃತನ ಹೆಸರಿನಲ್ಲಿ ಜಮೀನು ಇರುತ್ತದೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಪಡೆದಿರುತ್ತಾರೆ. ಅವರ ಬ್ಯಾರನ್ ಮನೆಯ ಹಿಂಭಾಗದಲ್ಲಿ ಕಾಳು ಮಾತ್ರೆಗಳನ್ನು ಸೇವಿಸಿ ರೈತ ಆತ್ಮಹತ್ಯೆ ಎಂದು ದೂರು ದಾಖಲಿಸಿದ್ದಾರೆ. ಯೂನಿಯನ್ ಬ್ಯಾಂಕ್ ನಲ್ಲಿ ಹುಣಸೂರು ನಲ್ಲಿ 24ಲಕ್ಷ ರೂ,ಕೆನರಾ ಬ್ಯಾಂಕ್ ನಲ್ಲಿ 3ಲಕ್ಷ ರೂ,ಸುಪ್ರಾ ಪೆಸಿಫಿಕ್ ಫೈನಾನ್ಸ್ ನಲ್ಲಿ ಚಿನ್ನಾಭರಣ ಮೇಲೆ 986500/–ರೂ ,ಐಎಈ ಬ್ಯಾಂಕ್ ಹೋಮ್ ಫೈನಾನ್ಸ್ ನಲ್ಲಿ ಟ್ರಾಕ್ಟರ್ ಮೇಲೆ 3ಲಕ್ಷ ರೂ ಸಾಲ ವ್ಯವಸಾಯ ಮಾಡುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಒಟ್ಟು ಸಾಲ– 39,86,500 ರೂಕೈಸಾಲ ಮಾಡಿದ್ದಾನಾ– 5ಲಕ್ಷ ರೂ ಎಂದು ತಿಳಿದಿದೆ ಮೃತಪಟ್ಟ ವ್ಯಕ್ತಿಗೆ ಹೆಂಡತಿ ಹಾಗೂ ಮೂರು ಮಕ್ಕಳು ಅಗಲಿದ್ದಾರೆ. ನಗರ ಪೊಲೀಸ್ ಠಾಣೆ ಠಾಣೆಯಲ್ಲಿ ಪ್ರಕರಣ ದಾಖಲು ದಾಖಲಿಸಿರುತ್ತಾರೆ.

# ಮರಳು ಬ್ಲಾಕ್: ಎನ್‌ಒಸಿ ಪ್ರಕ್ರಿಯೆಗೆ ಸ್ಥಳ ಪರಿಶೀಲನೆ

• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ತಾಲೂಕಿನ ಅರಳಿಹಳ್ಳಿ ಸಮೀಪ ಸರ್ಕಾರಿ ಕಾಮಗಾರಿಗಳಿಗೆ ಅಗತ್ಯವಾಗಿರುವ ಮರಳು ಪೂರೈಕೆಯ ಉದ್ದೇಶದಿಂದ ಗುರುತಿಸಲಾದ ಮರಳು ಬ್ಲಾಕ್ ಪ್ರದೇಶವನ್ನು ವೀಕ್ಷಿಸಲು ಬಳ್ಳಾರಿ ಉಪ ವಿಭಾಗಾಧಿಕಾರಿ (ಎಸಿ) ಹೆಚ್.ಡಿ.ರಾಜೇಶ್ ಶನಿವಾರ ಭೇಟಿ ನೀಡಿದರು. ಸ್ಥಳ ಪರಿಶೀಲನೆ ಬಳಿಕ ಪಟ್ಟಣದ ಅತಿಥಿಗೃಹ ಆವರಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವಿವಿಧ ಸಾರ್ವಜನಿಕ ಸಮಸ್ಯೆಗಳ ಕುರಿತು ಸೂಚನೆಗಳನ್ನು ನೀಡಿದರು.

ಈ ವೇಳೆ ಮಾತನಾಡಿದ ಬಳ್ಳಾರಿ ಉಪವಿಭಾಗದ ಸಹಾಯಕ ಆಯುಕ್ತ ಹೆಚ್.ಡಿ.ರಾಜೇಶ್, ಸರ್ಕಾರಿ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ನಿಯಮಾನುಸಾರ ಮರಳು ಪೂರೈಕೆ ಮಾಡುವ ಉದ್ದೇಶದಿಂದ ಪಿಡಬ್ಲ್ಯೂಡಿ ಇಲಾಖೆಗೆ ಅನುಮತಿ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯಿಂದ ಅಗತ್ಯವಾದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡುವ ಮೊದಲು ಅರಳಿಹಳ್ಳಿ ಬಳಿ ಗುರುತಿಸಲಾದ ಪ್ರದೇಶವನ್ನು ಸ್ಥಳೀಯ ಅಧಿಕಾರಿಗಳೊಂದಿಗೆ ಪರಿಶೀಲಿಸಲಾಗಿದೆ ಎಂದು ತಿಳಿಸಿದರು.



ಸರ್ಕಾರಿ ಕಾಮಗಾರಿಗಳು ವಿಳಂಬವಾಗದಂತೆ ಮರಳು ಲಭ್ಯತೆ ಸುಗಮವಾಗಬೇಕು. ನಿಯಮಬದ್ಧವಾಗಿ ಮರಳು ಪೂರೈಕೆ ವ್ಯವಸ್ಥೆ ಜಾರಿಯಾಗುವುದರಿಂದ ಸಾರ್ವಜನಿಕ ಕಾಮಗಾರಿಗಳಿಗೆ ವೇಗ ಸಿಗಲಿದೆ ಎಂದು ಹೇಳಿದರು.

ಇದೇ ವೇಳೆ ಪಟ್ಟಣದ ಮೂಲಸೌಕರ್ಯ ಸಮಸ್ಯೆಗಳ ಕುರಿತು ಅಧಿಕಾರಿಗಳ ಗಮನ ಸೆಳೆದ ಅವರು, ಕೊಟ್ಟಾಲ್ ರಸ್ತೆಯ ಡಿವೈಡರ್‌ನಲ್ಲಿ ಸುಮಾರು 600 ಮೀಟರ್ ಉದ್ದದಲ್ಲಿ ಅಳವಡಿಸಲಾಗಿರುವ ಬೀದಿದೀಪಗಳು ಒಂದು ವರ್ಷ ಕಳೆದರೂ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಪುರಸಭೆಗೆ ಅಧಿಕೃತ ಹಸ್ತಾಂತರಕ್ಕೂ ಮುನ್ನವೇ ದೀಪಗಳು ಬೆಳಗದಿರುವುದು ನಿರ್ಲಕ್ಷ್ಯತೆಯ ಸೂಚಕವಾಗಿದೆ. ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಶೀಘ್ರ ದುರಸ್ತಿ ಕಾರ್ಯ ನಡೆಸುವಂತೆ ಪುರಸಭೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಾದಚಾರಿಗಳಿಗೆ ಅನುಕೂಲವಾಗಬೇಕಾದ ರಸ್ತೆ ಬದಿಯ ಪಾದಚಾರಿ ಮಾರ್ಗಗಳನ್ನು ವ್ಯಾಪಾರಿಗಳು ಅತಿಕ್ರಮಿಸಿಕೊಂಡಿರುವ ಕುರಿತು ಸಹ ಗಂಭೀರವಾಗಿ ಪ್ರತಿಕ್ರಿಯಿಸಿದ ಅವರು, ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಅಂಗಡಿಗಳ ವಿಸ್ತರಣೆ ನಡೆಯಬಾರದು ಎಂದು ಎಚ್ಚರಿಸಿದರು. ಪಾದಚಾರಿ ಮಾರ್ಗ ಅತಿಕ್ರಮಿಸಿರುವ ಅಂಗಡಿ ಮಾಲೀಕರಿಗೆ ತಕ್ಷಣ ನೋಟಿಸ್ ಜಾರಿಗೊಳಿಸಿ, ನಿಯಮ ಉಲ್ಲಂಘನೆ ಮುಂದುವರಿಸಿದರೆ ಟ್ರೇಡ್ ಲೈಸೆನ್ಸ್ ರದ್ದುಗೊಳಿಸುವ ಕ್ರಮ ಕೈಗೊಳ್ಳುವಂತೆ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚಿಸಿದರು.

ನಗರದ ಸ್ವಚ್ಛತೆ, ರಸ್ತೆ ಸುರಕ್ಷತೆ ಹಾಗೂ ಸಾರ್ವಜನಿಕ ಸೌಲಭ್ಯಗಳ ನಿರ್ವಹಣೆಯಲ್ಲಿ ಅಧಿಕಾರಿಗಳು ಹೆಚ್ಚಿನ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಈ ವೇಳೆ ತಹಸೀಲ್ದಾರ್ ಜೂಗಲ ಮಂಜುನಾಯಕ, ಕಂದಾಯ ನಿರೀಕ್ಷಕ ವೈ.ಎಂ.ಜಗದೀಶ ಗಣಿ ಭೂ ವಿಜ್ಞಾನ ಇಲಾಖೆ ಅಧಿಕಾರಿ ಕಾರ್ತಿಕ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ವೇಮನ ತತ್ವ ಚಿಂತನ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ತತ್ವಜ್ಞಾನಿ ಮಹಾಯೋಗಿ ವೇಮನ ಹಾಗೂ ಹೇಮರಡ್ಡಿ ಮಲ್ಲಮ್ಮ ಕೇವಲ ಒಂದು ಸಮಾಜದ ಆಸ್ತಿಯಲ್ಲ, ಇಡೀ ಮನುಕುಲದ ಆಸ್ತಿ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.

ನವನಗರದ ನ್ಯಾಯವಾದಿ ರಮೇಶ ಬದ್ನೂರ ನಿವಾಸದಲ್ಲಿ ಬೆನಕಟ್ಟಿಯ ಹೇಮ ವೇಮನ ಸದ್ಬೋಧನಾ ಪೀಠ ಶನಿವಾರ ಹಮ್ಮಿಕೊಂಡಿದ್ದ ವೇಮನ ತತ್ವ ಚಿಂತನದ 192 ನೆಯ ಮಾಸಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾಯೋಗಿ ವೇಮನರ ತತ್ವ ಚಿಂತನೆಗಳು ಸಾರ್ಥಕ ಬದುಕು ರೂಪಿಸಿಕೊಳ್ಳುವುದಕ್ಕೆ ಪ್ರತಿ ವ್ಯಕ್ತಿಗೂ ಮಾರ್ಗದರ್ಶನ ಮಾಡುತ್ತಿದ್ದರೆ, ಹೇಮರಡ್ಡಿ ಮಲ್ಲಮ್ಮನ ತಾಳ್ಮೆ, ಸಹನೆ, ಅಚಲ ಭಕ್ತಿಯ ಜೀವನ ಸಮಾಜಕ್ಕೆ ಆದರ್ಶಪ್ರಾಯವಾಗಿದೆ ಎಂದ ಎಸ್. ಆರ್.ಪಾಟೀಲ, ಇವರಿಬ್ಬರ ತತ್ವಾದರ್ಶಗಳನ್ನು ಜೀವನದಲ್ಲಿ ಅನುಸರಿಸಿ ನಡೆದರೆ ಅರ್ಥಪೂರ್ಣ ಬದುಕು ನಮ್ಮದಾಗುತ್ತದೆ ಎಂದರು.



ಮುಖ್ಯ ಅತಿಥಿ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ಜಿ.ಬಿ.ಗೌಡಪ್ಪಗೋಳ ಮಾತನಾಡಿ, ಮನುಷ್ಯನಲ್ಲಿ ಇಂದು ಅಹಂಕಾರ, ಸ್ವಾರ್ಥ ಭಾವನೆ ಬೆಳೆದಿದ್ದು, ಮಾನವೀಯ ಮೌಲ್ಯಗಳು ಕುಸಿದು ಶಾಂತಿ, ನೆಮ್ಮದಿ ಮಾಯವಾಗುತ್ತಿದೆ. ಅದಕ್ಕಾಗಿಯೇ ನಾವಿಂದು ವೇಮನ ಸಾಹಿತ್ಯ ಓದಿ ತಿಳಿಯಬೇಕಿದೆ. ಹೇಮರಡ್ಡಿ ಮಲ್ಲಮ್ಮನ ಆದರ್ಶ ಬದುಕನ್ನು ಪರಿಪಾಲಿಸಬೇಕಿದೆ ಎಂದು ಹೇಳಿದರು.

ಸದ್ಬೋಧನೆ ನೀಡಿದ ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ, ವೇಮನರ ಸಾಹಿತ್ಯ ಅಂತ:ಕರಣ ಜಾಗೃತಿಗೊಳಿಸುತ್ತದೆ. ಹೇಮರಡ್ಡಿ ಮಲ್ಲಮ್ಮನ ಆದರ್ಶದ ಬದುಕು ತಾಳ್ಮೆ, ಸಹನೆ, ನೆಮ್ಮದಿ, ಶಾಂತಿಯ ಜೀವನದ ಪಾಠ ಕಲಿಸುತ್ತದೆ ಎಂದರು.

# ಬಾವಿ ಸ್ವಚ್ಛತಾ ಕಾರ್ಯಕ್ಕೆ ಸಂಕಲ್ಪ

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ಪಟ್ಟಣದ ಐತಿಹಾಸಿಕ ತಿಮ್ಮಣ್ಣ ಬಾವಿ ಸ್ವಚ್ಛತಾ ಕಾರ್ಯಕ್ರಮ ಮೇ 22 ಶನಿವಾರ ಬೆಳಿಗ್ಗೆಯಿಂದ ಆರಂಭಗೊಂಡಿದ್ದು, ಸ್ಥಳೀಯ ಯುವಕರ ಉತ್ಸಾಹಭರಿತ ಭಾಗವಹಿಸುವಿಕೆಯಿಂದ ಕಾರ್ಯ ಭರದಿಂದ ಸಾಗುತ್ತಿದೆ.

ತಿಮ್ಮಣ್ಣ ದೇವಸ್ತಾನದ ಯುವಕರ ಭಳಗ, ಹಿಂದೂ ಯುವ ಘರ್ಜನೆ ಕಾರ್ಯಕರ್ತರು ಹಾಗೂ ಪುರಸಭೆ ಸಿಬ್ಬಂದಿ, ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಬಾವಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಐತಿಹಾಸಿಕ ಬಾವಿಯನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಯುವಕರು ಶ್ರಮದಾನ ಮಾಡುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಬಾವಿಯ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ ಬಾವಿಯ ಒಳಭಾಗದ ಕಸ ಹಾಗೂ ಮಣ್ಣನ್ನು ತೆರವುಗೊಳಿಸುವ ಕಾರ್ಯ ಮುಂದುವರಿದಿದೆ. ಯುವಕರು ದಿನಪೂರ್ತಿ ಶ್ರಮವಹಿಸಿ ಬಾವಿಯ ಐತಿಹಾಸಿಕ ಮಹತ್ವವನ್ನು ಉಳಿಸುವ ಕೆಲಸ ಮಾಡುತ್ತಿದ್ದಾರೆ.



**ಪುರಾತನ ಬಾವಿಗಳ ಸಂರಕ್ಷಣೆ ಮುಂದಿನ ಪೀಳಿಗೆಗೆ ಜಲ ಸಂರಕ್ಷಣೆಯ ಮಹತ್ವವನ್ನು ತಿಳಿಸುವ ಕೆಲಸವಾಗಿದ್ದು, ಇಂತಹ ಕಾರ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಯುವಕರು ನಿರುತ್ಸಾಹ ತೋರುತ್ತಿರುವುದು ಬೇಸರ ತಂದಿದೆ, 2018 ರಲ್ಲಿ ನಗರೇಶ್ವರ ದೇವಸ್ಥಾನದ ಬಾವಿ ಜೀರ್ಣೋದ್ಧಾರ ಕಾರ್ಯದಲ್ಲಿ ಸಾಕಷ್ಟು ಯುವಕರು ಭಾಗವಹಿಸಿದ್ದರು, ಅದೇ ರೀತಿ ತಿಮ್ಮಣ್ಣ ಬಾವಿ ಸ್ವಚ್ಛತೆ ಕಾರ್ಯದಲ್ಲಿ ಯುವಕರು ಸಾರ್ವಜನಿಕರು ಹೆಚ್ಚಿನ ಬೆಂಬಲ ನೀಡಬೇಕು.**

**–ರಾಜ ರಮೇಶ್ ಗೌಡ**
**ಯುವ ಮುಖಂಡ ಗುರುಮಠಕಲ್**

# ಅಮ್ಮ ಮತ್ತು ಅನ್ನದ ಮುಂದೆ ಅಹಂಕಾರ ಸಲ್ಲದು: ಕೊಟ್ರಯ್ಯ

• **ಮಲ್ಲಮ್ಮ ನುಡಿ ವಾರ್ತೆ ಹೂವಿನಹಡಗಲಿ**

ಹೆಣ್ಣು ತಾಯಿಯಾಗಿ ಜನ್ಮ ನೀಡಿ, ಮಡದಿಯಾಗಿ ಗೌರವ ತಂದು, ಮಗಳಾಗಿ ಹಾಗೂ ಸೊಸೆಯಾಗಿ ಜವಾಬ್ದಾರಿಯನ್ನು ನಿಭಾಯಿಸುವವಳಾಗಿದ್ದಾಳೆ. ಜಗತ್ತಿನಲ್ಲಿ ಪ್ರಥಮ ಸ್ಥಾನ ತಾಯಿಗೆ ಸಲ್ಲುತ್ತದೆ ಎಂದು ಹಿರಿಯ ಸಾಹಿತಿ ಎಮ್. ಪಿ. ಎಮ್. ಕೊಟ್ರಯ್ಯನವರು ಹೇಳಿದರು.

ಅರಳು ಮಲ್ಲಿಗೆ ಸಾಹಿತ್ಯ ವೇದಿಕೆ'ಯು ಶುಕ್ರವಾರ ಗೂಗಲ್ ಮೀಟ್ ನಲ್ಲಿ ಹಮ್ಮಿಕೊಂಡಿದ್ದ 'ಮಾತೃಕಾವ್ಯಧಾರೆ' ಆನಗಲೈನ್ ವಿಶೇಷ ರಾಜ್ಯಮಟ್ಟದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡಿದ ಅವರು ಬಸಿರು ಹೊತ್ತು, ಉಸಿರು ಕೊಟ್ಟು, ಜಗತ್ತನ್ನು ತೋರಿಸಿದ ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ. ನಮಗೆ ಸಂಸ್ಕಾರವನ್ನು ಕೊಟ್ಟವಳೇ ತಾಯಿ. ಅಮ್ಮ ಜಗದ ಕಣ್ಣು, ಅನ್ನ ಪ್ರಾಣದ ಕಣ್ಣು. ಹಾಗಾಗಿ ಅಮ್ಮ ಮತ್ತು ಅನ್ನದ ಮುಂದೆ ನಾವು ಎಂದಿಗೂ ಅಹಂಕಾರವನ್ನು ತೋರಿಸಬಾರದು" ಎಂದು ಅವರು ಮಾರ್ಮಿಕವಾಗಿ ನುಡಿದರು.

**ಕಾವ್ಯ ಮತ್ತು ತಾಯ್ತನಕ್ಕೆ ಹತ್ತಿರದ ಸಂಬಂಧವಿದೆ:**

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಾಹಿತಿ ವೀರಣ್ಣ ಕಲಕೇರಿ ಅವರು, "'ಮಾತೃ ಕಾವ್ಯ ಧಾರೆ' ಎನ್ನುವ ಹೆಸರೇ ಒಂದು ಅದ್ಭುತ ಅನುಭೂತಿ. ಜಗತ್ತಿನಲ್ಲಿ 'ಅಮ್ಮ' ಎನ್ನುವ ಪದಕ್ಕೆ ಮೀರಿದ ಶಕ್ತಿ ಮತ್ತೊಂದಿಲ್ಲ. ತಾಯಿ ಎಂದರೆ ಕೇವಲ ಜನ್ಮ ನೀಡಿದವಳಲ್ಲ; ಅವಳು ಪ್ರೀತಿ, ಕರುಣೆ, ತ್ಯಾಗ ಮತ್ತು ಸಹನೆಯ ಸಾಕಾರ ಮೂರ್ತಿ. ನಮಗೆ ಮೊದಲ ಅಕ್ಷರ ಕಲಿಸಿದವಳು, ನಮ್ಮ ಭಾವನೆಗಳಿಗೆ ಜೀವ ನೀಡಿದವಳು ಅವಳೇ" ಎಂದರು. ಮುಂದುವರಿದು,

**"ಅಮ್ಮನೆಂದರೆ ಮುಗಿಯದ ಕವನ,**

ಬತ್ತದ ಪ್ರೀತಿಯ ಒರತೆ." ಎಂದು ಬಣ್ಣಿಸಿದ ಅವರು, "ಮಗುವನ್ನು ಹೆರಲು ತಾಯಿ ಪಡುವ ಹೆರಿಗೆಯ ನೋವು ಮತ್ತು ಸುಂದರ ಕವಿತೆಯನ್ನು ಸೃಜಿಸಲು ಕವಿ ಪಡುವ ಭಾವಲೋಕದ ತೊಳಲಾಟ ಎರಡೂ ಒಂದೇ ತರಹದ್ದು. ಹಾಗಾಗಿಯೇ ಪ್ರತಿಯೊಬ್ಬ ಕವಿಯಲ್ಲೂ ಒಬ್ಬ ತಾಯಿ, ಪ್ರತಿಯೊಬ್ಬ ತಾಯಿಯಲ್ಲೂ ಒಬ್ಬ ಕವಿ ಇರುತ್ತಾರೆ. ಹೊಸ ಕವಿಗಳ ಪ್ರತಿಭೆ ಅರಳುವಂತೆ ಮಾಡುತ್ತಿರುವ 'ಅರಳು ಮಲ್ಲಿಗೆ ಸಾಹಿತ್ಯ ವೇದಿಕೆ'ಯ ಕಾರ್ಯ ಶ್ಲಾಘನೀಯ" ಎಂದು ಪ್ರಶಂಸಿಸಿದರು.

ಕಾರ್ಯಕ್ರಮವನ್ನು ಸಾಹಿತಿ ಶಿವಕುಮಾರ ಜಿ. ಅವರು ಉದ್ಘಾಟಿಸಿದರು, ಲೇಖಕ ಎಸ್ ಎನ್ ಆರ್ ಮೂರ್ತಿ ಕಾರ್ಯಕ್ರಮ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಪ್ರಮುಖ ಸಾಹಿತಿಗಳಾದ ತೊ.ಮ. ಶಂಕ್ರಯ್ಯ ಹಾಗೂ ಎಸ್. ವಿ. ಶಾಂತಕುಮಾರ್ ಉಪಸ್ಥಿತರಿದ್ದರು. ಕವಿಗೋಷ್ಠಿಯ ನಿರ್ಣಾಯಕರಾಗಿ ಶರಣಬಸಯ್ಯ ಹಿರೇಮಠ ಕೆಂಭಾವಿ ಅವರು ಭಾಗವಹಿಸಿದ್ದರು.

ಈ ರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ನಾಡಿನಾದ್ಯಂತ ಅನೇಕ ಕವಿ ಮನಸ್ಸುಗಳು ಭಾಗವಹಿಸಿ ತಾಯಿಯ ಕರುಣೆ, ತ್ಯಾಗ ಮತ್ತು ಸಮರ್ಪಣೆಯ ಕುರಿತು ಭಾವಪೂರ್ಣ ಕವನಗಳನ್ನು ವಾಚಿಸಿದರು. ಗೋಷ್ಠಿಯಲ್ಲಿ ಯಶೋಧಮ್ಮ ಅಜ್ಜಂಪುರ, ಗೌರಮ್ಮ ನಾಗತಿಬಸಾಪುರ, ಟಿ.ಬಿ. ಕರದಾನಿ, ಡಾ. ಶಶಿಕಲಾ ಎ. ಆರ್., ಧಾರವಾಡದ ಪಾರ್ವತಿ ಹಮ್ಮಿಗಿ, ಮಂಜುಳ ಮಾಲೂರು, ವೇಣುಭಾಯಿ ಎಸ್. ರಜಪೂತ, ಸಿಂಧನೂರಿನ ಪಂಪಯ್ಯಸ್ವಾಮಿ, ಮೈಸೂರಿನ ಡಾ. ರವೀಂದ್ರ, ಶ್ರೀವಿದ್ಯಾ ಎಂ. ರಾಮಾಪುರ, ದಾನಮ್ಮ ವಿ. ಅಂಗಡಿ, ಧಾರವಾಡದ ರೂಪಾ ಬಂಡಿ, ವಿಜಯಪುರದ ಈರಮ್ಮ ಬೋನೂರ ಹಾಗೂ ನಾಗಮ್ಮ ಬ. ಉಮರ್ಜಿ ಸೇರಿದಂತೆ ಸುಮಾರು 25 ಕ್ಕೂ ಹೆಚ್ಚು ಕವಿಗಳು ಭಾಗವಹಿಸಿ ತಮ್ಮ ಕಾವ್ಯಧಾರೆಯ ಮೂಲಕ ತಾಯಿಗೆ ನಮನ ಸಲ್ಲಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಪಾರ್ವತಿ ಧಾರವಾಡ ಅವರು ಪ್ರಾರ್ಥಿಸಿದರು. ವಾರುಣಿ ದೇಶಪಾಂಡೆ ಅವರು ಸಮಗ್ರ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು. ದಾನಮ್ಮ ಅಂಗಡಿ ವಂದನಾರ್ಪಣೆ ಮಾಡಿದರು.

# ಪ್ರವಾಸೋದ್ಯಮ ಅಭಿವೃದ್ಧಿ ಪ್ರಗತಿ ಪರಿಶೀಲನಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು, ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮ ಉತ್ತೇಜನಕ್ಕೆ ಕೈಗೊಂಡ ವಿವಿಧ ಯೋಜನೆಗಳ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ಸಭಾಭವನದಲ್ಲಿ ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸ್ಥಳೀಯ ಕಲೆ, ಸಂಸ್ಕೃತಿ ಹಾಗೂ ಪಾರಂಪರಿಕ ವೈಶಿಷ್ಟಗಳನ್ನು ಉತ್ತೇಜಿಸುವ ಮೂಲಕ ಪ್ರವಾಸೋದ್ಯಮ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಈ ಹಿನ್ನಲೆಯಲ್ಲಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ದೊರೆಯುವ ನಿಟ್ಟಿನಲ್ಲಿ ಕೈಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಧಿಕಾರಿಗಳು ಮುಂದಾಗಬೇಕು ಎಂದರು.

ಬಾದಾಮಿ ಅಗಸ್ತ್ಯತೀರ್ಥ ಹೊಂಡದ ಮೇಲಿರುವ ಮನೆಗಳ ಹಸ್ತಾಂತರ ಕಾರ್ಯ ಬಹಳ ದಿನಗಳ ಹಿಂದೆಯೇ ಕೈಗೆತ್ತಿಕೊಳ್ಳಲಾಗಿದೆ. ಆದರೆ ಸ್ಥಳಾಂತರ ಕಾರ್ಯ ಮಾತ್ರ ಆಗುತ್ತಿಲ್ಲ. ಇದಕ್ಕಾಗಿ ಬಾದಾಮಿ ಶಾಸಕ ಬಿ.ಬಿ.ಚಿಮ್ಮನಕಟ್ಟಿಯವರು ಮುತುವರ್ಜಿ ವಹಿಸುತ್ತಿದ್ದಾರೆ. ಆದರೆ ಜಮೀನು ಹಸ್ತಾಂತರಕ್ಕೆ ಪ್ರಸ್ತಾವಣೆ ಕಳುಹಿಸುವಲ್ಲಿ ಅಧಿಕಾರಿಗಳು ವಿಳಂಬ ದೋರಣೆಯನ್ನು ಅನುಸರಿಸುತ್ತಿರುವ ಬಗ್ಗೆ ಸಚಿವರಲ್ಲಿ ಅಸಮಾಧಾನ ತೋರಿಕೊಂಡರು. ಅಭಿವೃದ್ಧಿ ದೃಷ್ಟಿಯಿಂದ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದರು.



ಪಟ್ಟದಕಲ್ಲಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಟೂರಿಸಂ ಪ್ಲಾಜಾ ಕೂಡಾ ಪೂರ್ಣಗೊಂಡಿಲ್ಲ. ಕಾಮಗಾರಿ ಪ್ರಾರಂಭವಾಗಿ 4 ವರ್ಷಗಳು ಗತಿಸಿವೆ. ಈ ರೀತಿಯಾದರೆ ಪ್ರವಾಸೋದ್ಯಮ ಬಲಪಡಿಸುವುದು ಹೇಗೆ ಎಂದು ಶಾಸಕ ಚಿಮ್ಮನಕಟ್ಟಿ ಪ್ರಶ್ನಿಸಿದಾಗ ಅನಷ್ಠಾನ ಸಂಸ್ಥೆಯಾದ ಕರ್ನಾಟಕ ಗೃಹ ಮಂಡಳಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸಚಿವರು ತಿಳಿಸಿದರು. ಅದೇ ರೀತಿ ಬಾದಾಮಿ ತ್ರಿಸ್ಟಾರ್ ಹೋಟಲ್ ನಿರ್ಮಾಣ ಕೂಡಾ ಇದೇ ರೀತಿಯಲ್ಲಿ ಸಾಗುತ್ತಿದೆ ಎಂದು ಸಭೆಗೆ ಶಾಸಕ ಚಿಮ್ಮನಕಟ್ಟಿ ತಿಳಿಸಿದರು.

ಐಹೊಳೆ ಗ್ರಾಮದಲ್ಲಿರುವ ರಕ್ಷಿತ, ಅರಕ್ಷಿತ ಸ್ಮಾರಕಗಳಲ್ಲಿ ವಾಸವಾಗಿರುವ ಕುಟುಂಬಗಳನ್ನು ಸ್ಥಳಾಂತರಿಸುವ ಮೊದಲ ಹಂತದಲ್ಲಿ 134 ಮನೆಗಳ ಸ್ಥಳಾಂತರಕ್ಕೆ ಕ್ರಮವಹಿಸಬೇಕಿದೆ. ಒಂದೇ ಹಂತದಲ್ಲಿ ಸ್ಥಳಾಂತರ ಮಾಡಲು ಸಾದ್ಯವಿಲ್ಲವೆಂದು ಹಂತ ಹಂತವಾಗಿ ನಡೆಸಬೇಕಿದೆ ಎಂದು ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಬಿವೃದ್ದಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಸಭೆಗೆ ತಿಳಿಸಿದರು. ಇದಕ್ಕೆ ಧ್ವನಿ ಗೂಡಿಸಿದ ಬಾಗಲಕೋಟೆ ಶಾಸಕ ಉಮೇಶ ಮೇಟಿ ಅವರು ಐಹೊಳೆ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ ವಿಶೇಷ ಕಾರ್ಯಕ್ರಮ ರೂಪಿಸಬೇಕಿದೆ. ಅಧಿಕಾರಿಗಳು ಮುತುವರ್ಜಿ ವಹಿಸಿ ಸ್ಥಳಾಂತರಕ್ಕೆ ಮುಂದಾಗಬೇಕು ಎಂದರು.

ಇದಕ್ಕಾಗಿ 13.11 ಎಕರೆ ಜಮೀನು ಖರೀದಿ ಮಾಡಲಾಗಿದ್ದು, ಪುನರ್ವಸತಿ ಕಲ್ಪಿಸಲು ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರದಿಂದ ಯೋಜನಾ ವರದಿ ಸಲ್ಲಿಸಬೇಕಿದೆ ಎಂದು ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಹೇಳಿದರು. ಸಾಗರ ಮಾಲಾ ಯೋಜನೆಗಳಡಿ ಹೆರಕಲ್ ಗ್ರಾಮದ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಳ್ಳುತ್ತಿರುವ ರಿವರ್ ಕ್ರಸ್ ಟೂರಿಜಮ್, ಬೋಟಿಂಗ್, ಜಂಗಲ್ ರೆಸಾರ್ಟ ಚಟುವಟಿಕೆ, ಯೋಜನೆಗೆ ಸಂಬಂಧಿಸಿದ ಕಾರ್ಯಗಳನ್ನು ಪ್ರಾರಂಭಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸಚಿವರು ತಿಳಿಸಿದರು.

ಕುಂದರಗಿ ಸುರಗಿರಿ ಬೆಟ್ಟ, ಚಿಕ್ಕ ಸಂಗಮದ ಸಂಗಮನಾಥ ದೇವಸ್ಥಾನ ಮೂಲಭೂತ ಸೌಕರ್ಯಗಳ ಕಾಮಗಾರಿ ಪೂರ್ಣಗೊಳಿಸಲು ತಿಳಿಸಿದರು. ಬಾಗಲಕೋಟೆ ತಾಲೂಕಿನ ಗುಡ್ಡದ ಮಲ್ಲಿಕಾರ್ಜುನ ದೇವಸ್ಥಾನ ಅಭಿವೃದ್ಧಿ, ಮುಧೋಳ ತಾಲ್ಲೂಕನ ಯಡಹಳ್ಳಿಯ ಅಡವೇಶ್ವರ ಮಠ, ಉತ್ತೂರಿನ ಲಕ್ಷ್ಮೀ ದೇವಸ್ಥಾನ, ಜಮಖಂಡಿ ತಾಲೂಕಿನ ಹಂಚಿನಾಳ ಗ್ರಾಮದ ಸುವರ್ಣಖಂಡಿ, ದೊಡ್ಡಬಸವೇಶ್ವರ ದೇವಸ್ಥಾನ, ತೇರದಾಳ ನಗರದ ಅಲ್ಲಮಪ್ರಭು ಶರಣರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ ಸೇರಿದಂತೆ ಜಮಖಂಡಿಯ ಕಟ್ಟೆಕೆರೆ ಉದ್ಯಾನ ಅಭಿವೃದ್ಧಿ ಕುರಿತು ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಬೀಳಗಿ ಶಾಸಕ ಜೆ.ಟಿ.ಪಾಟೀಲ, ಜಮಖಂಡಿ ಶಾಸಕ ಜಗದೀಶ ದುಡಗುಂಟಿ, ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ, ಬಾಗಲಕೋಟೆ ಶಾಸಕ ಉಮೇಶ ಮೇಟಿ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಕೆಬಿಜೆಎನ್‌ಎಲ್ ಮುಖ್ಯ ಅಭಿಯಂತರ ಬಸವರಾಜ, ಜಿ.ಪಂ ಉಪಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಬೃಹತ್ ಉದ್ಯೋಗ ಮೇಳ



**ಹುಣಸೂರು:** ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್.ಪಿ.ಮಂಜುನಾಥರ ಹುಟ್ಟು ಹಬ್ಬದ ಅಂಗವಾಗಿ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳದಲ್ಲಿ 845ಮಂದಿ ಉದ್ಯೋಗದ ಆದೇಶ ಪತ್ರ ಪಡೆದು-ಕೊಂಡರು. ನಗರದ ಅಂಬೇಡ್ಕರ್ ಭವನದ ಆವರಣದಲ್ಲಿ ಸ್ನೇಹಜೀವಿ ಗ್ರಾಮೀಣಾಭಿವೃದ್ದಿ ಸಂಸ್ಥೆಯು ಬೆಂಗಳೂರಿನ ವಿಷನ್ ಅಸ್ತ್ರ ಇವಿ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಹುಣಸೂರು ತಾಲೂಕಿನ 586ಮಂದಿ ಅಕ್ಕಪಕ್ಕದ ತಾಲೂಕು ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ 1223ಮಂದಿ ಪೈಕಿ ಹುಣಸೂರು ತಾಲೂಕಿನ 507ಮಂದಿ, ಪಿರಿಯಾಪಟ್ಟಣದ 156, ಕೆ.ಆರ್.ನಗರದ 60, ಎಚ್.ಡಿ.ಕೋಟೆ ತಾಲೂಕಿನ 35ಮಂದಿ ಸೇರಿದಂತೆ ಒಟ್ಟು 845ಮಂದಿ ಕಡಕೊಳದ ಟಿವಿಎಸ್ ಕಂಪನಿ ಉದ್ಯೋಗಿಗಳಾಗಿ ಆಯ್ಕೆಯಾದರು. ಇವರಿಗೆ ಸ್ಥಳದಲ್ಲೇ ಆಫರ್ ಪತ್ರಗಳನ್ನು ವಿತರಿಸಲಾಯಿತು.

ಈ ವೇಳೆ ಉದ್ಯೋಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದೇಶ ಪತ್ರ ವಿತರಿಸಿ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಮಾತನಾಡಿ ಇಂದು ದೇಶದೆಲ್ಲೆಡೆ ಲಕ್ಷಾಂತರ ಮಂದಿ ನಿರುದ್ಯೋಗಿಗಳು ಇದ್ದಾರೆ. ಎಲ್ಲರಿಗೂ ಸರಕಾರಿ ಉದ್ಯೋಗ ಪಡೆಯುವುದು ಕಷ್ಟ, ಹೀಗಾಗಿ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆಯುವುದು ಅನಿವಾರ್ಯ, ಈ ನಿಟ್ಟಿನಲ್ಲಿ ಉತ್ತಮ ಸಂಬಳ, ಸೌಲಭ್ಯ, ಸೇವಾಭದ್ರತೆ ನೀಡುವ ಟಿವಿಎಸ್ ಕಂಪನಿಯೊಂದಿಗೆ ವಿಷನ್ ಅಸ್ತ್ರ ಇವಿ ಅಕಾಡೆಮಿ ಮೂಲಕ ಈ ಬೃಹತ್ ಮೇಳ ಆಯೋಜಿಸಿದ್ದು, ಉದ್ಯೋಗ ಪಡೆದಿರುವವರು ಸಂಬಳಕ್ಕೆ ಆದ್ಯತೆ ನೀಡದೆ ಭವಿಷ್ಯ ರೂಪಿಸಿಕೊಳ್ಳಲು ಅವಕಾಶ ಸಿಕ್ಕಿದೆ ಎಂದು ತಿಳಿದು ನಂಬಿಕೆ, ವಿಶ್ವಾಸದಿಂದ ಕೆಲಸ ಮಾಡಿ ಉನ್ನತಿ ಹೊಂದಿರಿ. ಮುಂದೆಯೂ ಇಂತಹ ಮೇಳವನ್ನು ಆಯೋಜಿಸಲಾಗುವುದು ಎಂದರು. ಟಿವಿಎಸ್ ಕಂಪನಿಯ ಅಧಿಕಾರಿಗಳು ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಮಾಹಿತಿ ನೀಡಿದರು.

ವಿಷನ್ ಅಸ್ತ್ರ ಇವಿ ಅಕಾಡೆಮಿಯ ಚೇರ್‌ಮೆನ್ ಯಧುಜತವದನ್, ಸಿಇಒ ನಿಖಿಲ್‌ಜೈನ್‌ರವರು ಉದ್ಯೋಗದ ಕುರಿತು ಮಾಹಿತಿ ನೀಡಿದರು. ರಾಜ್ಯ ಗ್ಯಾರಂಟಿ ಅನುಷ್ಟಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಅಮರ್‌ನಾಥ್, ತಾಲೂಕು ಅಧ್ಯಕ್ಷ ರಾಘು, ಕೆ.ಪಿ.ಸಿ.ಸಿ.ವಕ್ತಾರ ಎಂ. ಲಕ್ಷ್ಮಣ್, ಹುಡಾ ಅಧ್ಯಕ್ಷ ಎಚ್.ಪಿ.ಅಮರ್‌ನಾಥ್ ಸದಸ್ಯರಾದ ಅಫ್ರೋಜ್ ಅಹ್ಮದ್ ಆಶ್ರಯ ಸಮಿತಿ ಸದಸ್ಯರಾದ ಮೊಹಮ್ಮದ್ ಸಲಾಣಟಿಜಜಜಿಟಿಜಜವದ್ದೀನ್ ಅಮೀನ್ ನಗರ ಯೂಣಟಿಜಜಜಿಟಿಜಜತ್ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಫೈಸಲ್ ಗ್ಯಾರಂಟ ಯೋಜನೆಯ ಸದಸ್ಯರಾದ ಮುಜೀಬ್ ಆಮದ ಬಳಗದ ಅಧ್ಯಕ್ಷ ಆನಂದ್, ಪ್ರಕಾಶ್, ಗಣೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

## ಕುಟುಂಬದ 12 ಜನರು ಸಮುದ್ರ ಪಾಲು

**ಉತ್ತರ ಕನ್ನಡ:** ಭಟ್ಕಳದಲ್ಲಿ ಚಿಪ್ಪಿಕಲ್ಲು ಆರಿಸಲು ಹೋಗಿದ್ದ ಒಂದೇ ಕುಟುಂಬದ 12 ಜನರು ಸಮುದ್ರದ ಅಲೆಗೆ ಕೊಚ್ಚಿ ಹೋಗಿದ್ದಾರೆ. ಎಂಟು ಜನರ ಮೃತದೇಹ ಸಿಕ್ಕಿದೆ. ಇಬ್ಬರು ನಾಪತ್ತೆಯಾಗಿದ್ದು, ಇಬ್ಬರು ಬಚಾವಾಗಿದ್ದಾರೆ.

ಭಾನುವಾರ ಬೆಳಿಗ್ಗೆ ಭಟ್ಕಳದ ತಟ್ಟೆ ಹಕ್ಕಲು ಬಳಿ ಘಟನೆ ನಡೆದಿದೆ. ಎಂದಿನಂತೆ ನದಿ ಸಮುದ್ರ ತೀರಕ್ಕೆ ಕಪ್ಪೆ ಚಿಪ್ಪು ತರಲು ಕುಟುಂಬ ಮಕ್ಕಳು ಸೇರಿದಂತೆ 12 ಮಂದಿ ತೆರಳಿದ್ದಾರೆ. ದೊಡ್ಡ ಅಲೆಗೆ ಸಿಲುಕಿ 12 ಮಂದಿ ಕೊಚ್ಚಿ ಹೋಗಿದ್ದಾರೆ. ಇಬ್ಬರು ಪಾರಾಗಿದ್ದು, 8 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಇಬ್ಬರ ಹುಡುಕಾಟ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

## ಕ್ರಾಂತಿ ನಡೆದಿರುವುದು ಕರ್ನಾಟಕದಲ್ಲಿ ಮಾತ್ರ: ಖಂಡ್ರೆ



**ಬೆಂಗಳೂರು:** ಜಗತ್ತಿನಲ್ಲಿ ಹೆಣ್ಣಿಗಾಗಿ, ಹೊನ್ನಿಗಾಗಿ ಹಲವು ಕ್ರಾಂತಿ ನಡೆದಿದೆ. ಆದರೆ ಸರ್ವರ ಸಮಾನತೆಗಾಗಿ, ಸಮ ಸಮಾಜದ ನಿರ್ಮಾಣಕ್ಕಾಗಿ ಮೊದಲಿಗೆ ಕ್ರಾಂತಿ ನಡೆದಿರುವುದು ಕರ್ನಾಟಕದಲ್ಲಿ ಮಾತ್ರ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾದ ಬೊಮ್ಮನಹಳ್ಳಿ ವಿಧಾನಸಭಾ ಘಟಕದ ವತಿಯಿಂದ ಆಯೋಜಿಸಲಾಗಿದ್ದ ಜಗದ್ಗುರು ರೇಣುಕಾಚಾರ್ಯರ ಯುಗಮಾನೋತ್ಸವ ಮತ್ತು ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೇಣಿರಹಿತ, ಲಿಂಗಭೇದರಹಿತ, ಸಮ ಸಮಾಜದ ನಿರ್ಮಾಣಕ್ಕಾಗಿ ಬಸವಾದಿ ಪ್ರಮಥರು ಕಲ್ಯಾಣ ಕ್ರಾಂತಿಯನ್ನೇ ಮಾಡಿದರು ಎಂದರು. ಶರಣರು ಸಕಲ ಜೀವಾತ್ಮರಿಕೆ ಲೇಸನ್ನೇ ಬಯಸಿದರು. ಜಾತಿಯತೆ, ಮೇಲು ಕೀಳು ಎಂಬ ಭಾವನೆ, ಅಸ್ಪೃಶ್ಯತೆ, ಕಂದಾಚಾರ, ಮೌಢ್ಯ ತುಂಬಿದ್ದ ಸಮಾಜದಲ್ಲಿ ವೈಚಾರಿಕ ಮನೋಭಾವ ಮೂಡಿಸಲು, ಸೋದರತ್ವ, ಸಹಬಾಳ್ವೆಯ ಭವ್ಯ, ದಿವ್ಯ ಸಮಾಜ ಕಟ್ಟಲು ಯತ್ನಿಸಿದರು ಎಂದರು. ಮಾನವಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ರೇಣುಕಾದಿ ಆಚಾರ್ಯರು ಪ್ರತಿಪಾದಿಸಿದರೆ, ದಯವೇ ಧರ್ಮದ ಮೂಲವಯ್ಯ ಎಂದು ಬಸವಣ್ಣನವರು ಹೇಳಿದ್ದಾರೆ. ನಮ್ಮೆಲ್ಲರಲ್ಲೂ ನಾವೆಲ್ಲಾ ಒಂದೇ ಎಂಬ ಭಾವನೆ ಮೂಡಿದಾಗ ಮಾತ್ರ ಸಮಾಜೋದ್ದಾರ ಸಾಧ್ಯ ಎಂದರು. ಯುವಜನರು ಯಾವುದೇ ಸಮಾಜದ ಬೆನ್ನೆಲುಬು. ಇಂದು ಯುವಜನರು ದಾರಿ ತಪ್ಪುತ್ತಿದ್ದು, ದುಶ್ಚಟಗಳ, ದುರ್ವ್ಯಸನಗಳ ದಾಸರಾಗುತ್ತಿದ್ದು, ದುರ್ಗುಣಗಳಿಗೆ ಬಲಿಯಾಗುತ್ತಿದ್ದಾರೆ. ಮಾತೆಯರು, ತಮ್ಮ ಮಕ್ಕಳನ್ನು ಸರಿದಾರಿಗೆ ತರಲು ಶ್ರಮಿಸಬೇಕು. ಧರ್ಮದ ಉಳಿವಿನಲ್ಲಿ ಮಾತೆಯರ ಪಾತ್ರ ಮಹತ್ವದ್ದೆಂದರು. ಇಂತಹ ಕಾರ್ಯಕ್ರಮಗಳು ಯುವಜನರಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಚಿಂತನೆ ಬೆಳೆಸುತ್ತವೆ. ಯುವಜನರನ್ನು ಮುಖ್ಯ ವಾಹಿನಿಗೆ ತರಲು ಸಹಕಾರಿ ಆಗುತ್ತದೆ ಎಂದು ಈಶ್ವರ ಖಂಡ್ರೆ ಹೇಳಿದರು.

ಕಾರ್ಯಕ್ರಮದಲ್ಲಿ ರಂಬಾಪುರಿಯ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು, ಸಿದ್ದರಬೆಟ್ಟದ ಶ್ರೀ ಬೀರಭದ್ರ ಶಿವಾಚಾರ್ಯ ಸ್ವಾಮೀಜಿ, ಸಭಾದ ಪಾಲಿಕಾ ಘಟಕದ ಅಧ್ಯಕ್ಷ ಬಿಡದಿ ನವೀನ್, ಮಾಜಿ ಮೇಯರ್ ಗಂಗಾಂಬಿಕಾ ಮಲ್ಲಿಕಾರ್ಜುನ್ ಮತ್ತಿತರರು ಪಾಲ್ಗೊಂಡಿದ್ದರು.

# ಜಿಲ್ಲಾ ಪಂಚಾಯತ್ ಸಿಇಓಗೆ ಹೃದಯಸ್ಪರ್ಶಿ ಬೀಳ್ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಯ ಸಹಯೋಗದೊಂದಿಗೆ ತಂಡದ ರೂಪದಲ್ಲಿ ಕಾರ್ಯನಿರ್ವಹಿಸಿದ ತೃಪ್ತಿ ತಮಗಿದೆ ಎಂದು ನಿರ್ಗಮಿತ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಹೇಳಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಚಿಕ್ಕಮಂಗಳೂರು ಜಿಲ್ಲಾಧಿಕಾರಿಯಾಗಿ ಮುಂಬಡ್ತಿ ಪಡೆದು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ ಬೀಳ್ಕೊಡುಗೆ ಸಮಾರಂಭದಲ್ಲಿ ಕಚೇರಿ ಸಿಬ್ಬಂದಿಯಿಂದ ಆತ್ಮೀಯ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಮಗೆ ಮೂರು ವರ್ಷಗಳ ಕಾಲ ಸುಧೀರ್ಘವಾಗಿ ಗ್ರಾಮೀಣ ಜನರ ಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗಿತ್ತು ಎಂದರು.

ಕಲಬುರಗಿ ದೊಡ್ಡ ಜಿಲ್ಲೆ. ಇಲ್ಲಿ ಕಾರ್ಯನಿರ್ವಹಿಸಿದರೆ ಬೇರೆಡೆ ಸರಳವಾಗಿ ಕಾರ್ಯನಿರ್ವಹಿಸಬಹುದೆಂಬ ಮಾತಿದೆ. ಅಂತಹ ಒಂದು ಅತ್ಮವಿಶ್ವಾಸ ಇಲ್ಲಿ ನಮಗೆ ಸಿಕ್ಕಿದ್ದು, ಮುಂದಿನ ಸವೆಗೆ ನೆರವಾಗಲಿದೆ. ಜಿಲ್ಲೆಯಲ್ಲಿ ಎಲ್ಲಾ ಅಧಿಕಾರಿಗಳು ತಂಡದ ರೂಪದಲ್ಲಿ ಕಾರ್ಯನಿರ್ವಹಿಸುತ್ತಾ ಪ್ರತಿಯೊಂದು ಕಾರ್ಯಕ್ರಮ, ಯೋಜನೆ ತುಂಬಾ ಯಶಸ್ವಿಯಾಗಿ ನಿರ್ವಹಿಸುತ್ತಿದ್ದು ಇದು ತಮಗೆ ಸಂತಸ ತಂದಿದೆ. ಇದೇ ರೀತಿಯ ಸಾಂಘಿಕ ಯತ್ನ ಮುಂದೆಯೂ ನಡೆಯಬೇಕು. ನೂತನ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿ.ಇ.ಓ ಅವರಿಗೂ ಸಹ ಅಧಿಕಾರಿಗಳು ಇದೇ ರೀತಿಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದ ಭಂವರ್ ಸಿಂಗ್ ಮೀನಾ ಅವರು, ಪಂಚಾಯತಿಯ ಎಲ್ಲ ಅಧಿಕಾರಿಗಳು ಜನರ ಸಮಸ್ಯೆ



ನನಗೆ ಈ ಮೂರು ವರ್ಷ ಹೇಗೆ ಸಹಕಾರ ಕೊಟ್ಟಿದ್ದಿರೋ ಹೊಸ ಸಿಇಓ ರವರಿಗೂ ಅದೇ ರೀತಿಯ ಸಹಕಾರ ಕೊಡಿ ಅಂತ ಪಂಚಾಯತಿಯ ಎಲ್ಲ ಅಧಿಕಾರಿಗಳಿಗೂ ಮನವಿ ಮಾಡ್ತೇನೆ. ಜನರ ಸಮಸ್ಯೆ ಆಲಿಸಿದ್ರೆ ಅರ್ಧ ಕೆಲಸ ಆದಂತೆ. ಜಿಲ್ಲೆಯಲ್ಲಿ ಒಂದು ಟೀಂ ತರ ನಾವು ಕೆಲಸ ಮಾಡುವ ಅವಶ್ಯಕತೆ ಇದೆ.

–ಭಂವರ್ ಸಿಂಗ್ ಮೀನಾ, ಡಿ.ಸಿ ಚಿಕ್ಕಮಗಳೂರು
( ನಿರ್ಗಮಿತ ಸಿಇಓ, ಜಿಲ್ಲಾ ಪಂಚಾಯತ್ ಕಲಬುರಗಿ)

ಆಲಿಸಿದ್ರೆ ಅರ್ಧ ಕೆಲಸ ಆದಂತೆ ಎಂಬುದನ್ನು ಮರೆಯದಿರಿ ಎಂದರು.

ಜಿಲ್ಲೆಯಲ್ಲಿ ಆರ್.ಡಿ.ಪಿ.ಅರ್ ಇಲಾಖೆ ಮೂಲಕ ಸಾಕಷ್ಟು ಜನಪರ ಯೋಜನೆಗಳನ್ನು ಪ್ರಮಾಣಿಕವಾಗಿ ಜಾರಿಗೆ ತರುವ ಪ್ರಯತ್ನ ಮಾಡಿರುವೆ. ಕೆಲವೊಮ್ಮೆ ಕೆಲಸದ ವಿಷಯದಲ್ಲಿ ಕಠಿಣ ನಿರ್ಧಾರ ಸಹ ತೆಗೆದುಕೊಳ್ಳಬೇಕಾಗುತ್ತದೆ. ಉತ್ತಮ ಕಾರ್ಯನಿರ್ವಹಿಸದ ಕೆಲ ಪಿ.ಡಿ.ಓ ಗಳ ವಾರ್ಷಿಕ ವೇತನ ಬಡ್ತಿ ತಡೆ ಹಿಡಿದಿದ್ದೆ. ತದನಂತರ ಅವರುಗಳು ತಮ್ಮ ಕೆಲಸದಲ್ಲಿ ಸುಧಾರಣೆ ಕಂಡುಕೊಂಡಿದ್ದರಿಂದ ವರ್ಗಾವಣೆ ಮುಂಚೆ ಅವರ ವೇತನ ಬಡ್ತಿ ಕಡತಕ್ಕೆ ಸಹಿ ಹಾಕಿರುವೆ ಎಂದು ಪಿ.ಡಿ.ಓ ಗಳಿಗೆ ಸಂತಸದ ಸುದ್ದಿ ನೀಡಿದರು.

ಇದೇ ಸಂದರ್ಭದಲ್ಲಿ ನೂತನ ಜಿಲ್ಲಾ ಪಂಚಾಯತ್ ಸಿ.ಇ.ಓ ಆಗಿ ಅಧಿಕಾರ ವಹಿಸಿಕೊಂಡಿರುವ ರಾಹುಲ ಸಂಕನೂರ್ ಅವರಿಗೂ ಜಿಲ್ಲಾ ಪಂಚಾಯತ್ ಕಚೇರಿ ಸಿಬ್ಬಂದಿಗಳು ಹೂಗುಚ್ಛ ನೀಡಿ ಸ್ವಾಗತ ಕೋರಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ ಸೇರಿದಂತೆ ಜಿಲ್ಲಾ ಪಂಚಾಯತಿಯ ಅಧಿಕಾರಿ-ಸಿಬ್ಬಂದಿಗಳು, ಇತರೆ ಇಲಾಖೆಯ ಅಧಿಕಾರಿಗಳು, ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದರು.

ಈ ಮಣ್ಣಿನ ವಿಶೇಷ ಅಂದ್ರೆ ಈ ಜಿಲ್ಲೆಗೆ ಬಂದ ಅಧಿಕಾರಿಗಳಿಗೆ ಒಳ್ಳೆಯ ಕೆಲಸ ಮಾಡಲಿಕ್ಕೆ ಅವಕಾಶಗಳನ್ನ ಕೊಡುತ್ತೆ. ಯಾರು ಅಂತಹ ಅವಕಾಶಗಳನ್ನ ಬಳಸಿಕೊಂಡು ಕೆಲಸ ಮಾಡ್ತಾರೋ ಅವ್ರು ಜನರ ನೆನಪಲ್ಲಿ ಉಳಿಯುತ್ತಾರೆ. ಅಂತಹ ಅಧಿಕಾರಿಗಳ ಪೈಕಿ ಭಂವರ್ ಸಿಂಗ್ ಮೀನಾರವರು ಅಂದ್ರೆ ತಪ್ಪಾಗಲಿಕ್ಕಿಲ್ಲ.

–ಡಾ.ಶರಣಪ್ಪ, ಆಯುಕ್ತರು
ಕಲಬುರಗಿ ನಗರ ಪೋಲೀಸ್

ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿನ ಎಲ್ಲಾ ಇಲಾಖೆಯ ಕೆಲಸಗಳನ್ನು ಕಠಿಣ ಪರಿಶ್ರಮ ಹಾಗೂ ಶ್ರದ್ಧೆಯಿಂದ ಮಾಡಿದ್ದಾರೆ. ಹೀಗಾಗಿ ಭಂವರ್ ಸಿಂಗ್ ಮೀನಾರವರು ಜನಮೆಚ್ಚುಗೆಯನ್ನ ಪಡೆದಿದ್ದಾರೆ. ನನಗೆ ವೈಯಕ್ತಿಕವಾಗಿ ಸಹ ತುಂಬಾ ಆತ್ಮೀಯರು. ಇದೀಗ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಹೋಗ್ತಿದ್ದಾರೆ. ಹೀಗೆ ಅವರ ಜನಪರ ಸೇವೆ ಮುಂದುವರೆಯಲಿ ಎಂದು ಹಾರೈಸುವೆ.

–ಇಕ್ರಮ್ ಶರೀಫ್, ಜಿಲ್ಲಾಧಿಕಾರಿಗಳು ಕಲಬುರಗಿ

# ಡಾ.ವಿಕ್ರಮ್ ಮೇಲ್ಮನೆಗೆ ನೇಮಕ ಆಗಲಿ: ನರಿಬೋಳ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ

ರಾಜ್ಯ ವಿಧಾನ ಪರಿಷತ್ತಿನಲ್ಲಿ ತೆರವುಗೊಳ್ಳಲಿರುವ ಒಂದು ಸ್ಥಾನಕ್ಕೆ ಯುನೈಟೆಡ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಖ್ಯಾತ ವೈದ್ಯ ಡಾ.ವಿಕ್ರಮ ಸಿದ್ಧಾರೆಡ್ಡಿ ಅವರನ್ನು ನಾಮ ನಿರ್ದೇಶನ ಮಾಡಬೇಕೆಂದು ಸಾಮಾಜಿಕ ಹೋರಾಟಗಾರ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಬೆಯ ಜಿಲ್ಲಾ ಸದಶ್ಯತ್ವ ಅಬಿಯಾನದ ಪ್ರಮುಖ ಎಂ ಎಸ್ ಪಾಟೀಲ ನರಿಬೋಳ ಆಗ್ರಹಿಸಿದ್ದಾರೆ.





ಡಾ. ವಿಕ್ರಮ ಸಿದ್ದಾರಡ್ಡಿಯವರ ಕುಟುಂಬ ಕಾಂಗ್ರೆಸ್ ಪಕ್ಷ ಮತ್ತು ಮಹಾಸಭೆಗೆ, ಬಡಜನರಿಗೆ ಸಲ್ಲಿಸಿರುವ ಸೇವೆ ಅಪಾರವಾದುದು. ಡಾ ಅವರ ತಾಯಿ ಗುರಮ್ಮ ಸಿದ್ದಾರೇಡ್ಡಿಯವರು ಕೂಡಾ ಕಾಂಗ್ರೇಸ್ ಪಕ್ಷಕ್ಕೆ ಸಲ್ಲಿಸಿದ ಸೇವೆ ಮಾಹಾಸಬೆಯ ರಾಷ್ಟ್ರೀಯ ಉಪಾದ್ಯಕ್ಷರಾಗಿ ಸಲ್ಲಿಸಿದ ಸೇವೆ ಪರಿಗಣಿಸಿ ಗುರುತಿಸಿ ಎಸ್ ಎಂ ಕೃಷ್ಣ ಸರ್ಕಾರದಲ್ಲಿ ಹೋಸದಾಗಿ ಸಂಪುಟ ದರ್ಜೆಯ ಒಂದು ಹುದ್ದೆಯನ್ನೆ ಮಹಿಳಾ ಅಬಿವೃದ್ದಿ ಕ್ರೀಯಾ ಯೋಜನೆ ಅದ್ಯಕ್ಷರನ್ನಾಗಿ ಸೃಟಿಸಿ ನೇಮಿಸಿತ್ತು ಗುರಮ್ಮ ಸಿದ್ದಾರೆಡ್ಡಿಯವಕು ಕೂಡಾ ಪಕ್ಷ ಕೋಟ್ಟಿರುವ ಜವಾಬ್ದಾರಿಯನ್ನು ಜನರ ಸೇವೆಗೆ ಅರ್ಪಿಸಿ ಬಡಜನರಿಗೆ ಹಲವಾರು ಸ್ವಂತ ನಿವೆಶನ ಉಚಿತವಾಗಿ ನೀಡಿದ್ದಲ್ಲದೆ ಮನೆ ಕಟ್ಟಲಿಕ್ಕು ಆರ್ಥಿಕ ಸಹಾಯ ಮಾಡಿದ ಕರುಣಾಮಹಿ ಇವರಾಗಿದ್ದು ಕಾಂಗ್ರೇಸ್ ಪಕ್ಷದ ಗೌರವ ಹೇಚ್ಚಿಸಿದ ಗುರಮ್ಮ ಸಿದ್ದಾರಡ್ಡಿಯವರು ಅದೆ ದಾರಿಯಲ್ಲಿ ಸಾಗುತ್ತಿರುವ ಕಲಬುರ್ಗಿ ಬಿದರ್ ಜಿಲ್ಲೆಗಳಲ್ಲಿ ಡಾ. ಸಿದ್ದಾರೆಡ್ಡಿ ಫೌಂಡೇಶನ್ ಮುಖಾಂತರ ವೈದ್ಯಕೀಯ ವಿಧ್ಯಾರ್ಥಿಗಳಿಗೆ ಸಹಾಯಧನ ಸೇರಿದಂತೆ ವಿವಿದ ಕ್ಷೇತ್ರಕ್ಕೆ ಸಹಾಯ ಹಸ್ತ ಚಾಚಿದವರು ಯುನೈಟೆಡ್ ಆಸ್ಪತ್ರೆಯ ವಾರ್ಷಿಕೋತ್ವದ ಅಂಗವಾಗಿ ಉಚಿತ ಚಿಕಿತ್ಸಾ ಶಿಬಿರಗಳ ಮುಖಾಂತರ ಲಕ್ಷಕ್ಕು ಹೇಚ್ಚು ಬಡವರ ಚಿಕಿತ್ಸೆಯನ್ನು ಉಚಿತವಾಗಿ ಮಾಡಿದವರು ಬೀದರನಲ್ಲಿ ಸಿದ್ದಾರೆಡ್ಡಿ ಸ್ಕೌಟ್ಸ್ ಭವನಕ್ಕೆ ಬೆಲೆ ಬಾಳುವ ಎರಡು ನಿವೇಶನಗಳನ್ನು ದೇಣಿಗೆ ನೀಡಿ ಸ್ಕೌಟ್ ಭವನ ನಿರ್ಮಾಣಕ್ಕೆ ಕಾರಣೀಕರ್ತರಾದವರಾಗಿದ್ದು ಕಲಬುರ್ಗಿ ಲಿಂಗಾಯತ ಸಮುದಾಯದ ಬಡ ವಿದ್ಯಾರ್ಥಿನಿಯರ ಅಕ್ಕಮಹಾದೇವಿ ವಸತಿ ನಿಲಯಕ್ಕೆ ಅಪಾರ ದೇಣಿಗೆ ನೀಡಿದ್ದು ಅಲ್ಲದೆ ವಿಧ್ಯಾರ್ಥಿನಿಯರೆಲ್ಲರಿಗೂ ಉಚಿತ ಚಿಕಿತ್ಸೆ ಯ ಜವಾಬ್ದಾರಿಯನ್ನು ಹೊತ್ತಿದ್ದು ನುಡಿದಂತೆ ನಡೆ-ಯುತ್ತಿದ್ದಾರೆ. ಅಲ್ಲದೆ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರು ಬೀದರ್ ನಿಂದ ಲೋಕಸಬೆಗೆ ಸ್ಪರ್ದಿಸಿದಾಗ ಅವರನ್ನು ಗೆಲ್ಲಿಸುವಲ್ಲಿ ಇವರ ಕುಟುಂಬದ ಪಾತ್ರವೂ ಇದೆ ಎನ್ನುವುದು ಸರ್ವರಿಗೂ ಗೋತ್ತುರುವಂತ ವಿಷಯವಾಗಿದೆ. ವಿಶೇಷವಾಗಿ ಎಐಸಿಸಿ ಅಧ್ಯಕ್ಷರಾದ ಕಲ್ಯಾಣ ಕರ್ನಾಟಕದ ಮಣ್ಣಿನ ಮಗ ಡಾ.ಮಲ್ಲಿಕಾರ್ಜುನ್ ಖರ್ಗೆಜಿ ಅವರ ಮೇಲೆ ಅಪಾರ ಗೌರವ ಪ್ರೀತಿ ಅಭಿಮಾನ ಹೊಂದಿರುವ ಕುಟುಂಬವಾಗಿದೆ ವಿಶೇಷವಾಗಿ ಚಿತಾಪೂರ ಧಕ್ಷಿಣ ಉತ್ತರ ಜೇವರ್ಗಿ ಮತಕ್ಷೇತ್ರದಲ್ಲಿ ಇವರು ಪ್ರತಿಯೋಂದು ಚುನಾವಣೆಯಲ್ಲಿ ಸ್ವಯಂಪ್ರೇರಿತ ಪಕ್ಷಕ್ಕಾಗಿ ತನುಮನಧನ ಸೆವೆಯಿಂದ ದೂಡಿದವರಾಗಿರುವುದರಿಂದ ಪರಿಷತ್ ಗೆ ನಾಮನಿರ್ದೇಶನ ಮಾಡಬೇಕಾಗಿ ಎಐಸಿಸಿ ಅಧ್ಯಕ್ಷರಿಗೂ ಮುಖ್ಯಮಂತ್ರಿಗಳಿಗೂ ಕೆಪಿಸಿಸಿ ಅದಿಯಕ್ಷರುಗೂ ಕಲಬುರಗಿ ಉಸ್ತುವಾರಿ ಸಚಿವರಲ್ಲಿ ಕೆಕೆಆರ್ಡಿಬಿ ಅದ್ಯಕ್ಷರಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ.

## ಮಾದಕ ವಸ್ತುಗಳ ಮಾರಾಟ: ಮಹಿಳೆಯ ಬಂಧನ

• ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ

ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಪೋಲಿಸರು ಓರ್ವ ಮಹಿಳೆಯನ್ನು ಬಂಧಿಸಿದ್ದಾರೆ. ಬಂಧಿತ ಮಹಿಳೆಯನ್ನು ಬಾಪುನಗರದ ರೇವಮ್ಮ ಗಂಡ ದಿ. ಸಾಯಬಣ್ಣ ಕಟ್ಟಿಮನಿ (61) ಎಂದು ಗುರುತಿಸಲಾಗಿದೆ.

ಬ್ರಹ್ಮಪುರ ಪೋಲಿಸ್ ಠಾಣೆಯ ಪಿಐ ಮಹಾಂತೇಶ್ ಪಾಟೀಲ್ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಪರಶುರಾಮ್, ಉತ್ತಮ್, ಪ್ರಿಯಾ, ಗುರುನಾಥ ಅವರು ಶುಕ್ರವಾರ ನಗರದ ಬ್ರಹ್ಮಪೂರ್ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿನ ಬಾಪುನಗರ ಮಾಂಗರವಾಡಿ ಗಲ್ಲಿಯಲ್ಲಿ ಪರವಾನಿಗೆ ಇಲ್ಲದೇ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಮಹಿಳೆಯನ್ನು ಬಂಧಿಸಿದರು. ಬಂಧಿತಳಿಂದ ಸುಮಾರು 29,160ರೂ.ಗಳ ಮೌಲ್ಯದ ಹಾಗೂ 3.960ರೂ.ಗಳ ಮೌಲ್ಯದ ಒಟ್ಟು ಸುಮಾರು 33,120ರೂ.ಗಳ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಆರೋಪಿತಳ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

# ಜಿಲ್ಲಾಸ್ಪತ್ರೆಯಲ್ಲಿ ಬಡವರಿಗೂ ಸಿಕ್ಕಿತು ಅತ್ಯಾಧುನಿಕ ಚಿಕಿತ್ಸೆ



ವರ್ತಮಾನ-ವಿಜಯ
● ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು



ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವಲ್ಲಿ ವಿಜಯಪುರ ಜಿಲ್ಲಾ ಸರ್ಕಾರಿ ಆಸ್ಪತ್ರೆಯು ಮತ್ತೊಂದು ಮಹತ್ತರ ಮೈಲಿಗಲ್ಲನ್ನು ಸಾಧಿಸಿದೆ. ಹೌದು, ಖಾಸಗಿ ಆಸ್ಪತ್ರೆ , ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚವಾಗುವ ಅತ್ಯಂತ ಸಂಕೀರ್ಣವಾದ ಸೊಂಟದ ಕೀಲು ಬದಲಾವಣೆ ಮತ್ತು ಮೊಣಕಾಲು ಕೀಲು ಬದಲಾವಣೆ ಶಸ್ತ್ರಚಿಕಿತ್ಸೆಗಳನ್ನು ಇಲ್ಲಿನ ತಜ್ಞ ವೈದ್ಯರ ತಂಡವು ಯಶಸ್ವಿಯಾಗಿ ನೆರವೇರಿಸುವ ಮೂಲಕ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳ ಪಾಲಿಗೆ ದೇವರಂತಾಗಿದ್ದಾರೆ, ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕರಾದ ಶಿವಾನಂದ ಮಾಸ್ತಿಹೋಳಿಯವರ ಕಾರ್ಯಗಳು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಇತ್ತೀಚಿನ ದಿನಗಳಲ್ಲಿ ಕೀಲು ನೋವು ಮತ್ತು ಮೂಳೆ ಸವೆತದ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ವಿಜಯಪುರ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದ ತೀವ್ರ ಮೂಳೆ ಸವೆತ ಹಾಗೂ ಕೀಲು ಸಮಸ್ಯೆಯಿಂದಾಗಿ ನಡೆಯಲು ಅಸಹಾಯಕರಾಗಿದ್ದ ರೋಗಿಗಳಿಗೆ ಈ ಅತ್ಯಾಧುನಿಕ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಯಶಸ್ವಿಯಾಗಿ ಮಾಡಲಾಗುತ್ತಿದೆ.

ಜಿಲ್ಲಾಸ್ಪತ್ರೆಯ ನುರಿತ ಮೂಳೆ ರೋಗ ತಜ್ಞರಾದ ಡಾಕ್ಟರ್ ಜಿಲಾನಿ ಮತ್ತು ಡಾಕ್ಟರ್ ಹಾವಿನಾಳ ಮತ್ತು ಅರಿವಳಿಕೆ ತಜ್ಞರಾದ ಡಾ ಸಜ್ಜನ್ ಮತ್ತು ವೈದ್ಯಕೀಯ ಸಿಬ್ಬಂದಿಗಳ ಜಂಟಿ ಶ್ರಮದಿಂದ ಈ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಕಳೆದ ಆರು ತಿಂಗಳಿಂದ ಯಶಸ್ವಿಯಾಗಿ ನಡೆಸುತ್ತಿದ್ದು ಈವರೆಗೆ 44 ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.

ವಿಜಯಪುರ ಜಿಲ್ಲಾಸ್ಪತ್ರೆ ಕೇವಲ ಸಾಮಾನ್ಯ ಕಾಯಿಲೆಗಳಿಗಷ್ಟೇ ಸೀಮಿತವಾಗಿರದೆ, ಈಗ ಇಂತಹ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ, ರೋಗಿಗಳು ಶಸ್ತ್ರಚಿಕಿತ್ಸೆಯ ಲಾಭ ಪಡೆದುಕೊಳ್ಳಬೇಕು.

–ಶಿವಾನಂದ ಮಾಸ್ತಿಹೋಳಿ, ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರು.

ಬಡ ರೋಗಿಗಳಿಗೆ ವರದಾನವಾದ ಃಕಐ ಕಾರ್ಡ್ ಮತ್ತು ಆಯುಷ್ಮಾನ್ ಭಾರತ್-ಆರೋಗ್ಯ ಅಥವಾ ಸರ್ಕಾರಿ ಆರೋಗ್ಯ ಯೋಜನೆಗಳಡಿ ಅರ್ಹ ರೋಗಿಗಳಿಗೆ ಸಂಪೂರ್ಣ ಉಚಿತವಾಗಿ ಈ ಚಿಕಿತ್ಸೆ ನೀಡಲಾಗಿದ್ದು, ಕಡುಬಡವರಿಗೂ ಸುಧಾರಿತ ವೈದ್ಯಕೀಯ ಸೇವೆ ಲಭ್ಯವಾಗುವಂತಾಗಿದೆ.

**ರೋಗಿಗಳಲ್ಲಿ ಹೊಸ ಭರವಸೆ**

ದೀರ್ಘಕಾಲದ ಕೀಲು ನೋವಿನಿಂದ ಹಾಸಿಗೆ ಹಿಡಿದಿದ್ದ ರೋಗಿಗಳು ಶಸ್ತ್ರಚಿಕಿತ್ಸೆಯ ನಂತರ ಈಗ ಗುಣಮುಖರಾಗುತ್ತಿದ್ದು, ಯಾವುದೇ ಆಧಾರವಿಲ್ಲದೇ ಸ್ವತಂತ್ರವಾಗಿ ನಡೆಯುವಂತಾಗಿದ್ದಾರೆ. "ಖಾಸಗಿ ಆಸ್ಪತ್ರೆಗಳಲ್ಲಿ ಈ ಶಸ್ತ್ರಚಿಕಿತ್ಸೆಗೆ 3 ರಿಂದ 5 ಲಕ್ಷ ರೂಪಾಯಿಗಳ ವೆಚ್ಚವಾಗುತ್ತಿತ್ತು, ಆದರೆ ಜಿಲ್ಲಾಸ್ಪತ್ರೆಯ ವೈದ್ಯರ ಅತ್ಯಂತ ಕಾಳಜಿಯಿಂದ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಿ ನನಗೆ ಹೊಸ ಜೀವನ ನೀಡಿದ್ದಾರೆ," ಎಂದು ಚಿಕಿತ್ಸೆ ಪಡೆದ ರೋಗಿಯೊಬ್ಬರು ವೈದ್ಯರ ತಂಡಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ದಿನದಿಂದ ದಿನಕ್ಕೆ ಜಿಲ್ಲಾಸ್ಪತ್ರೆ ಪ್ರಗತಿಯ ಹಾದಿಯಲ್ಲಿ ಸಾಗುತ್ತಿದೆ ವಿಜಯಪುರ ಜಿಲ್ಲಾಸ್ಪತ್ರೆ ಕೇವಲ ಸಾಮಾನ್ಯ ಕಾಯಿಲೆಗಳಿಗಷ್ಟೇ ಸೀಮಿತವಾಗಿರದೆ, ಈಗ ಇಂತಹ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಉತ್ತರದ ಕರ್ನಾಟಕ ಭಾಗದ ಆರೋಗ್ಯ ವಲಯದಲ್ಲಿ ಒಂದು ದೊಡ್ಡ ಬದಲಾವಣೆಯಾಗಿದೆ. ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಆಸ್ಪತ್ರೆಯ ಇಡೀ ಸಿಬ್ಬಂದಿ ವರ್ಗದ ಈ ಸಾಧನೆಗೆ ಸಾರ್ವಜನಿಕ ವಲಯದಿಂದ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದ್ದು ಈ ಯಶಸ್ಸು ಮುಂಬರುವ ದಿನಗಳಲ್ಲಿ ಜನಸಾಮಾನ್ಯರು ಸರ್ಕಾರಿ ಆಸ್ಪತ್ರೆಯ ಮೇಲಿಟ್ಟಿರುವ ನಂಬಿಕೆಯನ್ನು ಬಲಪಡಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)